SAPTHAGIRI (KANNADA)
SPIRITUAL ILLUSTRATED MONTHLY
Volume:03, Issue: 10 Pages:56
May - 2024, Price Rs.20/-

ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ
ಮೇ 2024
ಬೆಲೆ ರೂ. 20/-



## ತಿರುಪತಿ
## ಶ್ರೀ ಗೋವಿಂದರಾಜ ಸ್ವಾಮಿಯವರ
## ಬ್ರಹ್ಮೋತ್ಸವಗಳು
## 2024 ಮೇ 16 ರಿಂದ 24 ರ ವರೆಗೆ

ಶ್ರೀ ಕ್ರೋಧಿನಾಮ ಸಂವತ್ಸರ ಯುಗಾದಿ ಹಬ್ಬದ (09-04-2024) ಪ್ರಯುಕ್ತ ತಿರುಮಲೆ ಸ್ವಾಮಿಯವರ ಆಲಯದಲ್ಲಿ ಯುಗಾದಿ ಆಸ್ಥಾನ ನಡೆಯಿತು. ನಂತರ ಪಂಚಾಂಗಗಳನ್ನು ತರುತ್ತಿರುವ ತಿ.ತಿ.ದೇ., ಶ್ರೀ ಶ್ರೀ ಶ್ರೀ ಪೆದ್ದ ಜೀಯರ್ ಮತ್ತು ಶ್ರೀ ಶ್ರೀ ಶ್ರೀ ಚಿನ್ನ ಜೀಯರ್ ಸ್ವಾಮಿಯವರು ಮತ್ತು ಅರ್ಚಕರು .


1


2




3


4


5


6


7

5. ಯುಗಾದಿ ಸಂದರ್ಭದಲ್ಲಿ ತಿರುಚಾನೂರು ಶ್ರೀಪದ್ಮಾವತಿ ಅಮ್ಮನವರಿಗೆ ನಡೆದ ಪುಷ್ಪ ಪಲ್ಲಕ್ಕಿ ಸೇವೆ.

6.ಶ್ರೀನಿವಾಸ ಮಂಗಾಪುರಂ, ಶ್ರೀ ಕಲ್ಯಾಣವೆಂಕಟೇಶ್ವರ ಸ್ವಾಮಿಯವರಿಗೆ ನಡೆದ ಯುಗಾದಿ ಆಸ್ಥಾನ ಮಹೋತ್ಸವ .

7. ತಿರುಪತಿ, ಶ್ರೀಕೋದಂಡರಾಮ ಸ್ವಾಮಿಯವರ ಆಲಯದಲ್ಲಿ ನಡೆದ ಯುಗಾದಿ ಆಸ್ಥಾನದಲ್ಲಿ ಪಾಲ್ಗೊಂಡ ತಿ.ತಿ.ದೇ., ಶ್ರೀ ಶ್ರೀ ಶ್ರೀ ಪೆದ್ದ ಜೀಯರ್ ಮತ್ತು ಶ್ರೀ ಶ್ರೀ ಶ್ರೀ ಚಿನ್ನ ಜೀಯರ್ ಸ್ವಾಮಿಯವರು .



ತಿ.ತಿ.ದೇ., ಶಿಕ್ಷಣ ಮತ್ತು ವೈದ್ಯಕೀಯ ಇಲಾಖೆಗೆ ನೂತನ ಸಂಯುಕ್ತಕಾರ್ಯ ನಿರ್ವಹಣಾಧಿಕಾರಿಯಾಗಿ ಶ್ರೀಮತಿ ಎಂ. ಗೌತಮಿ ಐ.ಎ.ಎಸ್., ರವರು 09-04-2024 ರಂದು ಪ್ರಮಾಣ ಸ್ವೀಕಾರ ಮಾಡಿದರು.

# ಭಗವದ್ಗೀತೆ

ಯಂ ಹಿ ನ ವ್ಯಥಯಂತ್ಯೇತೇ ಪುರುಷಂ ಪುರುಷರ್ಷಭ
ಸಮದುಃಖಸುಖಂ ಧೀರಂ ಸೋಽಮೃತತ್ವಾಯ ಕಲ್ಪತೇ

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -15)



ಅರ್ಜುನ, ಸುಖ- ದುಃಖಗಳಲ್ಲಿ ಒಂದೇ ತೆರನಾಗಿರುವ
ಯಾವ ಧೀರನನ್ನು ಇವು ವ್ಯಥೆಗೊಳಿಸುವುದಿಲ್ಲವೋ
ಅವನು ಮೋಕ್ಷಕ್ಕೆ ಯೋಗ್ಯನಾಗುತ್ತಾನೆ.



ದಯಮಾಡು ದಯಮಾಡು ಶ್ರೀನಿವಾಸ ಭವ
ಭಯ ನಿವಾರಣ ಭಜಕ ಭಕ್ತರಘನಾಶ
ನೇಮವೆನ್ನಲಿಲ್ಲ ನಾಮದರಿಕೆಯಿಲ್ಲ
ನಾ ಮಹಾಪಾಪಿಯು ಸ್ವಾಮಿ ನೀನೊಲಿದು ಗಡ


ಸದ್ಧರ್ಮ ಸರಕಿಲ್ಲ ಶುದ್ಧ ಬುದ್ಧಿಯಿಲ್ಲ
ಉದ್ಧರಿಸೆನ್ನನಿರುದ್ಧ ಹರಿ ಕರುಣೀ
ಸತ್ಕುಲ ಹೊಂದೇನು ಸತ್ಕರ್ಮ ಮಾರ್ಗಿಲ್ಲ
ಭಕ್ತ ರಕ್ಷಕ ಪಾಪಮುಕ್ತ ದೇವರ ದೇವ

ಅವಗುಣದೆಣಿಕೆಯ ವಿವರ ನೋಡದೆ ಅಯ್ಯ
ಜವನ ಬಲೆಯನು ತಪ್ಪಿಸುವ ಸರೀಸೃಪಶಯ್ಯ
ಅಜಾಮಿಳ ವ್ಯಾಧ ಆ ಗಜ ಅಹಲ್ಯೋದ್ಧರ
ನಿಜ ಪ್ರಸನ್ನವೆಂಕಟೇಶ ಸುಜನ ಪರಿಪೋಷ

- ಶ್ರೀ ಪ್ರಸನ್ನವೆಂಕಟೇಶ ವಿಟ್ಠಲ

(ಒಂಬತ್ತನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ನೈಸರ್ಗಿಕೇಣ ತರಸಾ ಕರುಣೇ ನಿಯುಕ್ತಾ ನಿಮ್ನೇತರೇಽಪಿ ಮಯಿ ತೇ ವಿತತಿರ್ಯದಿ ಸ್ಯಾತ್।**
**ವಿಸ್ಮಾಪಯೇದ್ವೃಷಗಿರೀಶ್ವರಮಪ್ಯವಾರ್ಯಾ ವೇಲಾತಿಲಂಘನ ದಶೇವ ಮಹಾಂಬುರಾಶೇಃ॥ 92॥**

ಹಿಂದಿನ ಪದ್ಯದಲ್ಲಿ ಆಚಾರ್ಯರು ತಮ್ಮಲ್ಲಿರುವ ದೋಷವನ್ನು ತಾವೇ ಹೇಳಿಕೊಳ್ಳುತ್ತ ಸರ್ವೇಶ್ವರನಾದ ಭಗವಂತನಲ್ಲಿ ತಾನು ಶರಣಾಗತನಾಗುವಂತೆ ಮಾಡಬೇಕೆಂದು ದಯಾದೇವಿಯನ್ನು ಪ್ರಾರ್ಥಿಸಿ, ಈ ಪದ್ಯದಲ್ಲಿ ದಯಾದೇವಿಯು ಹಾಗೆ ಮಾಡುವುದರ ಪರಿಣಾಮವನ್ನು ವಿಶದಪಡಿಸಿದ್ದಾರೆ. ಇಲ್ಲಿನವರೆಗೂ ಅಲ್ಪರೂ ಭಗವಂತನನ್ನು ಮರೆಯುವರೂ ಆದ ಅಪರಾಧಿ ಚೇತನರಲ್ಲಿಯೂ ಕೂಡ ಭಗವಂತನ ದಯೆಯು ಇದ್ದೇ ಇರುತ್ತದೆಯೆಂದೂ, ಈ ದಯೆಯ ಕಾರ್ಯವು ವಿವಿಧ ಚೇತನರ ವಿಷಯದಲ್ಲಿ ವಿವಿಧವಾಗಿರುತ್ತದೆಂದೂ ವಿವರಿಸಿದ್ದಾರೆ. ಅಂತಹ ಅತ್ಯಲ್ಪನಾದ ತನ್ನ ವಿಷಯದಲ್ಲಿಯೂ ಉಂಟಾಗಲೆಂಬ ಆಶೆಯನ್ನು ವ್ಯಕ್ತಪಡಿಸಿದ್ದಾರೆ. ದಯಾದೇವಿಯ ಅನುಗ್ರಹವುಂಟಾದರೆ ಅಸಾಧ್ಯವಾದದ್ದೂ ಸಾಧ್ಯವಾಗಿ ಆಶ್ಚರ್ಯಕರವಾದ ಪರಿಣಾಮವನ್ನುಂಟು ಮಾಡುತ್ತದೆ. ಇದನ್ನು ಸಮುದ್ರದ ದಡವನ್ನು ದಾಟುವ ದೃಷ್ಟಾಂತದ ಮೂಲಕ ಸ್ಪಷ್ಟಪಡಿಸಿದ್ದಾರೆ.

ಮಹಾಸಮುದ್ರದ ಒಂದು ದಡದಿಂದ ಇನ್ನೊಂದು ದಡಕ್ಕೆ ದಾಟಿ ಹೋಗುವುದು ಒಂದು ವೇಳೆ ಆಗುವುದಾದರೂ ದುಸ್ಸಾಧ್ಯವಾದ ಕೆಲಸ, ಮಧ್ಯೆ ಒದಗಿ ಬರುವ ಮೀನ ಮಕರಾದಿ ದುಷ್ಟಪ್ರಾಣಿಗಳಿಂದಲೂ ಮತ್ತು ಇತರ ವಿಧದಿಂದಲೂ ಉಂಟಾಗಬಹುದಾದ ಅನೇಕ ಎಡರು ತೊಡರುಗಳನ್ನು ನಿವಾರಿಸಿಕೊಂಡಾದರೂ ಮಹಾಸಮುದ್ರವನ್ನು ದಾಟಿಹೋಗುವ ಸ್ಥಿತಿಯೇನಾದರೂ ಕಂಡು ಬರುವ ಪಕ್ಷದಲ್ಲಿ ಅದು ಅತ್ಯಾಶ್ಚರ್ಯಕರವಾದ ಕೆಲಸವೇ ಆದೀತು. ಹಾಗೆಯೇ ಭಗವಂತನನ್ನೂ, ಅವನ ದಯೆಯನ್ನೂ ಸರ್ವ ವಿಧದಿಂದಲೂ ಮರೆತು ಯಾವುದಾದರೊಂದು ವಿಧದಿಂದ ಚೇತನನ ಉದ್ಧಾರ ಮಾಡೋಣವೆಂದು ನೋಡಿದರೂ ಏನಾದರೂ ಒಂದು ದೋಷವು ಇದ್ದೇ ಇರುವಂತಹ ನನ್ನಂಥ ಅಲ್ಪನನ್ನು ಉದ್ಧರಿಸುವುದೂ ಅಷ್ಟರಮಟ್ಟಿಗೇ ಆಶ್ಚರ್ಯಕರವಾದದ್ದೆಂದು ಭಾವವು. ಇಂತಹ ಅಸಾಧ್ಯವಾದ ಕೆಲಸವನ್ನು ತಾನು ಮಾಡಲು ಸಾಧ್ಯವಾಯಿತೇ ಎಂದು ತಾನೇ ಆಶ್ಚರ್ಯಪಡುವಂತೆ ಆಗುವುದೆಂದು ಭಗವಂತನನ್ನು ವರ್ಣಿಸಿ ಆಚಾರ್ಯರು ಭಗವಂತನ ದಯೆಯ ಪರಾಕಾಷ್ಠತೆಯನ್ನು ಚೆನ್ನಾಗಿ ವಿವರಿಸಿರುತ್ತಾರೆ. ಅತ್ಯಂತ ಅಲ್ಪನಾದವನಿಗೂ ಕೂಡ ಭಗವಂತನಲ್ಲಿ ಪ್ರಪತ್ತಿಯನ್ನಿಟ್ಟ ಪಕ್ಷದಲ್ಲಿ ಆಶ್ಚರ್ಯಕರವಾಗಿ ಉದ್ಧಾರವಾಗುವುದೆಂಬುದು ವಿವಕ್ಷಿತವಾಯಿತು.

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸ ಪತ್ರಿಕೆ

ಶ್ರೀಕ್ರೋಧಿ ನಾಮ ಸಂವತ್ಸರ ಚೈತ್ರ - ವೈಶಾಖ ಮಾಸ ಸಂಚಿಕೆ

ಸಂಪುಟ : 03 ಮೇ - 2024 ಸಂಚಿಕೆ : 10




ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ


**ಗೌರವ ಸಂಪಾದಕರು**
ಎ.ವಿ. ಧರ್ಮಾರೆಡ್ಡಿ, ಐ.ಡಿ.ಇ.ಎಸ್.
ಕಾರ್ಯನಿರ್ವಹಣಾಧಿಕಾರಿ,.(ಎಫ್.ಎ.ಸಿ.)
ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು , ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್,
ಸಹಾಯ ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.



**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ಓದಬಹುದು.


## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 06 |
| ಅಕ್ಷಯ ತೃತೀಯ | -ಶ್ರೀಮತಿ. ಕೆ.ವಿ. ಪದ್ಮಾವತಿ | 07 |
| ಸಾತನೂರಿನ ವಿಠಲ ದೇವಾಲಯ | -ಕೆಂಗೇರಿ ಚಕ್ರಪಾಣಿ | 10 |
| ಆಚಾರ್ಯ ರಾಮಾನುಜ ಪ್ರೇಮ ನಿವೇದನೆ | -ರಾ.ನ. ಮೂರ್ತಿ | 12 |
| ಶ್ರೀನರಸಿಂಹ ಸುದರ್ಶನ ವೈಭವ | -ಡಾ॥ ಗುರುರಾಜ ಪೋಶೆಟ್ಟಿಹಳ್ಳಿ | 14 |
| ಹಿಂದೂ ಧರ್ಮ ಪುನರುತ್ಥಾನಗೊಳಿಸಿದ ಆದಿಶಂಕರರು | -ಹನುಮಂತ ಮ. ದೇಶಕುಲಕರ್ಣಿ | 17 |
| ಪವಿತ್ರ ನರ್ಮದಾ ಪುಷ್ಕರ ಪರ್ವಕಾಲ | - ಡಾ॥ ಸುಮನ ಬದರೀನಾಥ್ | 20 |
| ಶ್ರೀ ವೇಂಕಟೇಶ್ವರಸ್ವಾಮಿ ಆಲಯ | -ದಿ॥ ಶ್ರೀನಿವಾಸನ್ ಬಿ.ಎನ್. | 23 |
| ಏಳು ಬೆಟ್ಟದ ಒಡೆಯನ ತಂಗಿ ತಿರುಪತಿ ತಾತಯ್ಯಗುಂಟ ಗಂಗಮ್ಮ ಜಾತ್ರೆ | -ಎಸ್. ವಸಂತ ಮಾಧವ | 31 |
| ಆರೋಗ್ಯ ಸಂರಕ್ಷಣೆಗೆ ತೇಜಪತ್ರೆ | -ಡಿ.ಎಸ್.ಬದ್ರಿನಾಥ್ | 34 |
| ನಮ್ಮಾಳ್ವಾರ್ ವೈಭವ | -ದಿ॥ ಎ. ಗೀತಾ ವೀರರಾಘವನ್ | 36 |
| ಸಂಸ್ಕೃತ ಕಲಿಯೋಣ | -ವಿ. ಪ್ರದೀಪ್ ಕುಮಾರ್ | 39 |
| ತಿರುಮಲೆ ಕಾಲಮಾನಾಚರಣೆಗಳು | - ಶ್ರೀಮತಿ | 40 |
| ಆಳ್ವಾರುಗಳು ಕಂಡ ತಿರುವೇಂಗಡ | -ಎಂ. ಆರ್. ನರಸಿಂಹನ್ | 42 |
| ಶ್ರೀವೆಂಕಟಾಚಲ ಮಹಾತ್ಮೆ | -ಶ್ರೀಮತಿ. ಎನ್.ಪಾರ್ವತಿ | 44 |
| ರಾಶಿ ಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ | 46 |
| ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು | - ಡಾ॥ ಅನಸೂಯ ಎಸ್. ರಾಜೀವ್ | 47 |
| ನೀತಿಕಥೆ - ಕಣ್ಣು ತೆರೆಸುವ ಮಕ್ಕಳು | - ಎ.ಆರ್. ರಘುರಾಮ | 48 |
| ಚಿತ್ರಕಥೆ -ಭಕ್ತರನ್ನು ನೋಯಿಸಿದರೆ | -ಡಾ॥ಕೆ. ರವಿಚಂದ್ರನ್ | 52 |


ಮುಖಚಿತ್ರ - ಶ್ರೀ ಭೂದೇವಿಯರೊಂದಿಗೆ ಶ್ರೀ ಗೋವಿಂದರಾಜಸ್ವಾಮಿಯವರು, ತಿರುಪತಿ

ಹಿಂಬದಿಚಿತ್ರ - ನಾರಾಯಣವನಂ, ಶ್ರೀ ಕಲ್ಯಾಣವೇಂಕಟೇಶ್ವರಸ್ವಾಮಿಯವರು


ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ



| | |
|---|---|
| ಬಿಡಿ ಪ್ರತಿ | ರೂ. 20/- |
| ವಾರ್ಷಿಕ ಚಂದಾ | ರೂ. 240/- |
| ಆಜೀವ ಚಂದಾ | ರೂ. 2400/- (12 ವರ್ಷಗಳು) |
| ವಿದೇಶಿ ವಾರ್ಷಿಕ ಚಂದಾ | ರೂ. 1030/- |

ಸಂಪಾದಕೀಯ

# ಅನ್ನದಾನ

**"ಅನ್ನಂ ಪರಬ್ರಹ್ಮಸ್ವರೂಪಂ"**ಎಂದು ಹಿರಿಯರು ಹೇಳುತ್ತಾರೆ. ಎಲ್ಲಕ್ಕಿಂತಲೂ ಶ್ರೇಷ್ಠವಾದ ದಾನ ಅನ್ನದಾನ! ಅನ್ನದಾನವನ್ನು ಮಾಡಿದವರು ದೇವಲೋಕದಲ್ಲಿ ಪೂಜಿಸಲ್ಪಡುತ್ತಾರೆ. ಪುರುಷಾರ್ಥ ಸಾಧನೆಗಳಿಗೆ ಅಗತ್ಯವಾದ ದೇಹವನ್ನು ಪೋಷಿಸುವುದು ಅನ್ನ! ಆಹಾರವು ಇಲ್ಲದಿದ್ದರೆ ಪ್ರಾಣಿಗಳು ನಾಶವಾಗಿ ಹೋಗುತ್ತವೆ. ಆದ್ದರಿಂದ ಅವರಿಗೆ ಸಕಲ ವಸ್ತುಗಳನ್ನೂ ದಾನ ಮಾಡಿದ ಫಲವು ದೊರೆಯುತ್ತದೆ. ಅನ್ನವನ್ನು ತಿಂದು ಆ ಶಕ್ತಿಯಿಂದ ಯಾರು ಪುಣ್ಯಕಾರ್ಯಗಳನ್ನು ಮಾಡುತ್ತಾರೋ, ಅದರಲ್ಲಿನ ಅರ್ಧ ಪುಣ್ಯವನ್ನು ಅನ್ನದಾನ ಮಾಡಿದವರು ಪಡೆಯುತ್ತಾರೆ. ಉಳಿದ ಅರ್ಧಭಾಗ ಆ ಕೆಲಸ ಮಾಡಿದವರಿಗೆ ದಕ್ಕುತ್ತದೆ ಎಂದು ನಮ್ಮ ಹಿರಿಯರು ಹೇಳುತ್ತಾರೆ.

''ಮಾನವ ಸೇವೆಯೇ ಮಾಧವ ಸೇವೆ'' ಎಂಬ ನಾಣ್ನುಡಿಯನ್ನು ಎಲ್ಲರೂ ಕೇಳಿದ್ದೇವೆ. ಹಸಿವೆಯಿಂದ ಬಳಲುತ್ತಿರುವವರಿಗೆ ಅನ್ನವನ್ನು ನೀಡುವುದೆನ್ನುವ ಸೇವೆ ಒಂದು ಯಜ್ಞವನ್ನು ಮಾಡಿದ ಫಲವನ್ನು ನೀಡುತ್ತದೆ. ಮನುಷ್ಯರನ್ನು ಊಟದ ಮೂಲಕವೇ ಸಂತೃಪ್ತಿಪಡಿಸಬಲ್ಲೆವು. ಎಷ್ಟೇ ಬಂಗಾರ, ವಸ್ತ್ರಗಳನ್ನು ನೀಡಿದರೂ ಆಸೆ ಮತ್ತಷ್ಟು ಬಲಗೊಳ್ಳುತ್ತದೆ. ಅವುಗಳನ್ನು ಇನ್ನೂ ಇನ್ನೂ ಬೇಕೆಂದು ಬಯಸುತ್ತಾರೆ. ಆದರೆ ಅನ್ನದಾನದ ಮೂಲಕ ಮಾತ್ರ ಮನುಷ್ಯನ ಬಾಯಲ್ಲಿ ಸಾಕು ಎನ್ನುವ ಪದವನ್ನು ಕೇಳಿಸಿಕೊಳ್ಳಬಹುದು. ಅನ್ನದಾನದಿಂದ ತ್ರಿಲೋಕಗಳಲ್ಲೂ ಯಶಸ್ಸು, ತೇಜಸ್ಸು, ಬಲ ಎಲ್ಲವೂ ಒಲಿದು ಬರುತ್ತವೆಂದು ಹೇಳಲಾಗುತ್ತದೆ. ಅನ್ನದಾನ ಮಾಡಿದವರು ಸ್ವರ್ಗದಲ್ಲಿ ಪ್ರಥಮ ಪ್ರವೇಶವನ್ನು ಪಡೆಯುತ್ತಾರೆಂದು ವೇದಗಳಲ್ಲಿ ತಿಳಿಸಲಾಗಿದೆ. ಆ ಸೂಕ್ತಿಯನ್ನು ತಿರುಮಲೆ ತಿರುಪತಿ ದೇವಸ್ಥಾನದವರು ಅಕ್ಷರಶಃ ಕಾರ್ಯರೂಪಕ್ಕೆ ತಂದಿದ್ದಾರೆ.

ದೇವಸ್ಥಾನದಲ್ಲಿ ಪ್ರಸಾದಗಳನ್ನು ವಿನಿಯೋಗ ಮಾಡುವುದರಲ್ಲೇ ಇಹ-ಪರ ಎರಡೂ ಅಡಗಿದೆ. ಪೂಜಾದಿಗಳನ್ನು ನೆರವೇರಿಸುವವರಿಗೆ ದೇವಾಲಯಗಳಿಗೆ ಬರುವ ಭಕ್ತರಿಗೆ ಪ್ರಸಾದವನ್ನು ವಿತರಿಸುವುದು ಸನಾತನ ಸಂಪ್ರದಾಯವಾಗಿದೆ. ಕೆಲವು ಉತ್ಸವಗಳು ಅನ್ನದಾನಕ್ಕೆ ಸಂಬಂಧಿಸಿವೆ. ತಿರುಮಲೆಯಲ್ಲಿ ''ತಿರುಪ್ಪಾವಡ'' ಎನ್ನುವ ಸೇವೆ ಈ ರೀತಿಯದ್ದೇ ಆಗಿದೆ.

ತಿರುಮಲೆಯ ಕ್ಷೇತ್ರದಲ್ಲಿ ಭಕ್ತರ ಹಸಿವೆಯನ್ನು ನೀಗಿಸುವುದಕ್ಕೆ ಸಾಳುವ ನರಸಿಂಹರಾಯ ಅನ್ನದಾನದ ಛತ್ರಗಳನ್ನು ನಿರ್ಮಿಸಿದ. ಶ್ರೀಕಂದಾಡೈ ರಾಮಾನುಜ ಅಯ್ಯಂಗಾರ್ ಅವರ ನೇತೃತ್ವದಲ್ಲಿ ''ರಾಮಾನುಜಕೂಟಗಳು'' ಏರ್ಪಟ್ಟವು. ಈ ರೀತಿ ಪ್ರಪಂಚದಲ್ಲೇ ಅತ್ಯಂತ ದೊಡ್ಡ, ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ತಿರುಮಲೆ ತಿರುಪತಿ ದೇವಸ್ಥಾನಗಳು ಬಹಳ ಕಾಲಗಳಿಂದಲೂ ಶ್ರೀನಿವಾಸನ ಭಕ್ತರಿಗೆ ಅನ್ನದಾನವನ್ನು ಮಾಡುತ್ತಾ ಮಾನವಸೇವೆಯಲ್ಲಿ ಧನ್ಯರಾಗುತ್ತಿದ್ದಾರೆ.

ಈ ಸನಾತನ ಸಂಪ್ರದಾಯವನ್ನು ಮುಂದುವರೆಸುತ್ತಾ ತಿರುಮಲೆ ತಿರುಪತಿ ದೇವಸ್ಥಾನದವರು ಈ ಪವಿತ್ರವಾದ ಕೆಲಸವನ್ನು 06-04-1985 ನೆ ಇಸವಿಯಲ್ಲಿ ಪ್ರಾರಂಭಿಸಿದರು. ಎರಡು ಸಾವಿರ ಭಕ್ತರೊಂದಿಗೆ ಪ್ರಾರಂಭವಾದ ಈ ಯೋಜನೆ ಕ್ರಮೇಣ ಹೆಮ್ಮರದಂತೆ ಬೆಳೆದಿವೆ. ಈ ಹಿಂದೆ ಶ್ರೀನಿವಾಸನ ದೇವಸ್ಥಾನದಲ್ಲಿ ಸ್ವಾಮಿಯನ್ನು ದರ್ಶಿಸಿದ ಭಕ್ತರಿಗೆ ಮಾತ್ರ ಈ ಅನ್ನಪ್ರಸಾದವನ್ನು ನೀಡಲಾಗುತ್ತಿತ್ತು. ಆದರೆ 2006 ನೆಯ ಇಸವಿಯಿಂದ ಅಂದಿನ ಪಾಲಕ ಮಂಡಲಿಯ ಅಧ್ಯಕ್ಷರು ಶ್ರೀಹರಿಯ ದರ್ಶನದೊಂದಿಗೆ ಸಂಬಂಧವಿಲ್ಲದೆ ತಿರುಮಲೆಗೆ ಬರುವ ಎಲ್ಲಾ ಭಕ್ತಾದಿಗಳಿಗೆ ಶ್ರೀ ಹರಿಯ ಪ್ರಸಾದ ಭೋಜನ ಸೌಕರ್ಯವನ್ನು ಪ್ರಾರಂಭಿಸಿತು.

ನಂತರ ತಿ.ತಿ.ದೇ ಸಾಧಿಕಾರ ಮಂಡಲಿಯು ನಿತ್ಯಾನ್ನದಾನದ ನೂತನ ಸಮುದಾಯ ಭವನವನ್ನು ಪ್ರಾರಂಭಿಸಿತು. ಆಗ ತಿರುಮಲೆಗೆ ಬರುತ್ತಿದ್ದ ಭಕ್ತರಿಗೆ ಎಲ್ಲಾ ಸಮಯದಲ್ಲೂ ಅನ್ನದಾನವನ್ನು ಮಾಡಿದ ಭಕ್ತ ಯೊಗಿನಿಯಾದ ''ಮಾತೃಶ್ರೀ ತರಿಗೊಂಡ ವೇಂಗಮಾಂಬ''ರ ಹೆಸರನ್ನು ಈ ಅನ್ನದಾನ ಸಮುದಾಯಕ್ಕೆ ಇರಿಸಿ ಸದಾಚಾರದ ಸಂಸ್ಕೃತಿಯನ್ನು ಮುಂದುವರೆಸಿದೆ. ಈ ಅನ್ನದಾನದ ಸಂಪ್ರದಾಯವನ್ನು ವಿಸ್ತರಿಸಿ ಈಗ ತಿರುಚಾನೂರು, ಶ್ರೀ ಪದ್ಮಾವತಿ ಅಮ್ಮನವರ ದೇವಸ್ಥಾನದಲ್ಲೂ ನಿತ್ಯಾನ್ನದಾನ ಯೋಜನೆಯನ್ನು ಪ್ರಾರಂಭಿಸಿದರು. ಈಗ 29-02-2024 ರಿಂದ ತಿರುಪತಿಯಲ್ಲಿನ ಶ್ರೀ ಗೋವಿಂದ ರಾಜಸ್ವಾಮಿಯ ಆಲಯದಲ್ಲೂ ಪ್ರತಿದಿನ ಬೆಳಿಗ್ಗೆ 11-00 ರಿಂದ ಸಂಜೆ 4-00 ಗಂಟೆಯವರೆಗೂ ಈ ನಿತ್ಯಾನ್ನದಾನವನ್ನು ಪ್ರಾರಂಭಿಸಿದೆ. ಭಕ್ತರೆಲ್ಲರೂ ತಿ.ತಿ.ದೇ ಕಲ್ಪಿಸಿರುವ ಈ ಸದವಕಾಶವನ್ನು ಸದ್ವಿನಿಯೋಗ ಮಾಡಿಕೊಳ್ಳಬೇಕೆಂದು ತಿ.ತಿ.ದೇ., ಬಯಸುತ್ತಿದೆ.

# ಅಕ್ಷಯ ತೃತೀಯ

- ಶ್ರೀಮತಿ. ಕೆ.ವಿ. ಪದ್ಮಾವತಿ

ಭಾರತೀಯ ಹಬ್ಬಗಳಲ್ಲಿ ಅಕ್ಷಯ ತೃತೀಯಾಕ್ಕೆ ಪ್ರತ್ಯೇಕ ಸ್ಥಾನವಿದೆ. ಅಂದು ಶುಭಗ್ರಹಗಳೆಲ್ಲದರ ಅನುಗ್ರಹವೂ ಒದಗುವ ಅತ್ಯಂತ ಪ್ರಶಸ್ತ ದಿನವೆಂದು ನಂಬಿಕೆ. ಯುಗಾದಿ ಪರ್ವದಂತೆಯೇ ಅಕ್ಷಯ ತೃತೀಯಾವೂ ಶುಭಮಂಗಳ ಕಾರ್ಯಗಳ ಆರಂಭಕ್ಕೆ, ಅಕ್ಷರಾಭ್ಯಾಸಕ್ಕೆ, ಉಪನಯನ-ವಿವಾಹಾದಿಗಳಿಗೆ,ಚಿನ್ನ ಖರೀದಿಗೆ, ಹಣ ಹೂಡಿಕೆ,ವ್ಯಾಪಾರ ವ್ಯವಹಾರಗಳ ಶುಭಾರಂಭ ಇತ್ಯಾದಿಗಳಿಗೆ ಪ್ರಶಸ್ತ ದಿನವೆಂದು ಪ್ರತೀತಿ. ಈ ಬಾರಿಯ ಅಕ್ಷಯ ತೃತೀಯದಂದು ಸೌಖ್ಯ, ಸಂಪತ್ಸಮೃದ್ಧಿಗಳು ನಿಮ್ಮ ಪಾಲಿಗೆ ಒದಗಿ ಸದಾ ಸರ್ವದಾ ಅಕ್ಷಯವಾಗಲೆಂಬ ಹಾರೈಕೆಯೊಂದಿಗೆ ಈ ವಿಶೇಷ ಬರಹ.

ಬಹುಮುಖವುಳ್ಳ ಪ್ರಕೃತಿ ಶಕ್ತಿಯ ಒಂದೊಂದು ಅಂಶವೂ ಒಂದೊಂದು ದೇವತೆಯೆಂಬುದು ಮಾನವನ ಕಲ್ಪನೆಯಾಗಿದೆ. ಫಲಾಪೇಕ್ಷೆಯುಳ್ಳ ಮಾನವನಿಗೆ ಆ ದೇವತೆಗಳಲ್ಲಿ ಅಪಾರ ನಂಬಿಕೆ. ನಿರ್ದಿಷ್ಟ ದೇವತೆಯನ್ನು ಭಕ್ತಿ ಪೂರ್ವಕವಾಗಿ ಆರಾಧಿಸಿದರೆ, ಇಷ್ಟಾರ್ಥ ಸಿದ್ಧಿಸುವುದೆಂಬುದು ಅವನ ಗ್ರಹಿಕೆಯಾಗಿದೆ. ವೇದಕಾಲದಿಂದಲೂ ಜನರು ವಿದ್ಯಾ ದೇವತೆ ಶಾರದೆ, ಐಶ್ವರ್ಯ ದೇವತೆಯಾದ ಶ್ರೀಲಕ್ಷ್ಮೀ , ದುಷ್ಟ ಸಂಹಾರಿ ದುರ್ಗೆಯನ್ನು ಉಪಾಸಿಸುತ್ತಾ ಬಂದಿದ್ದಾರೆ. ಪೌರಾಣಿಕ ಗ್ರಂಥಗಳಲ್ಲಿ, ತಾಂತ್ರಿಕ ಗ್ರಂಥಗಳಲ್ಲಿ ಉಪಾಸನೆ, ಪೂಜಾ ಕ್ರಮಗಳು ಪ್ರತಿಪಾದಿಸಲ್ಪಟ್ಟಿದೆ. ಭಾರತೀಯ ಸ್ತ್ರೀಯರಂತೂ ತಮ್ಮ ಸೌಭಾಗ್ಯವರ್ಧನೆಗೆ, ಮುತ್ತೈದತನಕ್ಕೆ, ಸಕಲ ಸಂಪತ್ತಿಗೆ, ಮನೆಯ ಸುಖಶಾಂತಿಗೆ ಶ್ರೀಮಹಾ ಲಕ್ಷ್ಮೀಯ ಪೂಜೆಯನ್ನು ಸದಾ ಕಾಲ, ಸಾರ್ವತ್ರಿಕವಾಗಿ ಒಂದಿಲ್ಲೊಂದು ರೀತಿಯಲ್ಲಿ ಪೂಜಿಸುತ್ತಾ ಬಂದಿದ್ದಾರೆ.



ಭೃಗು ಮಹರ್ಷಿಯಲ್ಲಿ ಪತ್ನಿ ಖ್ಯಾತಿ ಎಂಬವಳ ಪುತ್ರಿಯಾಗಿ ಅವತರಿಸಿ,ವೈವಸ್ವತ ಮನ್ವಂತರದಲ್ಲಿ, ಕ್ಷೀರಸಾಗರ ಕನ್ಯೆಯಾಗಿ, ಕ್ಷೀರಸಾಗರ ಮಂಥನ (ಸಮುದ್ರ ಮಂಥನ) ಕಾಲದಲ್ಲಿ ದಿವ್ಯ ಕಾಂತಿ ಸೂಸುವ ಶ್ರೀದೇವಿ ಕಮಲಪಾಣಿಯಾಗಿ ಅರಳು ತಾವರೆಯ ಮೇಲೆ ಕುಳಿತು, ಮೂಡಿ ಬಂದು ಶ್ರೀಹರಿಯ ಹೃದಯದಲ್ಲಿ ಹೋಗಿ ನೆಲೆಸಿದಳು ಎಂದು ವಿಷ್ಣು ಪುರಾಣದಲ್ಲಿ ಪ್ರಸ್ತಾಪವಿದೆ. ಕಮಲದಲ್ಲಿ ವಾಸ, ಕೈಯಲ್ಲಿ ಕಮಲ, ಕಮಲದಂಥ ಕಣ್ಣು, ಕಮಲದಂಥ ಮುಖ, ಕಮಲನಾಭನ ಪ್ರಿಯ ಪತ್ನಿ ಎಂದು 'ಶ್ರೀಸೂಕ್ತ'ದಲ್ಲಿ ಈಕೆಯನ್ನು ಸ್ತುತಿಸಲಾಗಿದೆ.

ಶ್ರೀಮನ್ನಾರಾಯಣನ ಅಂಶಗಳಿಂದ ಅವತರಿಸಿದಂತೆಲ್ಲಾ ಶ್ರೀ ಲಕ್ಷ್ಮೀ ಕೂಡ ಅಂಥದೇ ರೂಪವನ್ನು ತಾಳಿದಳು. ಭಗವಂತನು ಆದಿತ್ಯನಾದಾಗ ಪದ್ಮೆಯಾಗಿ, ಭಾರ್ಗವನಾದಾಗ ಧರಣಿಯಾಗಿ, ರಾಮನಾಗಿ ಬಂದಾಗ ಸೀತೆಯಾದಳು. ಕೃಷ್ಣಾವತಾರದಲ್ಲಿ ರುಕ್ಮಿಣಿಯಾದಾಗ ಭಗವಂತನ ಸಂಗಾತಿಯಾದಳು. ಭಗವಂತ ಯಾವ ರೂಪ ತಾಳಿದರೂ ಅದಕ್ಕೆ ಅನುಗುಣವಾದ ರೂಪ ಶ್ರೀಲಕ್ಷ್ಮೀಯದು.

## ವಿರಾಟ್ ವಿಶ್ವರೂಪ

ಸಾತ್ತ್ವಿಕ ಶಕ್ತಿ ಶಾರದೆ, ರಾಜಸ ಶಕ್ತಿ ಲಕ್ಷ್ಮೀ, ತಾಮಸ ಶಕ್ತಿ ಕಾಳಿಯಾಗುತ್ತಾಳೆ. ಸೃಷ್ಟಿಗೆ ರಾಜಸ, ಸಾತ್ತ್ವಿಕ, ತಾಮಸ ಶಕ್ತಿ ಉಪಯುಕ್ತವಾದವು. ಕೀರ್ತಿ, ಬುದ್ಧಿ,ಹಸಿವು, ಬಲ, ತೃಷ್ಣಾ, ಕ್ಷಾಂತಿ, ತುಷ್ಟಿ ಇವೆಲ್ಲಾ ಶಕ್ತಿಯ ಅಂಶಗಳು ಎಂದು ''ಭಾರ್ಗವ ಸಂಹಿತೆ''ಯಲ್ಲಿ ಹೇಳಿದೆ. ಶ್ರೀಲಕ್ಷ್ಮೀಯನ್ನು ಶ್ರೀಸೂಕ್ತದ ಒಂದೊಂದು ಋಕ್ಕಿನಿಂದ ಮಲ್ಲಿಗೆ, ಶ್ವೇತಕಮಲ, ಜಾಜಿ, ಮಂದಾರ ಹೂಗಳಿಂದ ಒಂದೊಂದು ಥರ ಪೂಜಿಸಿ, ಶ್ರೀಸೂಕ್ತ ಪಠಣ ವಿಧಾನದಿಂದ ಆರಾಧಿಸಿದರೆ ಸಕಲೈಶ್ವರ್ಯ ಪ್ರಾಪ್ತಿಯಾಗುವುದೆಂದು ಪದ್ಮ

ಪುರಾಣದಲ್ಲಿ ವಿವರಣೆ ಇದೆ. ಕರ್ಮಜೀವಿಯಾಗಿ ತನ್ನ ಸ್ವಂತ ಪರಿಶ್ರಮಗಳಿಂದ ನಿಲ್ಲಲ್ಲು ಹವಣಿಸುವ ಪೌರುಷವುಳ್ಳ ಪುರುಷನನ್ನು ಅವಳು ಸದಾಕಾಲ ಅನುಗ್ರಹಿಸುತ್ತಾಳೆ ಎಂದು ಮತ್ಸ್ಯಪುರಾಣ ಹೇಳುತ್ತದೆ. ಹೀಗೆ ಕೇನ, ತೈತ್ತಿರೀಯ ಉಪನಿಷತ್ತು, ದೇವೀ ಭಾಗವತ, ಸಪ್ತಶತೀ, ದೇವಿ ಸೂಕ್ತ, ದುರ್ಗಾ ಸೂಕ್ತ, ಶ್ವೇತಾಶ್ವತರ ಉಪನಿಷತ್‌ಗಳೆಲ್ಲ ಶ್ರೀದೇವಿಯ ಆರಾಧನಾ ಮಹತ್ತ್ವವನ್ನು ಸಾರುತ್ತವೆ.

ಅಕ್ಷಯ ತೃತೀಯಾವೆಂದರೆ ಈಗ ವ್ಯಾವಹಾರಿಕ ಸುವರ್ಣಯುಗದ ಘಟ್ಟವಾದರೆ, ಪ್ರಾಚೀನ ಕಾಲ ಘಟ್ಟದಲ್ಲಿ ವಿಜೃಂಭಿಸಿದ ಗೋಸಂಪತ್ತು, ಧಾನ್ಯ ಸಂಪತ್ತಿನ ಮೂಲಕ ಋಷಿಮುನಿಗಳು, ಅರಸರು ಸಂಪತ್ತಿನ ಒಡೆಯ ರಾಗಲು ಹರಸಾಹಸ ಮಾಡಿದ ಅನೇಕ ನಿದರ್ಶನಗಳು ಪುರಾಣ ಗ್ರಂಥಗಳಲ್ಲಿ ಸಿಗುತ್ತವೆ.

ಉಪಾಸನೆಯಿಂದ ಸುಖ,ಸಮೃದ್ಧಿ ಹಾಗೂ ಸೌಭಾಗ್ಯ ಕೌಟುಂಬಿಕವಾಗಿ, ಸಾಂಸಾರಿಕವಾಗಿ, ಮಹಾಲಕ್ಷ್ಮೀ ವ್ರತದ ಉಪಾಸನೆಯಿಂದ ಮುತ್ತೈದೆಯರಿಗೆ ಮಾಂಗಲ್ಯ ಭಾಗ್ಯ, ಪತೀ, ಪುತ್ರ, ಬಾಂಧವರಿಂದ ಸೌಖ್ಯ, ಋಣರೋಗ ದಾರಿದ್ರ್ಯ, ನಿವಾರಣೆ ಪಾಪ, ಅಪಮೃತ್ಯು, ಭಯ, ಶೋಕ, ಮನಸ್ತಾಪಗಳಿಂದ ವಿಮೋಚನೆ ಎಂದು ಭವಿಷ್ಯತ್ ಪುರಾಣದಲ್ಲಿ ಭೃಗು ಋಷಿಯ ಉಲ್ಲೇಖವಿದೆ.



ಹಾಗೆ ಶ್ರೀಲಕ್ಷ್ಮೀಯ ಉಪಾಸನೆಯಿಂದ ಯಶಸ್ಸು ಸಕಲ ಧನ ಧಾನ್ಯಾದಿ ಪುರುಷಾರ್ಥಗಳ ಸಿದ್ಧಿ.ಪತ್ನಿ,ಪುತ್ರ ಭೃತ್ಯರಿಂದ ಸೌಖ್ಯ, ಸಂಪದಭಿವೃದ್ಧಿ ಸಾಧ್ಯ ಎಂದು ಪುರಾಣಗಳು ಸಾರುತ್ತವೆ.

ಶ್ರೀ ಸೂಕ್ತದ ಫಲಶ್ರುತಿ ಭಾಗದಲ್ಲಿ 'ನ ಕ್ರೋಧೋ ನ ಚ ಮಾತ್ಸರ್ಯಂ। ನ ಲೋಭೋ ನಾ ಶುಭಾ ಮತಿಃ। ಭವನ್ತಿ ಕೃತ ಪುಣ್ಯಾನಾಂ ಭಕ್ತಾನಾಂ ಶ್ರೀ ಸೂಕ್ತ ಜಾಪಿನಾಮ್ ಎಂಬ ಅಭಯ ವಾಕ್ಯವಿದೆ.

ಶ್ರೀ ಸೂಕ್ತವನ್ನು ಭಕ್ತಿ ಪುರಸ್ಸರವಾಗಿ ಜಪಿಸುವ ಪುಣ್ಯಾತ್ಮರಾದ ಜನರಿಗೆ ಸಿಟ್ಟು ಹೊಟ್ಟೆ ಕಿಚ್ಚು ಅತ್ಯಾಸೆ ಹಾಗೂ ಕೆಟ್ಟ ಬುದ್ಧಿ ಉಂಟಾಗಲಾರದು ಎಂದರ್ಥ.

ಮಹಾಲಕ್ಷ್ಮೀಯು ಸಂಪತ್ಸಮೃದ್ಧಿಯ ಅಧಿದೇವತೆ. ಈ ದೇವಿಯ ಸಾಂಕೇತಿಕ ರೂಪವೇ ತುಂಬಿದ ಕಲಶ. ಕಲಶ ಸ್ಥಾಪನೆಯ ಅನಂತರ ಮಂತ್ರ ಪೂರ್ವಕವಾಗಿ ಶ್ರೀ ಮಹಾಲಕ್ಷ್ಮೀಯನ್ನು ಆವಾಹಿಸಿ, ಪೂಜಿಸುವುದು ಪದ್ಧತಿ. ಇಲ್ಲಿ ಕಲಶವು ಸಮೃದ್ಧಿಯ ಪ್ರತೀಕವಾಗಿ ಪೂಜೆ ಮಾಡುವ ಸಂಪ್ರದಾಯ ಬೆಳೆದು ಬಂದಿದೆ. ಇದು ಅಮೂರ್ತ ಕಲ್ಪನೆ.

### ಅಕ್ಷಯ ತೃತೀಯಾದ ಆಶಯ

ಸೌಭಾಗ್ಯವತಿಯರ ಹಣೆಯ ಬೈತಲೆಯ ಮುಂಭಾಗದಲ್ಲಿ 'ಲಕ್ಷ್ಮೀ ವರ್ಸತು' ದೇವಿ ವಾಸವಾಗಿದ್ದಾಳೆ ಎಂಬ ನಂಬಿಕೆ ಇದೆ. ವೈಶಾಖ ಶುಕ್ಲಪಕ್ಷದ ತೃತೀಯೆಯ ದಿನವನ್ನು ಅಕ್ಷಯ ತೃತೀಯವಾಗಿ ಆಚರಿಸುವ ಸಂಪ್ರದಾಯವಿದೆ.

ಮುಖ್ಯವಾಗಿ ನಮ್ಮ ಜೀವನ ವಿಧಾನದಲ್ಲಿ ಪರಸ್ಪರ ಒಲುಮೆ,ಪ್ರೀತಿ ವಿಶ್ವಾಸಗಳೆಂಬ ಮಾನವೀಯ ಮೌಲ್ಯಗಳು ಹಾಸುಹೊಕ್ಕಾಗಿರಬೇಕು. ಸದಾಚಾರ ಸಂಪನ್ನರಿಗೆ ಮಾತ್ರ ಈ ವ್ರತದ ಮಹತ್ತ್ವ ಏನೆನ್ನುವುದು ತಿಳಿಯುತ್ತದೆ. ಈ ಕಲಿಯುಗವು ಸಕಲ ಪಾಪಗಳ ಭಂಡಾರವೇ ಆಗಿದ್ದರೂ ಇದರಲ್ಲಿ ಒಂದು ದೊಡ್ಡ ಗುಣವೂ ಇದೆ. ಅದೇ ಭಕ್ತಿ ಭಾವ, ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನು ಪತ್ರಂ, ಪುಷ್ಪಂ, ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ॥ ಎಂದ ಎಲ್ಲದರಲ್ಲಿಯೂ ಎಲ್ಲೆಲ್ಲೂ ಶ್ರೀದೇವರನ್ನು ಕಂಡರೆ ಅಹಂಕಾರ, ಮಮಕಾರ, ಅಹಂಭಾವಗಳು ನೀಗುತ್ತವೆ. ಶ್ರೀದೇವರ ನಾಮಸ್ಮರಣೆ ಮಾಡುವುದಕ್ಕೆ ಅಡ್ಡಿ ಆತಂಕಗಳು ಇರುವುದಿಲ್ಲ. ಮಡಿ ಮೈಲಿಗೆಗಳು ಇರುವುದಿಲ್ಲ. ಕೂತಲ್ಲಿ, ನಿಂತಲ್ಲಿ ಎಲ್ಲಿ ಬೇಕಾದರೂ ಭಗವಂತನ ಸ್ಮರಣೆ ಮಾಡ ಬಹುದು. ನಿಷ್ಕಲ್ಮಷ ಭಾವ ಮನಸ್ಸು ಸಾಕು. ಸ್ಮರಣೆಗೆ ಆಚಾರ ವಿಚಾರಗಳು, ಸೂತಕಗಳು ಇರುವುದಿಲ್ಲ. ನಾಮ ಸ್ಮರಣೆಯಿಂದ ಅನೇಕ ಜನ್ಮದ ಪಾಪಗಳು ನಾಶವಾಗುತ್ತವೆ.

ಪಾಪಕರ್ಮಗಳಲ್ಲಿ ಕಾಯಿಕ, ವಾಚಕ, ಮಾನಸಿಕ ಎಂದು ಮೂರು ಬಗೆಗಳು ಪಾಪಗಳನ್ನು ನಾಮಸ್ಮರಣೆಯೊಂದ ರಿಂದಲೇ ತೊಲಗಿಸಬಹುದು.

ಈ ನರಜನ್ಮದಲ್ಲಿ ಪಾಪ ಪುಣ್ಯಗಳ ಪರಿಕಲ್ಪನೆ ವಿಶೇಷವಾಗಿದೆ. ಬೇಕು, ಮತ್ತಷ್ಟು ಬೇಕು ಎಂಬ ಆಶಾಪಾಶದಲ್ಲಿ ಸಿಕ್ಕಿ ತೊಳಲುವುದೇ ಪಾಪ. ಈ ಆಶಾಪಾಶವನ್ನು ಹರಿದು, ಪರಮಾತ್ಮನಲ್ಲಿ ಒಂದಾಗುವುದೇ ವ್ರತಗಳ ಮುಖ್ಯ ಉದ್ದೇಶ. ಇದು ಆಡಂಬರಕ್ಕೆ ಡಂಭಾಚಾರಕ್ಕೆ ಕಾರಣವಾಗದಂತೆ ಗಮನ ಇರಿಸಬೇಕು. 'ವಿಷ್ಣುಪುರಾಣ'ದಲ್ಲಿ ಒಂದು ಮಾತು ಹೀಗಿದೆ. ಯಾವುದೂ ದುಃಖಕ್ಕಾಗಲೀ, ಸುಖಕ್ಕಾಗಲಿ ಕಾರಣವಲ್ಲ, ಸುಖ ದುಃಖಗಳು ಮನಸ್ಸಿನ

ಪರಿಣಾಮವನ್ನವಲಂಬಿಸಿವೆ. ಮನಸ್ಸಿನ ಭಾವನೆಗಳು ಒಳ್ಳೆಯ ದಾಗಿರಬೇಕು. ದುರಾಲೋಚನೆ, ದುರಭಿಮಾನ, ದುಷ್ಟರ ಸಹವಾಸ ಇವುಗಳಿಂದ ದುಃಖವೇ ಬರುತ್ತದೆ. ಸತ್ ಚಿಂತನೆ, ಸದ್ಭಾವನೆ, ಸಜ್ಜನರ ಸಹವಾಸ ಮತ್ತು ಪುಣ್ಯ ಕಾರ್ಯಗಳಿಂದ ಸುಖ ಪ್ರಾಪ್ತಿ ಯಾಗುತ್ತದೆ. ಮನಸ್ಸಿನಿಂದ, ಮಾತಿನಿಂದ ಮತ್ತು ದೇಹದಿಂದ ಮಾಡುವ ಕ್ರಿಯೆಗಳು ಒಳ್ಳೆಯ ಅಥವಾ ದುಷ್ಟಪರಿಣಾಮಗಳ ನ್ನುಂಟು ಮಾಡುತ್ತವೆ. ಮನುಷ್ಯನ ಕ್ರಿಯೆಗಳಿಗೆ ಮನಸ್ಸೇ ಕಾರಣ ವಾಗುತ್ತದೆ. ನಾವು ಮಾಡುವ ಕಾರ್ಯದಲ್ಲಿ ಪ್ರೇರಕ ಹಾಗೂ ಪೂರಕವಾಗಿ ಯೋಚಿಸಿದರೆ ಸುಖದುಃಖಗಳನ್ನು ಸಮನಾಗಿ ಕಾಣಲು ಸಾಧ್ಯ. ಈ ವ್ರತದ ಈ ಸಂದೇಶ ಯುಗಯುಗಾಂತರದಲ್ಲೂ ಪ್ರಸ್ತುತ ವೆನಿಸುವಂತಿವೆ.

ಪುರುಷಾರ್ಥವನ್ನು ಅನುಭವಿಸುವುದು ಪ್ರತಿಯೊಬ್ಬನ ಹೆಬ್ಬ ಯಕೆ. ಅದನ್ನು ಪ್ರಾಪ್ತಿಸಿಕೊಳ್ಳಲು ಹಲವು ಮಾರ್ಗಗಳು. ಅದರಲ್ಲಿ ಮುಖ್ಯವಾಗಿ ಸಾತ್ವಿಕ ಚಿಂತನೆ ಅಗತ್ಯ. ಇದು ಆರೋಗ್ಯ, ನಿರ್ವಿಘ್ನತೆ, ಐಶ್ವರ್ಯ, ಜ್ಞಾನ ಮೋಕ್ಷಗಳೆಂಬ ಐದು ವಿಧಗಳ ಫಲವನ್ನು ದೊರ ಕಿಸಿ ಕೊಡುವುದಾಗಿದೆ. ಸನಾತನದ ವೇದಕಾಲದಿಂದಲೂ ಮನುಷ್ಯನ ಬದುಕಿಗೆ ಪ್ರಕೃತಿಯ ಪಾತ್ರ ಅನುಪಮವಾದುದು. ಸೃಷ್ಟಿಯಲ್ಲಿರುವ ಬಗೆಬಗೆಯ ಜನರು ಒಂದೊಂದು ವಸ್ತುವನ್ನು ಬೇರೆ ಬೇರೆ ದೃಷ್ಟಿಗ ಳನ್ನು ಬಳಸಿಕೊಂಡು ನೋಡುತ್ತಾರೆ. ವಸ್ತುವಿನ ಹುಟ್ಟಿಗೆ ಸಹಜತನ ವನ್ನು ಅದರಲ್ಲಿ ಕಾಣುವಂತಾದರೆ ಅದನ್ನು ಸರಿಯಾದ ದೃಷ್ಟಿಕೋನ ವೆನ್ನಬಹುದು.

ದೃಷ್ಟಿಯಲ್ಲಿ ವ್ಯತ್ಯಾಸ ವೈಪರೀತ್ಯಗಳು ಏಕೆ ಬರುತ್ತವೆ? ಸ್ವಾರ್ಥ ಮಯ ಮನಃ ಪ್ರವೃತ್ತಿಯನ್ನು ಅವಲಂಬಿಸಿದ ದರ್ಶನಕ್ರಿಯೆ ನಡೆ ಯುವುದರಿಂದ ಭಾರತ ವೇದಕಾಲ-ಕೃತತ್ರೇತಾದಿ ಯುಗಗಳಲ್ಲೂ ಹಾಗೂ ಪುರಾಣ ಕಾಲದಿಂದಲೂ ಮುಖ್ಯವಾಗಿ ಗೋಸಂಪತ್ತು , ಧಾನ್ಯ ಸಂಪತ್ತು, ಕೃಷಿ ಪ್ರಧಾನ ದೇಶವಾಗಿತ್ತು. ಕೃಷಿಯೇ ಭಾರತದ ಜನ ಜೀವನದ ಆಧಾರವಾಗಿತ್ತು. ಋಷಿ-ಮುನಿಗಳು, ರಾಜ ಮಹಾ ರಾಜರು ಈ ಸಂಪತ್ತುಗಳಿಸಿಕೊಳ್ಳಲು ನಾನಾ ರೀತಿಯಲ್ಲಿ ಹೋರಾಟ ಪ್ರಯತ್ನ ಬಲವನ್ನು ಮಾಡಿದ್ದಾರೆ. ಮಹಾಭಾರತದಲ್ಲಿ ಅಜ್ಞಾತ ವಾಸದಲ್ಲಿರುವ ಪಾಂಡವರನ್ನು ಗುರುತಿಸಲು ವಿರಾಟರಾಜನ ಗೋವು ಗಳನ್ನು ಅಪಹರಿಸಿದಾಗ ಅರ್ಜುನನು ಬೃಹನ್ನಳೆಯಾಗಿ ಪ್ರಕಟ ಗೊಂಡ. ಮದೋನ್ಮತ್ತನಾದ ಕಾರ್ತವೀರ್ಯಾರ್ಜುನನು ಜಮ ದಗ್ನಿಯ ಆಶ್ರಮದಲ್ಲಿ ಕಾಮಧೇನುವನ್ನು ಅಪಹರಿಸಿದಾಗ ಭಾರ್ಗವ ರಾಮನು ಅವನ ಶಿರಸ್ಸನ್ನು ಕಡಿದು ಚೆಂಡಾಡಿದ.

**'ಅನ್ನಾದ್ಭವಂತಿ ಭೂತಾನಿ'** ಎಂಬಂತೆ ಜೀವಿಗಳ ಹುಟ್ಟು ಅನ್ನದಿಂದ. ಅನ್ನದ ಬೆಳೆ ಸಾಧ್ಯವಾಗುವುದು ಮಳೆಯಿಂದ. ಆದ

## ಶ್ರೀಸೂಕ್ತದ ಫಲಶ್ರುತಿ

**ನ ಕ್ರೋಧೋ ನ ಚ ಮಾತ್ಸರ್ಯಂ।**
**ನ ಲೋಭೋ ನಾ ಶುಭಾ ಮತಿಃ।**
**ಭವನ್ತಿ ಕೃತ ಪುಣ್ಯಾನಾಂ ಶ್ರೀ ಭಕ್ತಾನಾಂ**
**ಶ್ರೀ ಸೂಕ್ತ ಜಾಪಿನಾಮ್**



ಕಾರಣ ಭಾರತದಲ್ಲಿ ಪಶುಸಂಗೋಪನೆ ಕೃಷಿಗೆ ಪೂರಕವಾದ ಉದ್ಯೋಗ. ಈ ಉದ್ಯೋಗ ಕೃಷಿ ಹಾಗೂ ಆಹಾರ ಎರಡರ ಅಂಗವಾಗಿ ವ್ಯಾವಹಾರಿಕವಾಗಿ ಬೆಳೆದು ಬಂದಿದೆ. ದಾನಗಳಲ್ಲಿ ಸಹ ಗೋದಾನ ಹಾಗೂ ಅನ್ನದಾನಗಳೇ ಅತಿ ಶ್ರೇಷ್ಠವೆಂದು ವೇದಗಳಲ್ಲಿ ನಿರೂಪಿಸಲಾಗಿದೆ. ಅಕ್ಷತೆ ಅಥವಾ ಮಂತ್ರಪೂರ್ವಕ ಅಕ್ಕಿಕಾಳು ಅಕ್ಷಯ ರೂಪದ ಸಂಕೇತವಾಗಿ ಅನುಗ್ರಹ, ಆಶೀರ್ವಾದ ರೂಪದಲ್ಲಿ ತೋರಿ ಬಂದಿದೆ. ನಿರಂತರ ಸಮೃದ್ಧಿಯ ಉತ್ತರೋತ್ತರ ಅಭಿವೃದ್ಧಿಯಾಗಲಿ ಎಂದು ಇದರ ಆಶಯಾರ್ಥ ವಾಗಿದೆ.

ಪ್ರಕೃತಿ ಮತ್ತು ಮಾನವನ ಜೊತೆಗಿರುವ ಸಂಬಂಧ ಬ್ರಹ್ಮಾಂಡ ಮತ್ತು ಪಿಂಡಾಂಡದ ಜೊತೆಗಿರುವ ಸಂಬಂಧದಂತೆ ಇರುತ್ತದೆ. ಇದನ್ನು ನಮ್ಮ ಪೂರ್ವ ಜರು ತಿಳಿದಿದ್ದರು.

ಧರ್ಮಗಳ ಆಚರಣೆಯ ಹಿಂದಿನ ಉದ್ದೇಶವೇ ಮಾನವನನ್ನು ಪ್ರಕೃತಿ ಯೊಂದಿಗೆ ಒಂದುಗೂಡಿಸುವುದು ಎಂದು ಸರಿಯಾಗಿಯೇ ಅರ್ಥಮಾಡಿ ಕೊಂಡರು. ಈ ಮೂಲಕ ಪ್ರಕೃತಿಯ ಸಮತೋಲನ ಉನ್ನತಿಗೆ ಕಾರಣರಾದರು.

ಪುರಾಣ ಕಾಲದ ಅನಂತರ ಈ ಕಲಿಯುಗದಲ್ಲಿ ದೇವರ ಕುರಿತು ಶ್ರದ್ಧಾ ಭಕ್ತಿ ಕಡಿಮೆ ಆದಂತೆ, ಬದುಕಿನಲ್ಲಿ ಒತ್ತಡ, ಅವಸರ, ಸ್ವಾರ್ಥ, ಡಾಂಭೀಕತನ ಹೆಚ್ಚುತ್ತಾ ಹೋದಂತೆ ವ್ಯಾಪಾರೀಕರಣದ ವಾತಾವರಣ ಸೃಷ್ಟಿಯಾಯಿತು. ಸಾಂಸಾರಿಕ ಜೀವನದಲ್ಲಿ ಚಿನ್ನದ ಅಭಿಲಾಷೆ ಹಾಗೂ ಧನಸಂಪಾದನೆಯ ದುರಾಶೆ ಅಧಿಕ ವಾಯಿತು. ಆದಕಾರಣ ನಾಲ್ಕು ಪುರುಷಾರ್ಥಗಳಲ್ಲಿ ಅರ್ಥವೆಂಬ ಪುರುಷಾ ರ್ಥವೇ ಪ್ರಧಾನವಾಯಿತು. ಅಂದರೆ, ಸಂಪತ್ತು, ಕೀರ್ತಿ ಪಡೆಯಲು ನಾನಾ ರೀತಿಯ ಪೂಜೆ ಪುನಸ್ಕಾರಗಳಿಗೆ ಒತ್ತು ನೀಡಲಾಯಿತು.



# ಸಾತನೂರಿನ ವಿಠಲ ದೇವಾಲಯ

43

**ಕರ್ನಾಟಕದ ವೈಷ್ಣವ ಕ್ಷೇತ್ರಗಳು**

-ಕೆಂಗೇರಿ ಚಕ್ರಪಾಣಿ
94483 86886

ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನಲ್ಲಿರುವ ಸಾತನೂರು ಗ್ರಾಮವು ಮಾಗಡಿ-ಹುಲಿಯೂರುದುರ್ಗ ರಸ್ತೆಯ ಸಮೀಪ ಮಾಗಡಿಯಿಂದ ಹತ್ತು ಕಿ.ಮೀ. ದೂರದಲ್ಲಿದೆ.

ಸಾತನೂರಿನಲ್ಲಿ ವಿಠಲ ದೇವಾಲಯ,ಆಂಜನೇಯ ದೇವಾಲಯ, ಕಬ್ಬಾಳಮ್ಮ ದೇವಾಲಯ, ಸ್ವಯಂಭುವೇಶ್ವರ ದೇವಾಲಯಗಳಿವೆ.

**ವಿಠಲ ದೇವಾಲಯ :**

ಸಾತನೂರಿನಲ್ಲಿರುವ ದೇವಾಲಯಗಳಲ್ಲಿ ಬಹಳ ಪ್ರಮುಖವಾದುದು ವಿಠಲ ದೇವಾಲಯವಾಗಿರುವುದು, ದೇವಾಲಯವು ಒಂದು ಸಣ್ಣ ಗುಡ್ಡದ ಮೇಲಿದ್ದು, ಪ್ರವೇಶಿಸಲು ಮೆಟ್ಟಿಲುಗಳಿವೆ. ವಿಠಲ ದೇವಾಲಯವು ಗರ್ಭಗೃಹ,ಅಂತರಾಳ, ನವರಂಗ, ಮುಖಮಂಟಪಗಳನ್ನು ಹೊಂದಿದೆ. ದೇವಾಲಯವನ್ನು ಮೂಲ ಸ್ವರೂಪವನ್ನು ಉಳಿಸಿಕೊಂಡು ಜೀರ್ಣೋದ್ಧಾರ ಮಾಡಲಾಗಿದೆ.


ಕ್ರಿ.ಶ. 1497 ರ ಸಂಸ್ಕೃತ ಶಾಸನದಲ್ಲಿ ತಿರುಮಲೆ ಸೋಮಯಾಜಿಯ ಮಕ್ಕಳು ಸಾತನೂರಿನ ವಿಠಲ ದೇವರ ಪೂಜಾ ಕೈಂಕರ್ಯಕ್ಕೆ ದತ್ತಿ ಬಿಟ್ಟ ಉಲ್ಲೇಖ ದೊರೆಯುತ್ತದೆ. ಗರ್ಭಗುಡಿಯಲ್ಲಿ ಬಹಳ ಅಪರೂಪವಾದ ಹಾಗೂ ಮನೋಹರವಾದ ವಿಠಲದೇವನ ಮೂರ್ತಿಯಿದೆ. ಸುಮಾರು ಐದು ಅಡಿಗಳಷ್ಟು ಎತ್ತರದ ಕಪ್ಪು ಕಣಶಿಲೆಯಿಂದ ಮಾಡಿರುವ ವಿಠಲನ ಮೂರ್ತಿಯು ಬಹಳ ಸೊಗಸಾಗಿದೆ.

ಸಮಭಂಗಿಯಲ್ಲಿ ನಿಂತು ಎರಡೂ ಕೈಗಳನ್ನು ಸೊಂಟದ ಮೇಲೆ (ಕಟೀಹಸ್ತ) ಇಟ್ಟುಕೊಂಡಿರುವ ದೇವನು ಕೊಳಗದ ರೀತಿಯ ಕಿರೀಟವನ್ನು ಧರಿಸಿದ್ದು, ಹಸನ್ಮುಖಿಯಾಗಿರುವನು. ಪಾಂಡುರಂಗನ ಕೊರಳಿಗೆ ಕೌಸ್ತುಭಮಾಲೆ,ವೈಜಯಂತಿ ಧರಿಸಿದ್ದು, ಸೊಂಟಕ್ಕೆ ಉದರಬಂಧವನ್ನು ಧರಿಸಿರುವನು, ಭುಜದ ಮೇಲೆ ಭುಜಕೀರ್ತಿ, ತೋಳಿನ ಮೇಲೆ ಕೇಯೂರ, ಕಾಲಿಗೆ ಕಾಲ್ಕಡಗ, ಬೆರಳಿಗೆ ಅಂಗುಲೀಯಕ (ಉಂಗುರ) ಗಳನ್ನು ಧರಿಸಿರುವ ದೇವನ ಇಕ್ಕೆಲಗಳಲ್ಲಿ ಆತನ ಪತ್ನಿಯರಾದ ರುಕ್ಮಿಣಿ ಸತ್ಯಭಾಮರಿರುವರು.

ಸೊಂಟದ ಮೇಲೆ ಕೈಯನ್ನು ಇಟ್ಟುಕೊಂಡಿರುವ ವಿಠಲನ ಬಲಗೈಯಲ್ಲಿ ಶಂಖ ಮತ್ತು ಬಿಲ್ಲು ಬಾಣಗಳನ್ನು ಹಿಡಿದಿದ್ದು, ಎಡಗೈಯಲ್ಲಿ ಥೈಲಿಯ ಮಾದರಿಯ ಚೀಲವನ್ನು ಹಿಡಿದಿರುವ ಅಪರೂಪದ ಮೂರ್ತಿಯಾಗಿದೆ. ಮೂರ್ತಿಯ ಬದಿಯಲ್ಲಿ ಸ್ತಂಭದ ಮಾದರಿಯ ರಚನೆಯಿದ್ದು ಮೇಲೆ ಕೀರ್ತಿಮುಖವಿದ್ದು, ಅದರ ಎರಡೂ ಬದಿಗಳಲ್ಲಿ ದಶಾವತಾರದ ಚಿಕಣಿ ಶಿಲ್ಪಗಳಿವೆ. ಮತ್ಸ್ಯ ಕೂರ್ಮಾದಿಯಾಗಿ ಬರುವ ದಶಾವತಾರದ ಶಿಲ್ಪಗಳಲ್ಲಿ ಬುದ್ಧನ ಶಿಲ್ಪವು ಕಂಡು ಬಂದಿಲ್ಲ.

ಬುದ್ಧನ ಶಿಲ್ಪದ ಸೇರ್ಪಡೆಯು ಬಾದಾಮಿ ಚಾಲುಕ್ಯರ ಕಾಲದಲ್ಲಿ ಕಂಡು ಬರುತ್ತದೆ. ವಿಗ್ರಹದ ಲಕ್ಷಣ ದಶಾವತಾರದ ಶಿಲ್ಪಗಳಲ್ಲಿ ಬುದ್ಧನ ಶಿಲ್ಪವಿಲ್ಲದಿರುವುದು, ಇವುಗಳನ್ನು ಗಮನಿಸಿದರೆ ಮೂರ್ತಿಯು ಸುಮಾರು ಏಳನೆಯ ಶತಮಾನದ ಪಲ್ಲವ ಶೈಲಿಯ ಪ್ರಭಾವವಿರುವ ಶಿಲ್ಪವಾಗಿರಬೇಕೆಂದು ನಿರ್ಧರಿಸಬಹುದು, ಇಂತಹ ಪ್ರಾಚೀನವಾದ ಅಪರೂಪದ ವಿಠಲನ ಮೂರ್ತಿಯು ಬೆಂಗಳೂರಿಗೆ ಅತೀ ಸಮೀಪ ದಲ್ಲಿರುವುದು ಸೋಜಿಗ ಮೂಡಿಸುತ್ತದೆ.

ಸಾತನೂರಿನ ಕಬ್ಬಾಳಮ್ಮ ದೇವಾಲಯವು ವಿಜಯನಗರೋತ್ತರ ಕಾಲದ ಚಿಕ್ಕ ಆಲಯವಾಗಿದ್ದು, ಗರ್ಭಗುಡಿಯಲ್ಲಿ ಮಣ್ಣಿನಿಂದ ಮಾಡಿದ ಕಬ್ಬಾಳಮ್ಮ ಹಾಗೂ ಮಾರಮ್ಮನ ಮೂರ್ತಿಗಳಿವೆ.



ಸಾತನೂರಿನ ಆಂಜನೇಯ ದೇವಾಲಯವು ವಿಠಲ ದೇವಾಲಯಕ್ಕೆ ಎದುರಾಗಿರುವ ರಚನೆಯಾಗಿದೆ. ಗರ್ಭಗುಡಿಯಲ್ಲಿರುವ ಮಾರುತಿಯು ಸುಮಾರು ಹತ್ತು ಅಡಿ ಎತ್ತರವಿದ್ದು ವಿಠಲಸ್ವಾಮಿಯ ಎದುರಾಗಿ ನಿಂತಿರುವನು, ತಲೆಯಲ್ಲಿ ಶಿಖೆಯನ್ನು ಹೊಂದಿರುವ ಹನುಮಂತನ ಬಾಲವು ದೇಹದ ಸುತ್ತಲೂ ಸುತ್ತಿದ್ದು ಬಲಕ್ಕೆ ತಿರುಗಿದೆ. ಸಾತನೂರಿನ ಹೊರವಲಯದಲ್ಲಿ ಸ್ವಯಂಭುವೇಶ್ವರ ದೇವಾಲಯವಿದೆ.

ಸಾತನೂರಿನ ಮತ್ತೊಂದು ವಿಶೇಷ ಪ್ರಸಿದ್ಧ ಹಿಂದೂಸ್ತಾನಿ ಸಂಗೀತದ ವಿದ್ವಾಂಸ ನಾದ ಪುಂಡರೀಕವಿಠಲನೆಂಬ ಕವಿಯು ಇದೇ ಊರಿನವನು. ಅಕ್ಬರನ ಆಸ್ಥಾನದಲ್ಲಿದ್ದ ಈತನು ರಾಗಮಾಲಿಕ, ರಾಗಮಂಜರಿ, ಸದ್ರಾಗ ಚಂದ್ರೋದಯ ಮುಂತಾದ ಪ್ರಸಿದ್ಧ ಸಂಗೀತಕ್ಕೆ ಸಂಬಂಧಿಸಿದ ಗ್ರಂಥಗಳನ್ನು ಬರೆದಿರುವನು.

**ಹೀಗೆ ಬನ್ನಿ:**

ರಾಮನಗರ ಜಿಲ್ಲೆ, ಮಾಗಡಿ ತಾ, ಸಾತನೂರು ಗ್ರಾಮವನ್ನು, ಮಾಗಡಿ ಹುಲಿಯೂರುದುರ್ಗ ರಸ್ತೆಯಲ್ಲಿ ಸುಮಾರು ಏಳು ಕಿ.ಮೀ. ಕ್ರಮಿಸಿ ಸಿಗುವ ಸಾತನೂರು ತಿರುವಿನಲ್ಲಿ ಬಲಕ್ಕೆ ಮೂರು ಕಿ.ಮೀ.ಸಾಗಿ ಸೇರಬಹುದು. ಸಾತನೂರಿಗೆ ಸಮೀಪದಲ್ಲಿ ಶ್ರೀಪತಿಹಳ್ಳಿ ಎಂಬ ಗ್ರಾಮವಿದ್ದು, ಅಲ್ಲಿ ಪ್ರಸಿದ್ಧವಾದ ನರಸಿಂಹ ದೇವಾಲಯವಿದೆ.

# ಕೂರ್ಮಾವತಾರ




ದೇವದಾನವರು ಅಮೃತಕ್ಕಾಗಿ ಸಮುದ್ರಮಂಥನ ಸಂದರ್ಭದಲ್ಲಿ ವಾಸುಕಿಯನ್ನು ಹಗ್ಗಮಾಡಿ ಮಂದರ ಪರ್ವತ ಕಡಗೋಲಾಗಿಸಿ ದೈತ್ಯ ಚಕ್ರವರ್ತಿ ಬಲಿಯ ನೇತೃತ್ವದಲ್ಲಿ ದಾನವರೂ ಇಂದ್ರನ ನೇತೃತ್ವದಲ್ಲಿ ದೇವತೆಗಳೂ ಸಮುದ್ರ ಕಡೆಯುತ್ತಾರೆ. ಆದರೆ ಮಂದರ ಪರ್ವತವು ಬಹಳ ಭಾರವಿದ್ದುದರಿಂದ ಸಮುದ್ರದಲ್ಲಿ ಕುಸಿಯಲು ಪ್ರಾರಂಭಿಸುತ್ತದೆ. ಆಗ ಶ್ರೀಮಾನ್ ವಿಷ್ಣುವು ಆಮೆಯ ರೂಪದಲ್ಲಿ ಅವತರಿಸಿ ಮಂದಾರ ಪರ್ವತ ತನ್ನ ಬೆನ್ನ ಮೇಲೆ ಇಟ್ಟುಕೊಂಡು ಅದು ಕುಸಿಯದಂತೆ ನೋಡಿಕೊಳ್ಳುತ್ತಾನೆ. ಈ ರೀತಿಯಲ್ಲಿ ಪರಮಾತ್ಮನು ಮೊದಲು ನರಸಿಂಹ ಅವತಾರ ತಾಳಿದಂತೆ, ಕೂರ್ಮಾವತಾರ ತಾಳಿ ದೇವತೆಗಳಿಗೆ ರಾಕ್ಷಸರಿಗೆ ಸಹಾಯ ಮಾಡುತ್ತಾನೆ. ಆ ಕೂರ್ಮಾವತಾರದ ಪ್ರಯುಕ್ತವೇ ಕೂರ್ಮಾವತಾರಿಯಾದ ವಿಷ್ಣುವನ್ನು ಪೂಜಿಸಿ ಧ್ಯಾನಿಸುವುದೇ ಕೂರ್ಮಜಯಂತಿಯಾಗಿ ಆಚರಿಸಲ್ಪಡುತ್ತದೆ. ಕೂರ್ಮಾವತಾರ ಆವಿರ್ಭವಿಸಿದ ಮಹಾವಿಷ್ಣು ತನ್ನದೇ ಆದ ಅವತಾರದಲ್ಲಿ ಉದ್ಘೋಷಿಸಿದ ಮಹಾಮಂತ್ರಗಳೇ 'ಕೂರ್ಮಾಪುರಾಣ' ಇದನ್ನು ಪ್ರಪ್ರಥಮವಾಗಿ ಕೂರ್ಮಾವತಾರಿ ಮಹಾವಿಷ್ಣುವು ನಾರದರಿಗೆ ಬೋಧಿಸಿದನು. ನಂತರ ನಾರದರು ಇದನ್ನು ನೈಮಿಷಾರಣ್ಯ ವಾಸಿಗಳಿಗೆ ಬೋಧಿಸಿದರು. ಇದರಲ್ಲಿ ಮುಖ್ಯವಾಗಿ "ಧರ್ಮೋಹತೋ ಹಂತಿ ಧರ್ಮೋ ರಕ್ಷತಿ ರಕ್ಷಿತಃ" ಎಂಬ ಮಹಾವಾಕ್ಯ ಹೇಳಲಾಗಿದೆ.

# ಆಚಾರ್ಯ ರಾಮಾನುಜರ ಪ್ರೇಮ ನಿವೇದನೆ


- ರಾ.ನ.ನ. ಮೂರ್ತಿ

99720 64322

ವೈಷ್ಣವ ಆಚಾರ್ಯರುಗಳಲ್ಲಿ ಶ್ರೀರಾಮಾನುಜಾಚಾರ್ಯರಿಗೆ ವಿಶಿಷ್ಟ ಸ್ಥಾನವಿದೆ. ಅವರನ್ನು ಭಗವಾನ್ ಸಂಕರ್ಷಣನ ಅವತಾರವೆನ್ನುತ್ತಾರೆ. ಅವರ ಭಕ್ತಿ ಸಿದ್ಧಾಂತ ವಿಶಿಷ್ಟಾದ್ವೈತವೆಂದು ಪ್ರಸಿದ್ಧಿ ಪಡೆಯಿತು. ಈ ಸಂಪ್ರದಾಯದ ಪರಂಪರೆಯಲ್ಲಿ ಮೊಟ್ಟಮೊದಲಿಗೆ ಬಂದ ಆಚಾರ್ಯರು ನಾರಾಯಣ ಎಂದೆನ್ನುತ್ತಾರೆ. ಅವರು ನಿಜಸ್ವರೂಪ ಶಕ್ತಿಯಾದ ಶ್ರೀ ಮಹಾಲಕ್ಷ್ಮಿಗೆ ಶ್ರೀನಾರಾಯಣ ಮಂತ್ರವನ್ನು ಉಪದೇಶಿಸಿದರು. ಅವರಿಂದ ಈ ಉಪದೇಶ ವಿಶ್ವಕ್ಸೇನರಿಗೆ ದೊರಕಿತು. ಮುಂದೆ ನಾಥಮುನಿ ಮುಂತಾದವರಿಗೆ ಪರಂಪರೆಯಾಗಿ ಇದೇ ಉಪದೇಶ ಶ್ರೀ ಯಾಮುನಾಚಾರ್ಯರಿಗೂ (ಸಿಕ್ಕಿತು) ಪ್ರಾಪ್ತವಾಯಿತು. ಇದೇ ಯಾಮುನಾಚಾರ್ಯರೇ ಶ್ರೀರಾಮಾನುಜಾಚಾರ್ಯರ ಪರಮ ಗುರು. ಹೀಗೆ ಈ ವಿಶಿಷ್ಟಾದ್ವೈತ ಸಿದ್ಧಾಂತದಲ್ಲಿ ಶ್ರೀನಾಥಮುನಿ, ಯಾಮುನಾಚಾರ್ಯ ಹಾಗೂ ರಾಮಾನುಜಾಚಾರ್ಯರಂತಹ ಮೂರು ಆಚಾರ್ಯರುಗಳು ಮುನಿತ್ರಯರೆಂದು ವಿಶೇಷ ಪ್ರಸಿದ್ಧಿಯನ್ನು ಪಡೆದರು. ಯಾಮುನಾಚಾರ್ಯರು "ಆಳವಂದಾರ್ ಎಂತಲೂ ಸಹ ಕರೆಸಿಕೊಳ್ಳುತ್ತಾರೆ.ಅವರ ಆಳವಂದಾರ್ ಸ್ತೋತ್ರ" ಪ್ರಪತ್ತಿಮಾರ್ಗದ ಅಮೂಲ್ಯ ಸ್ತೋತ್ರ ರತ್ನ.

ಶ್ರೀರಾಮಾನುಜಾಚಾರ್ಯರು ಭಕ್ತಿ ಮಾರ್ಗವನ್ನು ಪ್ರಚಾರಮಾಡಲು ಇಡೀ ಭಾರತವನ್ನು ಸುತ್ತಿದರು. ಜತೆಗೆ, ಗೀತೆ ಹಾಗೂ ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ಬರೆದರು. ವೇದಾಂತ ಸೂತ್ರಗಳ ಮೇಲಿನ ಇವರ ಭಾಷ್ಯ 'ಶ್ರೀಭಾಷ್ಯ' ವೆಂದು ಪ್ರಸಿದ್ಧವಾಯಿತು. ಇವರ ಸಂಪ್ರದಾಯವೂ ಸಹ 'ಶ್ರೀ ಸಂಪ್ರದಾಯ'ವೆಂದೇ ಕರೆಸಿಕೊಂಡಿತು. ಕಾರಣ, ಈ ಸಂಪ್ರದಾಯದ ಆದ್ಯ ಪ್ರವರ್ತಕಿ ಸಾಕ್ಷಾತ್ ಶ್ರೀ ಮಹಾಲಕ್ಷ್ಮೀ ಎಂದೇ ಮಾನ್ಯವಾಗಿದೆ. ಶ್ರೀರಾಮಾನುಜ ಸಿದ್ಧಾಂತದ ಪ್ರಕಾರ ಭಗವಂತನೇ ಪುರುಷೋತ್ತಮ, ಅವನೇ ಪ್ರತಿಯೊಂದು ಶರೀರದಲ್ಲಿಯೂ ಸಾಕ್ಷೀರೂಪವಾಗಿ ಇದ್ದಾನೆ. ಆತ ಜಗತ್ತಿನ ನಿಯಂತನೂ ಶೇಷಿಯೂ (ಅವಯವೀ) ಹಾಗೂ ಸ್ವಾಮಿ ಜೀವ ಅವನ ನಿಯಮ್ಯ, ಶೇಷ ಹಾಗೂ ಸೇವಕ, ನಮ್ಮ ವ್ಯಷ್ಟಿ ಅಹಂಕಾರವನ್ನು ಸರ್ವಥಾ ಹೊಡೆದೋಡಿಸಿ ಭಗವಂತನಲ್ಲಿ ಸರ್ವತೋ ಭಾವೇನ ಶರಣಾಗುವುದು ಜೀವದ ಪರಮ ಪುರುಷಾರ್ಥ, ಭಗವಾನ್ ಲಕ್ಷ್ಮೀನಾರಾಯಣ ಜಗತ್ತಿನ ಮಾತಾ-ಪಿತಾ ಮತ್ತು ಜೀವಿಗಳು ಅವನ ಸಂತಾನಗಳು ತಾಯಿ-ತಂದೆಯರ ಪ್ರೀತಿ ಮತ್ತು ಅವರ ಕೃಪೆಯನ್ನು ಹೊಂದುವುದೇ ಸಂತಾನದ (ಮಕ್ಕಳ) ಧರ್ಮ. ವಾಣಿಯಿಂದ ಭಗವಾನ್ ನಾರಾಯಣನ ನಾಮೋಚ್ಚಾರಣೆ ಮಾಡಬೇಕು. ಕಾಯಾ, ವಾಚಾ, ಮನಸಾ ಅವನ ಸೇವೆ ಮಾಡಬೇಕು. ಶ್ರೀ ಭೂನೀಳಾ ಮಹಾದೇವಿಯವರೊಂದಿಗೆ ಭಗವಾನ್ ನಾರಾಯಣನ ಸೇವೆ ಮಾಡುವುದೇ ಪರಮ ಪುರುಷಾರ್ಥ. ಈ ರೀತಿಯ ದಾಸತ್ವವನ್ನು ಹೊಂದುವುದೇ ಮುಕ್ತಿ. ಭಗವಂತ ಅನಂತ ಗುಣಗಣಾವಳಿಯಿಂದ ಸಮನ್ವಿತನಾದವನು. ಅವನು ಸೃಷ್ಟಿಕರ್ತನೂ ಕರ್ಮ ಫಲ ಪ್ರದಾತನೂ, ನಿಯಂತನೂ, ಸರ್ವಾಂತರ್ಯಾಮಿಯೂ, ಅಪಾರ ಕಾರುಣ್ಯನು, ಸೌಶೀಲ್ಯನೂ, ಔದಾರಿಯೂ ಐಶ್ವರ್ಯ ಸೌಂದರ್ಯಾದಿ ಅನಂತಾನಂತ ಸದ್ಗುಣಗಳ ಮಹಾಸಾಗರನು. ಭಗವಂತನ ಸ್ವರೂಪ ಐದು ಪ್ರಕಾರಗಳಲ್ಲಿದೆ.

ಪರ, ವ್ಯೂಹ, ವಿಭವ, ಅಂತರ್ಯಾಮಿ ಮತ್ತು ಆರ್ಚಾ ಭಗವಂತ ಶಂಖ, ಚಕ್ರ, ಗದಾ-ಪದ್ಮಧಾರಿ ಚತುರ್ಭುಜನು. ಶ್ರೀಭೂನೀಳಾ ಸಹಿತ ಸಮಸ್ತ ದಿವ್ಯಾ ಭೂಷಣಗಳಿಂದ ಅಲಂಕೃತ ನಾಗಿದ್ದಾನೆ. ಆತ ಭಕ್ತರ ಪ್ರೇಮಾನಂದದಲ್ಲಿ ಸದಾ ನಿಮಗ್ನನಾಗಿರುತ್ತಾನೆ. ಆಚಾರ್ಯರ ಅಭಿಪ್ರಾಯದಂತೆ, ನ್ಯಾಸವಿದ್ಯೆಯೇ ಪ್ರಪತ್ತಿ. ಅನುಕೂಲ್ಯತೆಯ ಸಂಕಲ್ಪಪ್ರತಿಕೂಲದ ತ್ಯಾಗ, ಭಗವಂತನಲ್ಲಿ ಸಂಪೂರ್ಣ ಆತ್ಮಸಮರ್ಪಣೆ ಎಲ್ಲ ರೀತಿಯಲ್ಲಿಯೂ ಕೇವಲ ಭಗವಂತನಿಗೆ ಶರಣಾಗುವುದೇ ಪ್ರಪತ್ತಿ ಆದ್ದರಿಂದ, ಸರ್ವಸ್ವ ನಿವೇದನ ರೂಪದ ಶರಣಾಗತ ಭಕ್ತಿಯೇ ಭಗವಂತನನ್ನು ಪ್ರಸನ್ನಗೊಳಿಸುವ ಪ್ರಧಾನ ಸಾಧನ ಶರಣಾಗತ ಭಕ್ತನನ್ನು ಕರುಣಾಮಯ ಭಗವಂತ ತನ್ನ ವಿಶಿಷ್ಠ ಪ್ರೇಮದ ಮೂಲಕ (ಧಾರೆ ಎರೆದು) ಕೃತಾರ್ಥಗೊಳಿಸುತ್ತಾನೆ. ಆಚಾರ್ಯ ರಾಮಾನುಜರು ದೈನ್ಯ ಭಾವವನ್ನು ಪ್ರತಿಷ್ಠಾಪಿಸಿದ್ದಾರೆ. ಅವರು ತಮ್ಮ ಶರಣಾಗತಿಗದ್ಯ, ಶ್ರೀರಂಗಗದ್ಯ ಹಾಗೂ ವೈಕುಂಠಗದ್ಯ (ಗದ್ಯತ್ರಯ) ಗಳಲ್ಲಿ ಪ್ರೇಮಭಕ್ತಿಯನ್ನು ಸಾರಭೂತವಾಗಿ ಭಟ್ಟಿ ಇಳಿಸಿದ್ದಾರೆ.

ಆಚಾರ್ಯರ ವಾಣಿಯಂತೆ -" ಭಗವಾನ್ ನನ್ನ ನಿತ್ಯ ಸ್ವಾಮಿ, ನಾನು ಅವನ ನಿತ್ಯ ದಾಸ (ಸೇವಕ). ನಾನು ಯಾವಾಗ ನನ್ನ ಕುಲದ ಸ್ವಾಮಿ, ದೇವ ಮತ್ತು ಸರ್ವಸ್ವವನ್ನು ಭಗವಾನ್ ನಾರಾಯಣನೇ ನನ್ನ

ಭೋಗ್ಯ, ದಾತಾ, ಪಿತಾ ಮತ್ತು ನನ್ನದೆಲ್ಲವೂ ಎಂದು ಭಾವಿಸಿದಾಗ ಈ ನೇತ್ರಗಳಿಂದ ಕಾಣುತ್ತೇನೆ. ಹಾಗಿದ್ದ ಮೇಲೆ ನಾನು ಭಗವಂತನ ಯುಗಲಚರಣಾರವಿಂದಗಳನ್ನು ಯಾವಾಗ ನನ್ನ ತಲೆಯ ಮೇಲೆ ಧರಿಸುತ್ತೇನೆ? ಆ ಸಮಯಕ್ಕಾಗಿ ಎದುರು ನೋಡು ತ್ತಿದ್ದೇನೆ. ಅವನ ಚರಣಾರ ವಿಂದಗಳ ಸೇವೆಯ ಆಸೆಯಿಂದ ಉಳಿದೆಲ್ಲ ಭೋಗಗಳ ಆಸೆ-ಅಭಿಲಾಷೆಗಳನ್ನು ಬಿಟ್ಟು, ಸಮಸ್ತ ಸಾಂಸಾರಿಕ ಭಾವನೆಗಳಿಂದ ದೂರವಿದ್ದು. ಅವನ ಚರಣಕಮಲಗಳಲ್ಲಿ ಪ್ರವೇಶ ಹೊಂದಬಹುದು. ಅಂತಹ ಸುಯೋಗ ಪ್ರಾಪ್ತವಾದಾಗ ನಾನು ಭಗವಂತನ ಯುಗಲ ಚರಣಗಳ ಸೇವೆಗೆ ಅರ್ಹನಾಗಿ ಅವುಗಳ ಆರಾಧನೆಯಲ್ಲಿ ತೊಡಗುತ್ತೇನೆ.

ಭಗವಾನ್ ನಾರಾಯಣ ತನ್ನ ಅತ್ಯಂತ ಶೀತಲ ದೃಷ್ಟಿಯಿಂದ ನನ್ನತ್ತ ನೋಡಿದಾಗ ಸ್ನೇಹದಿಂದ ಗಂಭೀರವಾಗಿ ಹಾಗೂ ಮಧುರವಾಣಿಯ ಮೂಲಕ ತನ್ನ ಸೇವೆಯಲ್ಲಿ ತೊಡಗಲು ಆಜ್ಞಾಪಿಸುತ್ತಾನೆ.ಆಚಾರ್ಯರು ಮತ್ತೆ ಪ್ರಾರ್ಥಿಸುತ್ತಾರೆ. ಹೇ ಪ್ರಭು! ನಾನು ತಂದೆ, ತಾಯಿ, ಹೆಂಡತಿ, ಮಕ್ಕಳು, ಬಂಧುಗಳು, ಮಿತ್ರರು, ಗುರುಗಳು, ರತ್ನರಾಶಿ, ಧನ-ಧಾನ್ಯ, ಭೂಮಿ, ಮನೆ-ಮಠ ಎಲ್ಲ ಧರ್ಮಗಳು ಮತ್ತು ಅವಿನಾಶಿಯಾದ ಮೋಕ್ಷ ಪದಸಹಿತವಾಗಿ ಸಂಪೂರ್ಣಕಾಮನೆಗಳನ್ನು ತ್ಯಜಿಸಿ, ಸಮಸ್ತ ಬ್ರಹ್ಮಾಂಡವನ್ನು ಆಕ್ರಾಂತ ಗೊಳಿಸುವ ನಿನ್ನ ಆ ಎರಡು ಚರಣಗಳಲ್ಲಿ ಶರಣಾಗತನಾಗಿದ್ದೇನೆ.


ಪಿತರಮ್ ಮಾತರಮ್ ದಾರಾನ್ ಪುತ್ರಾನ್
ಬಂಧೂನ್ ಸಖೀನ್ ಗುರೂನ್।
ರತ್ನಾನಿ ಧನಧಾನ್ಯಾನಿ ಕ್ಷೇತ್ರಾಣಿ ಚ ಗೃಹಾಣಿ ಚ॥
ಸರ್ವಧರ್ಮಾಶ್ಚ ಸಂತ್ಯಜ್ಯ ಸರ್ವಕಾಮಾಂಶ್ಚ ಸಾಕ್ಷರಾನ್।
ಲೋಕವಿಕ್ರಾಂತಚರಣೌ ಶರಣಂ ತೇ ವ್ರಜಂ ವಿಭೋ॥

ಅವನ ಹೇಳಿಕೆಯ ಅಭಿಪ್ರಾಯವೆಂದರೆ: ಹೇ ಪೂರ್ಣಕಾಮ, ಸತ್ಯಸಂಕಲ್ಪ, ಪರ ಬ್ರಹ್ಮ ಸ್ವರೂಪ ಪುರುಷೋತ್ತಮ, ಮಹಾನ್ ಐಶ್ವರ್ಯದಿಂದ ಕೂಡಿದ ಶ್ರೀಮನ್ನಾ ರಾಯಣ! ಹೇ ವೈಕುಂಠನಾಥ! ನೀನು ಅಪಾರ ಕರುಣೆ,ಸೌಶೀಲ್ಯತೆ,ವಾತ್ಸಲ್ಯ, ಔದಾರ್ಯ, ಐಶ್ವರ್ಯ ಮತ್ತು ಸೌಂದರ್ಯಾದಿ ಗುಣಗಳ ಮಹಾಸಾಗರ. ದೊಡ್ಡವರು - ಚಿಕ್ಕವರೆಂಬ ಭೇದವೆಣಿಸದೆ ಸಾಮಾನ್ಯವಾಗಿ ಎಲ್ಲರಿಗೂ ಆಶ್ರಯದಾತ. ಸಂಕಷ್ಟಕ್ಕೆ ಸಿಲು ಕಿರುವವರ ಪೀಡೆಯನ್ನು ನಿವಾರಿಸುವವನು.ಶರಣಾಗತರಾದವರಿಗೆ ವಾತ್ಸಲ್ಯದ ಮಹಾ ಸಾಗರವೇ ನೀನು. ನಿನಗೆ ಸದಾ ಸಮಸ್ತ ಭೂತಗಳ ಯಥಾರ್ಥ ಜ್ಞಾನವಿದೆ. ಸಂಪೂರ್ಣ ಚರಾಚರ ಭೂತಗಳ ನಿಯಮಗಳನ್ನೆಲ್ಲಾ ಮತ್ತು ಸಮಸ್ತ ಜಡ ಚೇತನಗಳ (ವಸ್ತುಗಳ) ಅವಯವಿ ನೀನು. ಅವೆಲ್ಲವೂ ನಿನ್ನ ಅವಯವಗಳು. ಸಮಸ್ತ ಜಗತ್ತಿಗೆ ಆಧಾರನು. ಅಖಿಲ ಜಗತ್ತು ಹಾಗೂ ನಮ್ಮೆಲ್ಲರ ಸ್ವಾಮಿ, ನಿನ್ನ ಕಾಮನೆಗಳು ಪೂರ್ಣವು ಮತ್ತು ಸಂಕಲ್ಪ ಸತ್ಯವೂ ಹೌದು. ನೀನು ಸಮಸ್ತ ಜಗತ್ತಿಗಿಂತ ಭಿನ್ನನೂ ಮತ್ತು ವಿಲಕ್ಷಣನು ಯಾಚಕರಿಗೆ ನೀನು ಕಲ್ಪವೃಕ್ಷ, ವಿಪತ್ತಿಗೆ ಸಿಲುಕಿದವರಿಗೆ ಸಹಾಯಕ. ಇಂತಹ ಮಹಿಮೆ ಯುಳ್ಳ ಹಾಗೂ ಆಶ್ರಯಹೀನರಿಗೆ ಆಶ್ರಯ ನೀಡುವ ಶ್ರೀಮನ್ನಾರಾಯಣನು! ನಾನು ನಿನ್ನ ಚರಣಾರ ವಿಂದಗಳಲ್ಲಿ ಶರಣಾಗತನಾಗಿದ್ದೇನೆ. ಏಕೆಂದರೆ ಅವುಗಳ ಹೊರತು ನನಗೆ ಬೇರೆಲ್ಲಿಯೂ ಆಶ್ರಯವಿಲ್ಲ. ಶ್ರೀರಂಗನಾಥ ಸ್ವಾಮಿಯೊಂದಿಗೆ ತಮ್ಮ ಪ್ರೇಮ ನಿವೇದನೆಯನ್ನು ಮಾಡುತ್ತಾ, ಅವನಲ್ಲಿ ತನ್ನ ದಾಸ್ಯಭಾವವನ್ನು ನೀಡಲು ಪ್ರಾರ್ಥಿಸುತ್ತಾರೆ.



ತವಾನುಭೂತಿ ಸಂಭೂತ ಪ್ರೀತಿಕಾರಿತ ದಾಸತಾಮ್।
ದೇಹಿ ಮೇ ಕೃಪಯಾ ನಾಥ ನ ಜಾನೇ ಗತಿಮನ್ಯಥಾ ॥

ಹೇನಾಥ ! ಕೃಪೆ ತೋರಿ ನನ್ನನ್ನು ನಿಮ್ಮ ಸೇವಕನನ್ನಾಗಿ ಸ್ವೀಕರಿಸಿ, ನನಗೆ ನಿಮ್ಮ ದಾಸ್ಯತೆ, ಕಿಂಕರತೆಯನ್ನು ದಾನವಾಗಿ ನೀಡಿ, ಎಂತಹ ದಾಸತೆ? ಪ್ರೀತಿಯಿಂದ ಉಂಟಾಗುವ ದಾಸತೆ ಪ್ರೀತಿಯನ್ನು ಉಂಟುಮಾಡುವಂತದು . ಎಂತಹಾ ಪ್ರೇಮ? ನಿಮ್ಮ ಅನುಭವದಿಂದ ಉಂಟಾಗುವ ಪ್ರೇಮ, ನಾನು ಅನಂತ ಲಾವಣ್ಯ, ಅಪಾರ ಮಾಧುರ್ಯ, ಪರಮ ಸೌಂದರ್ಯದ ಪ್ರತಿಷ್ಠಾಭೂತ ನಿನ್ನ ದಿವ್ಯಮಂಗಳ ವಿಗ್ರಹ ಹಾಗೂ ನಿನ್ನ ಅನಂತ ಸೌಶೀಲ್ಯ ವಾತ್ಸಲ್ಯಾದಿ ಗುಣಗಳನ್ನು ಅನುಭವಿಸುವ ಪ್ರೀತಿ. ನನ್ನ ಹೃದಯದಲ್ಲಿ ನಿನ್ನ ಬಗ್ಗೆ ತೈಲಧಾರೆಯಂತಹ ಅವಿ ಚ್ಛಿನ್ನ ಪ್ರೀತಿಯ ಅಲೆಯೇಳುವಂತಹ ಅನುಭವವಾಗಬೇಕು. ಆ ಪ್ರೀತಿ ನನ್ನಿಂದ ನಿಮ್ಮ ಸೇವೆ ಮಾಡುವಂತಾಗಬೇಕು. ನಾನು ಅಂತಹ ಪ್ರೀತಿಯಲ್ಲಿ ಮುಳುಗಿ ನಿನ್ನ ಸೇವಾಕೈಂಕರ್ಯ, ಭಜನೆ ಭಕ್ತಿ ಮಾಡುತ್ತಿರುತ್ತೇನೆ. ಇಂತಹ ಸುಂದರ ಸೇವಾ ಭಕ್ತಿಯ ಹೊರತು ಬೇರಾವ ಉಪಾಯಗಳೂ ನನ್ನ ಉದ್ಧಾರಕ್ಕೆ ಕಾಣು ತ್ತಿಲ್ಲ. ನನ್ನ ಬದುಕಿನಲ್ಲಿ ಇದಕ್ಕಿಂತ ಬೇರೆ ಧ್ಯೇಯವೂ ಹೊಳೆ ಯುತ್ತಿಲ್ಲ. ಈ ರೀತಿ ಸೇವೆಯೇ ನನ್ನ ಗತಿ, ನನ್ನ ಉಪಾಯ ಮತ್ತು ಬದುಕಿನ ಗುರಿಯಾಗಿದೆ.



# ಶ್ರೀ ನರಸಿಂಹ ಸುದರ್ಶನ ವೈಭವ

-ಡಾ॥ ಗುರುರಾಜ ಪೋಶೆಟ್ಟಿಹಳ್ಳಿ
97393 69621

ಭಕ್ತವತ್ಸಲ ಪ್ರಹ್ಲಾದ ರಕ್ಷಕ
ಶ್ರೀ ಲಕ್ಷ್ಮೀನರಸಿಂಹ ಪಾಹಿ ಮಾಂ

ವೈಕುಂಠವಾಸನು, ವಿಶೇಷವಾಗಿ ನರಸಿಂಹ ಅವತಾರವನ್ನು ತಳೆದವನು. ಎಲ್ಲದಕ್ಕೂ ಆಧಾರವಾಗಿರುವವನು, ವಿಶ್ವದೆಲ್ಲೆಡೆ ಆವರಿಸಿಕೊಂಡಿರುವವನು. ಅಭಯವನ್ನು ನೀಡುವವನು. ಆನಂದವನ್ನು ಕರುಣಿಸುವವನು. ಉಗ್ರಸ್ವರೂಪನು,ದುಷ್ಟನಾದ ಹಿರಣ್ಯಕಶಿಪುವನ್ನು ಸಂಹರಿಸಿದವನು, ಭಕ್ತವತ್ಸಲನು, ಪ್ರಹ್ಲಾದನನ್ನು ರಕ್ಷಿಸಿದವನೂ ಆದವನೂ ಶ್ರೀಲಕ್ಷ್ಮೀನರಸಿಂಹ ಸ್ವಾಮಿಯೇ ನಮ್ಮನ್ನು ರಕ್ಷಿಸು, ಕಾಪಾಡು ತಂದೆ, ನಿನಗೆ ನಮ್ಮ ಅನಂತಕೋಟಿ ನಮಸ್ಕಾರಗಳು ದೇವ. ಶ್ರೀಲಕ್ಷ್ಮೀನರಸಿಂಹ ಸ್ವಾಮಿಯನ್ನು ಪ್ರತಿನಿತ್ಯ ಪ್ರಾರ್ಥಿಸಿದರೆ ಮನೋಧೈರ್ಯ ಬರುತ್ತದೆಯಲ್ಲದೆ, ದೇಹಕ್ಕೆ ವಿಶೇಷ ಶಕ್ತಿ ಬರುತ್ತದೆ ಹಾಗೂ ಸುಖ ಸಂಪತ್ತುಗಳು ಲಭ್ಯವಾಗುತ್ತವೆ.

ಭಗವಂತ ಸಕಲ ಗುಣಗಣ ಪರಿಪೂರ್ಣ, ನಿರ್ದೋಷಿ, ನಿಷ್ಕಳಂಕ, ಸರ್ವಶಕ್ತ, ಸರ್ವವ್ಯಾಪ್ತ ಹಾಗೂ ಸರ್ವಾಂತರ್ಯಾಮಿ-ಎಂಥ ವಿಶಿಷ್ಟ ಗುಣೋಪೇತ ನಮ್ಮ ಶ್ರೀಹರಿ ಅಲ್ಲವೆ? "ವಿಷ್ಣು ಜಿಷ್ಣುಂ ಮಹಾವಿಷ್ಣುಂ ಸರ್ವಲೋಕ ಮಹೇಶ್ವರಂ" ಎಂದೇ ಶ್ರೀವಿಷ್ಣು ಸಹಸ್ರನಾಮ ಭಗವಾನ್ ಮಹಾ ವಿಷ್ಣುವಿನ ಗುಣ ವಿಶೇಷಗಳನ್ನು ಮನಸಾರೆ ಪ್ರಶಂಸಿಸುತ್ತದೆ. ವಿಷ್ಣು ಎಂದರೆ ಸರ್ವವ್ಯಾಪ್ತನೆಂದರ್ಥ.ಅಂತಹ ವಿಷ್ಣುಸಹಸ್ರ ನಾಮವನ್ನು ಶ್ರೀಪರಾಶರಭಟ್ಟರು "ಭಗವದ್ಗುಣ ದರ್ಪಣ" (ಭಗವಂತನ ಗುಣಗಳಿಗೆ ಹಿಡಿದ ಕನ್ನಡಿ)ಎಂದೇ ವ್ಯಾಖ್ಯಾನಿಸಿದ್ದಾರೆ. ಈ ವಿಷ್ಣುಸಹಸ್ರನಾಮ (ಸ್ತೋತ್ರ/ನಾಮಾವಳಿ) ಪುಂಜದಲ್ಲಿ ಉಕ್ತವಾಗಿರುವ ಜನಪ್ರಿಯವೂ ಮಹಾ ಮಹಿಮಾನ್ವಿತವೂ ಆಗಿರುವ ಅವತಾರಗಳು ಮೂರು. 1) ನರಸಿಂಹ 2) ರಾಮ 3) ಕೃಷ್ಣ.

ನರಸಿಂಹಾವತಾರದ ಕಥಾನಕ ಎಲ್ಲರೂ ಬಲ್ಲರು. ಸಿಂಹಮುಖದ ಮನುಷ್ಯ ಶರೀರದಿಂದ ಘೋರವಾದ ರೂಪ ತಾಳಿ ಸ್ತಂಭದಿಂದ ಅವತರಿಸಿದ ಭಗವಂತ ಬಹು ಕೋಪದಿಂದ ರಕ್ಕಸ ಹಿರಣ್ಯಕಶಿಪುವಿನ ಮೇಲೆರಗಿ ಅವನನ್ನು ದರದರನೆ ಎಳೆದು ತಂದು ಮೊದಲಿಗೆ ತಾನೇ ರಾಜಸಭಾ ದ್ವಾರದ ಹೊಸ್ತಿಲ ಮೇಲೆ ಕುಳಿತು. ಅನಂತರ ರಕ್ಕಸನನ್ನು ಸೆಳೆದು ತನ್ನ ತೊಡೆಗಳ ಮೇಲೆ ಮಲಗಿಸಿಕೊಂಡು ಬಹು ಚೂಪಾದ ತನ್ನ ನಖಗಳಿಂದ ರಕ್ಕಸನ ಎದೆಸೀಳಿ ಸಂಹಾರ ಮಾಡಿದ. ಇದು ಸಾಮಾನ್ಯವಾಗಿ ಎಲ್ಲರೂ ತಿಳಿದುಕೊಂಡಿರುವ ನರಸಿಂಹನ ಕಥೆ. ರಾತ್ರಿಯೂ ಅಲ್ಲ, ಹಗಲೂ ಅಲ್ಲ, ಸಂಜೆಯ ವೇಳೆ. ಆಯುಧ ಯಾವುದೂ ಬಳಸಿಲ್ಲ ತೀಕ್ಷ್ಣವಾದ ವಜ್ರನಖಗಳಿಂದ ರಕ್ಕಸನನ್ನು ಬಗೆದು ಕೊಂದದ್ದು ಮನೆಯ ಹೊರಗೂ ಅಲ್ಲ, ಒಳಗೂ ಅಲ್ಲ, ಹೊಸ್ತಿಲ ಮೇಲೆ ಕುಳಿತು ನರಸಿಂಹ ಸ್ವಾಮಿಯು ಹಿರಣ್ಯಕಶಿಪುವನ್ನು ಸಿಗಿದದ್ದು, ಪ್ರಹ್ಲಾದ ಪರಿಪಾಲನೆ ಮಾಡಿದ ಮುಖ್ಯ ಕಾರಣ ಎಲ್ಲ ಪುರಾಣಗಳಲ್ಲೂ ಉಲ್ಲೇಖಿತವಾಗಿದೆ.

ಪುರಾಣಗಳ ಪ್ರಕಾರ ಹಿರಣ್ಯಕಶಿಪುವಿನ ಸಂಹಾರ ಮಾಡಿದ ಮೇಲೂ ನರಸಿಂಹನ ಕೋಪ ಇಳಿಯಲಿಲ್ಲ. ದೇವತೆಗಳೆಲ್ಲರೂ ಹೆದರಿ ಭಗವಂತನನ್ನು ಶಾಂತವಾಗಿಸುವಂತೆ ಮಹಾಲಕ್ಷ್ಮೀದೇವಿಯನ್ನು ಪ್ರಾರ್ಥಿಸಿದರು. ಆ ಮಾತಿಗೂ ಆಗದಾಯಿತೆಂದೂ, ಪ್ರಹ್ಲಾದನೇ ಪ್ರಾರ್ಥಿಸಿ ಶ್ರೀ ನರಸಿಂಹನನ್ನು ಶಾಂತಗೊಳಿಸಿದನೆಂದು ಹೇಳಿದೆ. ಈ ದಿಶೆಯಲ್ಲಿ ಭಗವಂತನ ಸ್ವರೂಪ ಗುಣವಿಶೇಷ, ವೈಭವ ಲೀಲಾದಿಗಳನ್ನು ನಾವು ಮನಸ್ಸಿಗೆ ತಂದುಕೊಂಡು ಆಸ್ವಾದಿಸಿದಾಗ ಆ ನರಸಿಂಹನಲ್ಲಿ ಭಕ್ತಿ ಹೆಚ್ಚುಗೊಳ್ಳುತ್ತದೆಯಷ್ಟೇ ಅಲ್ಲ ಸ್ವಾಮಿಯವರಿಂದ ನಮ್ಮ ಅಭೀಷ್ಟ ಪಡೆಯಲು ಸಾಧ್ಯ.ಅಪಾರ ಶ್ರದ್ಧಾಭಕ್ತಿಗಳಿಂದ! ಪಾದ್ಮೋತ್ತರಖಂಡ ಎಂಬ ಪುರಾಣದಲ್ಲಿ ನರಸಿಂಹಾವತಾರದ ಕಥನ ಮನಮುಟ್ಟುವಂತೆ ವರ್ಣನೆಗೊಂಡಿರುವುದು ಪರಿಗ್ರಾಹ್ಯ.

ಶ್ರೀಮನ್‌ನಾರಾಯಣನ ವೈಕುಂಠಲೋಕದ ದ್ವಾರಪಾಲಕರಾಗಿದ್ದ ಜಯ-ವಿಜಯರು ತಾನೇ ಸನಕಾದಿ ಬ್ರಹ್ಮಮಾನಸ ಪುತ್ರ ಋಷಿಗಳಿಂದ ಶಾಪಗೀಡಾದದ್ದು! ವಿಷ್ಣುವಿಗೆ ಜಯನ ಕೈಂಕರ್ಯ ಕಂಡು ಬಹು ಮೆಚ್ಚು. ವಿಜಯ ಹಿರಣ್ಯಾಕ್ಷನಾದ.

ಬಹು ಬೇಗ ವರಾಹವತಾರ ಸ್ವರೂಪಿ ಶ್ರೀಹರಿಯಿಂದ ಮುಕ್ತಿ ಪಡೆದ. ಜಯನು ಮಾತ್ರ ಹಿರಣ್ಯಕಶಿಪು ಜನ್ಮತಾಳಿ ಪ್ರಹ್ಲಾದ ನಂತಹ-ಕೈಯಾದುದುವಿನಂತಹ ಮಗ-ಹೆಂಡತಿಯನ್ನು ಚಿತ್ರ ಹಿಂಸೆ ಗೀಡು ಮಾಡಿದ. ಪ್ರಹ್ಲಾದ ಪರಮ ಭಾಗವತನಲ್ಲವೆ. ತನ್ನ ಪ್ರಾರ್ಥ ನಾಗೈದ ಶ್ರೀಹರಿ ಎಲ್ಲೆಲ್ಲೂ ಇದ್ದನೆಂದೇ ಪ್ರಹ್ಲಾದ ಸಾರಿದ್ದು. ಮುಂದೆ ರಾಜಸಭಾ ಮಂಟಪದ ಒಂದು ಕಂಬವನ್ನು ಖಡ್ಗದಿಂದ ಜಡಿದ ಹಿರಣ್ಯಕಶಿಪು ಮಗ ಪ್ರಹ್ಲಾದನನ್ನು ಕೇಳಿದ "ಎಲ್ಲಿದ್ದಾನೆಯೋ ನಿನ್ನ ಮಾಯಾವಿ ಶ್ರೀಹರಿ. ಅವನು ಈ ಜಡ ಕಂಬ ದಲ್ಲಿದ್ದಾನೆಯೆ ಎಂದು ಪ್ರಶ್ನಿಸಿದರು. ತಕ್ಷಣ ಭಗವಂತನು ಆ ಕಂಬ ಸೀಳಿ ಕೊಂಡೇ ನರಸಿಂಹ ರೂಪದಲ್ಲಿ ಕಾಣಿಸಿಕೊಂಡ. ಹಿರಣ್ಯ ಕಶಿಪು ಒಮ್ಮೆ ನಡುಗಿದ. ಮರುಕ್ಷಣ ಯುದ್ಧ ಅದು ಅನಿರೀಕ್ಷಿತವೆ. ಭಗ ವಂತನ ದಿವ್ಯ ಹಸ್ತಸ್ಪರ್ಶದಿಂದ ರಾಕ್ಷಸನ ಮೈಯಲ್ಲಿ ಎಲ್ಲೆಲ್ಲೂ ವಿದ್ಯುತ್ ಸಂಚಾರವಾದ ಅನುಭವ. ಮುಂದೆ ಆದದ್ದು ರಾಕ್ಷಸ ಸಂಹಾರ ಪ್ರಹ್ಲಾದ ಪರಿಪಾಲನ." ಇಲ್ಲಿ ಭಗವಂತನು ಪ್ರೀತಿ ಯಿಂದ ತನ್ನವನಾದ ಜಯ ಎಂದು ಮಮತೆ ತೋರಿದ. ಇಂತಹ ನರಸಿಂಹ ದೇವರ ಅವತಾರ ಸ್ವರೂಪ ಅಹೋಬಿಲಕ್ಷೇತ್ರ ಪರಿ ಸರ ನವನಾರಸಿಂಹ ಕ್ಷೇತ್ರ ಸರ್ವಾಭಿದ್ವೈತ ಕ್ಷೇತ್ರವೆಂದೇ ಜಗತ್ಪ್ರ ಸಿದ್ಧ. ಇದರಲ್ಲೂ ಐದು ರೂಪ ಪ್ರಧಾನ-ಧ್ಯಾನ ಉಪಾಸನ, ಜ್ವಾಲಾ ನರಸಿಂಹ, ಹಿರಣ್ಯಕಶಿಪು ನರಸಿಂಹ, ಹಿರಣ್ಯಕ ನರಸಿಂಹ, ಯೋಗಾನರಸಿಂಹ, ನರಸಿಂಹ, ಲಕ್ಷ್ಮೀನರಸಿಂಹ, ಮೂರ್ತಿ ಶಿಲ್ಪ ಬೇರೆ ಬೇರೆ ರೀತಿಯದು. ಲಕ್ಷ್ಮೀನರಸಿಂಹ ಸ್ವರೂಪ ಎಲ್ಲೆಡೆ ಶಾಂತ, ಸ್ಮಿತ, ಅನು ಗ್ರಹ ನೀಡುವ ಮೂರ್ತಿ.

ಅಹೋಬಲ ನರಸಿಂಹವು ಪುಣ್ಯಕ್ಷೇತ್ರ. ನರಸಿಂಹರಲ್ಲಿ ವಿಶೇಷ ವೆನಿಸುವಂತದ್ದು ಸುದರ್ಶನ ನರಸಿಂಹ. ಒಂದೇ ವಿಗ್ರಹದಲ್ಲಿ ಮುಂದುಗಡೆ ಶ್ರೀನರಸಿಂಹ, ಹಿಂದುಗಡೆ ಶ್ರೀ ಸುದರ್ಶನ.

ಸುದರ್ಶನ ವಿಶೇಷ ಶಕ್ತಿ ಪ್ರದಾಯಕ ಹಾಗೂ ಮಹಾವಿಷ್ಣುವಿನ ಐದು ಆಯುಧಗಳಲ್ಲಿ ಪ್ರಧಾನ. ಅವನ ಹೆಸರು ಜಪವೇ ವರ ಪ್ರದಾಯಕ ಆಪತ್ ನಿವಾರಕ. ಇನ್ನು ನರಸಿಂಹನ ಬಗ್ಗೆ ಹೇಳ ಬೇಕಾಗಿಯೇ ಇಲ್ಲ.

ಸುದರ್ಶನ ನರಸಿಂಹನನ್ನು ಉಪಾಸನಾ ಮಾರ್ಗದಲ್ಲಿ ಆರಾ ಧಿಸುತ್ತ ಭವರೋಗ ನಿವಾರಣಾ ಅಭೀಷ್ಟಪ್ರದಾಯಕರಾಗಿ ಅನು ಗ್ರಹಿತರಾಗಿರುವವರಿದ್ದಾರೆ. ಇಲ್ಲಿ ಸುದರ್ಶನ ನರಸಿಂಹನ ಧ್ಯಾನ ಉಪಾಸನ ಶುಭ್ರತೆ-ಶರೀರ-ಮನಸ್ಸುಗಳಲ್ಲಿ ಬಹಳ ಮುಖ್ಯ. ಎಷ್ಟೆಷ್ಟು ಧ್ಯಾನವೋ ಅಷ್ಟಷ್ಟು ಹೆಚ್ಚಿನ ಫಲಪ್ರಾಪ್ತಿ. ಇದು ಅನು ಭವೈಕ್ಯ ಸಿದ್ಧಮಾತ್ರ.

ತನ್ನ ನಿಜವಾದ ಭಕ್ತ-ಭೃತ್ಯು ಪ್ರಹ್ಲಾದನಿಗೆ ಆಶ್ವಾಸನೆ ನೀಡಿದಂತೆ, ಎಲ್ಲೆಡೆ ಸರ್ವಭೂತದಲ್ಲೂ ಪ್ರತ್ಯಕ್ಷನಾಗಿ ರುವವನು.



ಸ್ತಂಭದಿಂದ ಹೊರಬಂದಾಗ ಮೃಗವೂ ಅಲ್ಲ ಮನುಷ್ಯ ರೂಪವೂ ಅಲ್ಲ ನರಸಿಂಹಮೃಗಶರೀರ. ಅತ್ಯದ್ಭುತ ಯೋಗಕ್ರಿಯೆಯ ಪರಮೋನ್ನತ ಸ್ಥಿತಿ ಎನ್ನಿಸಿತು. ಪ್ರಹ್ಲಾದ ನಾದಿಯಾಗಿ ಎಲ್ಲರಿಗೂ ಊಹೆಗೂ ನಿಲುಕದ ಸತ್ಯ ಸ್ವ ರೂಪಿ ಭಗವಂತ ತನ್ನ ಉಗುರುಗಳೇ ಸುದರ್ಶನವಾಗಿ ರಲು ಹಿರಣ್ಯಕನನ್ನು ಸಂಹರಿಸಲು ನರಸಿಂಹ ಭಕ್ತ ಭಾಗ ವತರಿಗೆ ಸದಾ ಸುದರ್ಶನ ನರಸಿಂಹನೆ! ಅದೇ ರೀತಿ ರಕ್ಕಸರಿಗೆ ದುರ್ದರ್ಶನನಾದ ಮಾರ್ಕಂಡೇಯ ಋಷಿ ಗಳು ತಮ್ಮ ನರಸಿಂಹ ಸಹಸ್ರನಾಮ ಸ್ತೋತ್ರದಲ್ಲಿ ತಿಳಿಸಿ ರುವ ಮಂತ್ರ ನಮ್ಮೆಲ್ಲರಿಗೂ ಸದಾ ಸರ್ವತಾ ಮನನೀಯ, ಪಠನೀಯ.

ಸುದರ್ಶನ ನರಸಿಂಹನನ್ನು ದೇವಾನುದೇವತೆಗಳಲ್ಲದೆ ಆಚಾರ್ಯರೂ, ಋಷಿಗಳು ಸ್ಮರಿಸಿಕೊಂಡಾಡಿದ್ದಾರೆ. ಶಂಕರಾಚಾರ್ಯರ ಶ್ರೀ ಲಕ್ಷ್ಮೀನರಸಿಂಹ ಕರಾವಲಂಬನ ಸ್ತುತಿ ಬಹು ಪ್ರಸಿದ್ಧ. ಅದೇ ರೀತಿಯಲ್ಲಿ ನಿಗಮಾಂತ ಮಹಾ ದೇಶಿಕರು ನರಸಿಂಹನನ್ನು ಕೀರ್ತಿಸುತ್ತಾರೆ. ಶ್ರೀಮಧ್ವಾ ಚಾರ್ಯರ"ಶ್ರೀನರಸಿಂಹ ನಖಸ್ತುತಿ"ಬಹುಮಾನ್ಯ ಆದದ್ದು. ಸುದರ್ಶನ ನರಸಿಂಹ. ನರಸಿಂಹನ ಉಗುರುಗಳ ವರ್ಣನೆ ಈ ಸ್ತುತಿಗಳಲ್ಲಿದೆ. ಶ್ರೀ ಶ್ರೀಪಾದರಾಜರ 'ನರ ಸಿಂಹ ಪ್ರಾದುರ್ಭಾವ ದಂಡಕ' ತುಂಬಾ ಪ್ರಸಿದ್ಧ ಸ್ತುತಿ.



ಶ್ರೀಪುರಂದರ, ಕನಕದಾಸರು, ಸೋದೇ ವಾದಿರಾಜ ಸ್ವಾಮಿಗಳ ನರಸಿಂಹಸ್ತುತಿ ಬಹು ಶಕ್ತಿಯುತ ಮಂತ್ರ. ಜ್ಞಾನ, ಐಶ್ವರ್ಯ, ಶಕ್ತಿ, ಬಲ, ತೇಜಗುಣಾತ್ಮಕ ಸ್ತುತಿ ಎಂದೇ ಪ್ರಸಿದ್ಧ.

**ಶ್ರೀಲಕ್ಷ್ಮೀನರಸಿಂಹ ಕರಾವಲಂಬನ ಸ್ತೋತ್ರ:**

ಶಂಕರಾಚಾರ್ಯರಿಂದ ರಚಿತವಾದ ಲಕ್ಷ್ಮಿನೃಸಿಂಹ ಕರುಣಾರಸ ಸ್ತೋತ್ರವನ್ನು ಯಾರು ಅನುದಿನವೂ ಶ್ರದ್ಧಾ ಭಕ್ತಿಯಿಂದ ಪಠಿಸುತ್ತಾರೆಯೂ ಇಲ್ಲವೇ ಶ್ರವಣ ಮಾಡುತ್ತಾರೆಯೊ ಅವರ ಜೀವನದಲ್ಲಿ ಯಾವುದೇ ರೀತಿಯ ದುರ್ಘಟನೆಗಳು, ಸಂಕಟಗಳು,ಅಪಮೃತ್ಯು ಬಾಧೆಗಳೆಲ್ಲಾ ನಾಶವಾಗುತ್ತದೆ ಎಂದು ಗುರು ಹಿರಿಯರು ಬೋಧಿಸಿರುತ್ತಾರೆ.

ಈ ಶ್ಲೋಕವು ಪೂಜಾ ಮಂತ್ರ ಪುಸ್ತಕಗಳಲ್ಲಿವೆ. ಆದರೆ, ಈ ಶ್ಲೋಕ ಪಾರಾಯಣೆಯನ್ನು ತಾವುಗಳು ಮಾಡಲಿ ಹಾಗೂ ಲಕ್ಷ್ಮೀನೃಸಿಂಹರ ಕೃಪೆಗೆ ಪಾತ್ರರಾಗಲಿ ಎನ್ನುವ ಘನ ಉದ್ದೇಶದಿಂದ ಸ್ತೋತ್ರದ ಮೊದಲ ಮೂರು ಶ್ಲೋಕಗಳನ್ನು ಈ ಕೆಳಗೆ ನೀಡಲಾಗಿದೆ.

**ಶ್ರೀ ಶಂಕರಾಚಾರ್ಯ ಕೃತಮ್ :**

ಶ್ರೀ ಲಕ್ಷ್ಮೀನೃಸಿಂಹಕರುಣಾರಸ ಅಥವಾ ಕರಾ ವಲಂಬ ಸ್ತೋತ್ರಂ


ಶ್ರೀಮತ್ಪಯೋನಿಧಿನಿಕೇತನ ಚಕ್ರಪಾಣೇ
ಭೋಗೀಂದ್ರ ಭೋಗಮಣಿರಾಜಿತ ಪುಣ್ಯಮೂರ್ತೇ।
ಯೋಗೀಶ ಶಾಶ್ವತ ಶರಣ್ಯ ಭವಾಬ್ಧಿಪೋತ
ಲಕ್ಷ್ಮೀನೃಸಿಂಹ ಮಮದೇಹಿ ಕರಾವಲಂಬಮ್
ಬ್ರಹ್ಮೇಂದ್ರರುದ್ರಮರುದರ್ಕಕಿರೀಟಕೋಟಿ -
ಸಂಘಟ್ಟಿತಾಂಘ್ರಿ ಕಮಲಾಮಲಕಾಂತಿಕಾಂತ ।
ಲಕ್ಷ್ಮೀಲಸತ್ಕುಚ ಸರೋರುಹ ರಾಜಹಂಸ
ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್
ಸಂಸಾರಸಾಗರವಿಶಾಲಕರಾಲಕಾಲ-
ನಕ್ರಗ್ರಹಗ್ರಸಿತ ನಿಗ್ರಹವಿಗ್ರಹಸ್ಯ।
ವ್ಯಗ್ರಸ್ಯ ರಾಗನಿಚಯೋರ್ಮಿನಿಪೀಡಿತಸ್ಯ
ಲಕ್ಷ್ಮೀನೃಸಿಂಹ ಮಮ ದೇವಿ ಕರಾವಲಂಬಮ್

ನರಸಿಂಹ ಸುದರ್ಶನ ಅಹಿರ್ಬುಧ್ನ್ಯ ಸಂಹಿತೆಯಲ್ಲಿ ಭಗವಾನ್ ನಾರಸಿಂಹನ ವ್ಯಾಪಾಕತೆಯ ಕುರಿತಾಗಿ ವಿಸ್ತಾರವಾಗಿ ವಿವರಿಸಲಾಗಿದೆ. ಪಾಂಚರಾತ್ರ ಮತ್ತು ವೈಖಾನಸ ಆಗಮ ಶಾಸ್ತ್ರದಲ್ಲಿ ವಿವರಿಸಿದಂತೆ ನಾರಸಿಂಹನನ್ನು ನಾಲ್ಕು ಸ್ಥಳಗಳಲ್ಲಿ ಅಂದರೆ ಪಾತಾಳದಲ್ಲಿ, ಕಂಬಗಳಲ್ಲಿ, ಬೆಟ್ಟಗಳಲ್ಲಿ ಮತ್ತು ಸುದರ್ಶನ ಯಂತ್ರದಲ್ಲಿ ಪೂಜಿಸಲಾಗುತ್ತದೆ. ಸುದರ್ಶನ ಚಕ್ರ ಮತ್ತು ಭಗವಾನ್ ನರಸಿಂಹರ ಆರಾಧನೆಯನ್ನು ಪಾಂಚರಾತ್ರ ಹಾಗೂ ವೈಖಾನಸ ಆಗಮಗಳ ಸಂಯುಕ್ತ ಆರಾಧನೆಯಾಗಿದೆ.

ಓಂ ಕ್ಲೀಂ ಕೃಷ್ಣಾಯ ಗೋವಿಂದಾಯ
ಗೋಪೀಜನವಲ್ಲಭಾಯ ಪರಾಯ
ಪರಮಪುರುಷಾಯ ಪರಮಾತ್ಮನೇ
ಪರಕರ್ಮಮಂತ್ರಯಂತ್ರೌಷಧಾಸ್ತ್ರಶಸ್ತ್ರಾಣಿ
ಸಂಹರ ಸಂಹರ ಮೃತ್ಯೂರ್ಮೋಚಯ ಮೋಚಯ
ಓಂ ನಮೋ ಭಗವತೇ ಮಹಾಸುದರ್ಶನಾಯ
ದೀಪ್ತ್ರೇ ಜ್ವಾಲಾಪರೀತಾಯ ಸರ್ವ
ಧೀಕ್ಷೋಭಣಕರಾಯ ಹುಂ ಫಟ್
ಬ್ರಹ್ಮಣೇ ಪರಂ ಜ್ಯೋತಿಷೇ ಸ್ವಾಹಾ ಮಂತ್ರ

ಓಂ ಉಗ್ರಂ ವೀರಂ ಮಹಾವಿಷ್ಣುಂ ಜ್ವಲಂತಂ
ಸರ್ವ ತೋ ಮುಖಂ
ನರಸಿಂಹಂ ಭೀಷಣ ಭದ್ರಂ ಮೃತ್ಯುಂ ಮೃತ್ಯುಂ ನಮಾ ಮ್ಯಹಂ।

ಈ ಮಂತ್ರ ಉಚ್ಚಾರಣೆಯಿಂದ ಸಕಲ ದುಷ್ಟ ಶಕ್ತಿಗಳಿಂದಲೂ ಮುಕ್ತಿ ಸಿಗುವುದು.



# ಹಿಂದೂ ಧರ್ಮ ಪುನರುತ್ಥಾನಗೊಳಿಸಿದ ಆದಿ ಶಂಕರರು


- ಹನುಮಂತ ಮ. ದೇಶಕುಲಕರ್ಣಿ

94803 64915


ಸನಾತನ ಭಾರತದ ಸಂಸ್ಕೃತಿಯನ್ನು ಜಗತ್ತಿಗೆ ಸಾರಿ ಹೇಳಿದ ಆಚಾರ್ಯತ್ರಯರಲ್ಲಿ ಶಂಕರಾಚಾರ್ಯರು ಮೊದಲಿಗರು (ಆದಿ ಶಂಕರರು). ಕೇವಲ 32 ವರ್ಷಗಳ ಕಾಲ ಜೀವಿಸಿದ್ದರು. ಈ ಅಲ್ಪಾವಧಿಯಲ್ಲಿಯೇ ದೇಶದ ಮೂಲೆ ಮೂಲೆಗಳಿಗೆ ಸಂಚರಿಸಿ ಗೀತಾಚಾರ್ಯ ಶ್ರೀಕೃಷ್ಣನ ಸಿದ್ಧಾಂತವಾದ "ಅದ್ವೈತ" ತತ್ವವನ್ನು ಪ್ರತಿಪಾದಿಸುತ್ತ ಜಗತ್ತಿಗೆ ಸಾರಿ, ಹಲವಾರು ಮತಗಳಿಂದ ದಾಳಿಗೊಳಗಾಗುತ್ತಿದ್ದ ಸನಾತನ ಹಿಂದೂ ಧರ್ಮವನ್ನು ಪುನರುತ್ಥಾನಗೊಳಿಸಿದರು. ಆದಿಶಂಕರರು ಭಗವದ್-ಗೀತೆ, ಉಪನಿಷತ್ ಹಾಗೂ ಬ್ರಹ್ಮಸೂತ್ರಗಳಿಗೆ ಭಾಷ್ಯ ಬರೆದ ಮೊದಲ ಆಚಾರ್ಯರಾದರು.

ಇವರು 8 ನೇ (ಕ್ರಿ.ಶ. 788) ಶತಮಾನಲ್ಲಿ ಜನಿಸಿದದರು ಎಂದು ನಂಬಲಾಗಿದೆ. ಇವರು ಹುಟ್ಟಿದ್ದು ಕೇರಳ ರಾಜ್ಯದ ಕಾಲಡಿ ಎಂಬ ಹಳ್ಳಿಯ ಒಂದು ಬಡ ಬ್ರಾಹ್ಮಣ ಕುಟುಂಬದಲ್ಲಿ. ಹುಟ್ಟಿದ ದಿನ ವಿಭವ ಸಂವತ್ಸರದ ವೈಶಾಖ ಮಾಸದ ಶುಕ್ಲ ಪಕ್ಷದ ಪಂಚಮೀ ತಿಥಿಯಂದು. ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡರು. ಆಧ್ಯಾತ್ಮಿಕತೆಯಲ್ಲಿ ಆಸಕ್ತಿತಳೆದ ಇವರು ಸನ್ಯಾಸತ್ವವನ್ನು ಸ್ವೀಕರಿಸುವತ್ತ ಒಲವು ತೋರಿದರು. ಆದರೆ ಒಬ್ಬನೇ ಮಗನಾಗಿದ್ದ ಶಂಕರರನ್ನು ಸನ್ಯಾಸಿಯಾಗಿ ನೋಡಲು ತಾಯಿಗೆ ಮನಸ್ಸಿರಲಿಲ್ಲ.

ಹಾಗಾಗಿ ತಾಯಿಯ ಮನವೊಲಿಸಲು ಶಂಕರರು ಬಹಳ ಕಷ್ಟ ಪಡಬೇಕಾಯಿತು. ಆಕೆಯ ಅಂತಿಮ ಕ್ಷಣಗಳಲ್ಲಿ ತಾನು ಎಲ್ಲಿದ್ದರೂ ಆಕೆಯ ಎದುರು ಬಂದು ನಿಲ್ಲುವುದಾಗಿ ಮಾತು ಕೊಟ್ಟ ಶಂಕರರು ಸೂಕ್ತ ಗುರುವಿಗಾಗಿ ಹುಡುಕುತ್ತಾ ತಮ್ಮ ಪಯಣವನ್ನಾರಂಭಿಸಿದರು. ತಾಯಿಗೆ ಕೊಟ್ಟ ಮಾತಿನ ಪ್ರಕಾರ ಆಕೆಯ ಕೊನೆಗಾಲದಲ್ಲಿ ಕಾಲಡಿಗೆ ಹಿಂದಿರುಗಿದ ಶಂಕರರು ಆಕೆಯ ಅಂತಿಮ ವಿಧಿಗಳನ್ನು ಪೂರೈಸಿದರು.

ಸಣ್ಣ ವಯಸ್ಸಿನಲ್ಲೇ ಕ್ರಾಂತಿಕಾರಕಚಿಂತನೆಯ ಮನೋಭಾವ ಬಾಲ ಶಂಕರರಲ್ಲಿ ಜಾಗೃತವಾಗಿದ್ದನ್ನು ಅವರ ಬಗೆಗಿನ ಕತೆಗಳಲ್ಲಿ ಕಾಣುತ್ತೇವೆ. ಬ್ರಾಹ್ಮಣವಟುಗಳಲ್ಲಿ ಅಂದಿನ ದಿನಗಳಲ್ಲಿದ್ದ ಭಿಕ್ಷಾಧರ್ಮದ ಪ್ರಕಾರ ಇವರು ಮನೆಮನೆಗೆ ಹೋಗಿ "ಭವತಿ ಭಿಕ್ಷಾಂ ದೇಹಿ, ಭವಾನ್ ಭಿಕ್ಷಾಂ ದೇಹಿ" ಎನ್ನುವಾಗ ಒಬ್ಬ ಶ್ರೀಮಂತ ಧಾರಳವಾಗಿ ಕರೆದು ಎಲ್ಲರಿಗೂ ಹಂಚುತ್ತಿದ್ದ ಆದರೆ ಬಾಲಶಂಕರರು ಆತನಲ್ಲಿ ಭಿಕ್ಷೆ ಪಡೆಯುವುದಕ್ಕೆ ಹತ್ತಿರ ಬರದೆ ದೂರದಿಂದನೋಡುತ್ತಿದ್ದರು. "ಬಾಪ್ಪಾ ಸ್ವೀಕರಿಸು ಬಾ" ಎಂದಾಗ, "ನೀನು ಅವಶ್ಯಕತೆಗಿಂತ ಹೆಚ್ಚು ಸಂಪತ್ತನ್ನು ಕೂಡಿಟ್ಟು, ಕೊಂಡಿದ್ದೀಯೆ, ನಾನು ನಿನ್ನ ಬಳಿ ಭಿಕ್ಷೆ ಸ್ವೀಕರಿಸಲು ನಿರಾಕರಿಸುತ್ತೇನೆ" ಎಂದು ಹೇಳಿದ ಅವರ ಚಿಂತನೆ ನಮ್ಮ ಮನಸ್ಸನ್ನು ಅತೀವವಾಗಿ ಸೆರೆ ಹಿಡಿದಿಡುತ್ತದೆ.

ನಮ್ಮಲ್ಲಿರುವ ಆತ್ಮವೇ ದೇವರಾಗಿರುವಾಗ ಎದುರಿಗೆ ಬಂದ ಚಾಂಡಾಲನನ್ನು ಕಂಡು ಮೈಲಿಗೆಯಾಗುತ್ತದೆ ಅತ್ತ ಸರಿ ಎಂದ ಅವರಿಗೆ ಕ್ಷಣದಲ್ಲೇ ತಪ್ಪಿನ ಅರಿವಾಗಿ ಆತನ ಕಾಲಿಗೆರಗಿ ಆತನೊಳಗೂ ಇರುವ ಶಿವಸ್ವರೂಪಿ ಭಗವಂತನನ್ನು ಕಾಣುವ ಶಂಕರರ ಆಧ್ಯಾತ್ಮದ ಅದ್ವೈತದ ಭಾವ ನಮ್ಮನ್ನು ಅತೀವವಾಗಿ ಮನಸೆಳೆಯುತ್ತವೆ. ನಾನು ನಾನಾ ವಿಕಲ್ಪಗಳಿಲ್ಲದವನು. ನಿರಾಕಾರನೂ ಎಲ್ಲ ಕಡೆ ಇರುವವನೂ ಆಗಿದ್ದೇನೆ. ಎಲ್ಲ ಇಂದ್ರಿಯಗಳೊಡನೆ ಸಂಗತನೂ ನಾನಾಗಿದ್ದೇನೆ ನನಗೆ ಬಂಧವೂ ಇಲ್ಲ. ಮುಕ್ತಿಯೂ ಇಲ್ಲ. ಕೇವಲ ಆನಂದ ಸ್ವರೂಪನಾದ ಸದಾಶಿವನೇ ನಾನು.

ಶ್ರೀ ಶಂಕರರ ಮತ್ತೊಂದು ಪ್ರಸಿದ್ಧವಾದ "ಭಜಗೋವಿಂದಂ, ಭಜ ಗೋವಿಂದಂ, ಗೋವಿಂದಂ ಭಜ ಮೂಢಮತೆ, ಸಂಪ್ರಾಪ್ತೇ ಸನ್ನಿಹಿತೇ ಕಾಲೇ ನಹಿ ನಹಿ ರಕ್ಷತಿ ಢುಕ್ರಿಙ್ಕರಣೇ" ಗೀತೆಯಂತೂ ನಾವು ಬದುಕುವ ರೀತಿಗೂ ನಮ್ಮ ಬದುಕಿನ ಮೂಲ ಪ್ರೇರಣೆಗಳಿಗೂ ಇರುವ ಅಜಗಜಾಂತರವನ್ನು ಸಾರ್ವಕಾಲಿಕವಾಗಿ ಕನ್ನಡಿಯಂತೆ ತೋರುವ ದಿವ್ಯದರ್ಶನವಾಗಿ ಕಣ್ಣೆದುರು ನಿಲ್ಲುತ್ತದೆ. ಈ ಸಾಲುಗಳನ್ನು ಶ್ರೀ ಶಂಕರರರು ಒಂದು ಹಳ್ಳಿಯಲ್ಲಿ ಹಾದು ಹೋಗುತ್ತಾ ಓರ್ವ ವೃದ್ಧನು ವ್ಯಾಕರಣ ಸೂತ್ರ ಬಾಯಿಂದ ಪಾಠ ಮಾಡುವುದನ್ನು ಕಂಡು ಅವನ ಮೇಲೆ ಕನಿಕರಿಸಿ ಬರೆದರಂತೆ. ಸಾಯುವ ಹೊತ್ತಿನಲ್ಲಿ ಈ ಮುದುಕ ವ್ಯಾಕರಣ ಸೂತ್ರ ಬಡಬಡಿಸುವುದನ್ನು ಕಂಡು ಅವರಿಗೆ ಕರುಣೆಯುಂಟಾಯಿತು. ಬಾಳೆಲ್ಲಾ ಕಳೆದು ಆಗಿದೆ. ಈಗ ಕಡೆಯ



ಕ್ಷಣವನ್ನೂ ಸಹಾ ಈತ ಕಳೆದುಕೊಳ್ಳುತ್ತಿರುವನು. ಪರಮಾತ್ಮನನ್ನು ಸ್ಮರಿಸದೆ ಜೀವನವೆಲ್ಲಾ ಗತಿಸಿತು. ಇನ್ನೂ ಇವನು ವ್ಯಾಕರಣ ಸೂತ್ರವನ್ನು ಬಿಡುತ್ತಿಲ್ಲ. ಒಟಗುಟ್ಟುತ್ತಿರುವನು. ಈ ಸೂತ್ರಗಳಿಂದೇನು ಆಗಬೇಕಾಗಿದೆ? ಹೀಗೆ ಸುಂದರವಾಗಿ ಸಾಗುತ್ತದೆ ಶಂಕರರ ಬದುಕಿನ ಸೌಂದರ್ಯ ದೃಷ್ಟಿ.

ಸನಾತನ ಭಾರತದ ಸಂಸ್ಕೃತಿಯನ್ನು ಜಗತ್ತಿಗೆ ಸಾರಿ ಹೇಳಿ ಆಚಾರ್ಯ ತ್ರಯರಲ್ಲಿ ಶಂಕರಾಚಾರ್ಯರು ಮೊದಲಿಗರು. ಹೀಗಾಗಿ ಅವರು ಆದಿ ಶಂಕರರು. ಕೇವಲ 32 ವರ್ಷಗಳ ಕಾಲ ಜೀವಿಸಿದ್ದರು ಎಂದು ನಂಬಲಾಗಿರುವ ಶಂಕರಾಚಾರ್ಯರು ಈ ಅಲ್ಪಾವಧಿಯಲ್ಲಿಯೇ ದೇಶದ ಮೂಲೆ ಮೂಲೆಗಳಿಗೆ ಸಂಚರಿಸಿ ಗೀತಾಚಾರ್ಯ ಶ್ರೀಕೃಷ್ಣನ ಸಿದ್ಧಾಂತವಾದ "ಅದ್ವೈತ" ತತ್ವವನ್ನು ಪ್ರತಿಪಾದಿಸುತ್ತ ಜಗತ್ತಿಗೆ ಸಾರಿ,ಹಲವಾರು ಮತ ಗಳಿಂದ ದಾಳಿಗೊಳಗಾಗುತ್ತಿದ್ದ ಸನಾತನ ಹಿಂದೂ ಧರ್ಮವನ್ನು ಪುನರುತ್ಥಾನಗೊಳಿಸಿದರು.

ಶೈವ, ವೈಷ್ಣವ, ಶಾಕ್ತ, ಗಾಣಪತ್ಯ, ಸೌರ ಹಾಗೂ ಸ್ಕಾಂದ ಮತಗಳನ್ನು ಒಗ್ಗೂಡಿಸಿ, ಷಣ್ಮತ ಪ್ರತಿಷ್ಠಾಪಕರಾದರು. ಆದಿಶಂಕರರು ಭಗವದ್ - ಗೀತೆ, ಉಪನಿಷತ್ ಹಾಗೂ ಬ್ರಹ್ಮ ಸೂತ್ರಗಳಿಗೆ ಭಾಷ್ಯ ಬರೆದ ಮೊದಲ ಆಚಾರ್ಯರಾದರು.

ಶಂಕರರು ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡರು. ಆಧ್ಯಾತ್ಮಿಕತೆಯಲ್ಲಿ ಆಸಕ್ತಿ ತಳೆದ ಇವರು ಸನ್ಯಾಸತ್ವವನ್ನು ಸ್ವೀಕರಿಸುವತ್ತ ಒಲವು ತೋರಿದರು. ಆದರೆ ಒಬ್ಬನೇ ಮಗನಾಗಿದ್ದ ಶಂಕರರನ್ನು ಸನ್ಯಾಸಿಯಾಗಿ ನೋಡಲು ತಾಯಿಗೆ ಮನಸ್ಸಿರಲಿಲ್ಲ. ಹಾಗಾಗಿ ತಾಯಿಯ ಮನವೊಲಿಸಲು ಶಂಕರರು ಬಹಳ ಕಷ್ಟಪಡಬೇಕಾಯಿತು. ಆಕೆಯ ಅಂತಿಮ ಕ್ಷಣಗಳಲ್ಲಿ ತಾನು ಎಲ್ಲಿದ್ದರೂ ಆಕೆಯ ಎದುರು ನಿಲ್ಲುವುದಾಗಿ ಮಾತು ಕೊಟ್ಟ ಶಂಕರರು ಸೂಕ್ತ ಗುರುವಿಗಾಗಿ ಹುಡುಕುತ್ತಾ ತಮ್ಮ ಪಯಣವನ್ನಾರಂಭಿಸಿದರು. ನರ್ಮದಾ ನದಿ ತೀರದಲ್ಲಿ ಗೋವಿಂದ ಭಗವತ್ಪಾದರನ್ನು ಭೇಟಿಯಾದ ಶಂಕರರು ಅವರನ್ನು ತನ್ನ ಗುರುಗಳನ್ನಾಗಿ ಸ್ವೀಕರಿಸಿದರು. ಅವರಿಂದ ಯೋಗ, ವೇದ, ಉಪನಿಷತ್, ವೇದಾಂತಗಳನ್ನು ಅಭ್ಯಾಸ ಮಾಡಿದ ನಂತರ ಕಾಶಿಗೆ ತೆರಳಿ ಅಲ್ಲಿ ಕೆಲವರನ್ನು ತಮ್ಮ ಶಿಷ್ಯರನ್ನಾಗಿಸಿಕೊಂಡು ಅವರಿಗೂ ವೇದಾಂತದ ಪಾಠ ಹೇಳಿಕೊಟ್ಟರು.

ಶಂಕರರಿಗೆ ತಮ್ಮ ಚಿಂತನೆಯಲ್ಲಿ ಸ್ಪಷ್ಟತೆ ಇತ್ತು. ದೇಶದ ಮೂಲೆ ಮೂಲೆಗಳಲ್ಲಿ ಸಂಚರಿಸಿದ ಶಂಕರರ ವ್ಯಕ್ತಿತ್ವಕ್ಕೆ ತಮ್ಮ ವಿಚಾರ ಮಂಡನೆಯಲ್ಲಿ ಕೇಳುಗನನ್ನು ನೇರ ಒಳಹೊಕ್ಕುವ ಖಚಿತತೆ ಇತ್ತು. ಬುದ್ಧನ ಜೀವನದಲ್ಲೂ ನಾವು ಕಾಣುವಂತಹ ಎಲ್ಲವನ್ನೂ ಸ್ಪಟಿಕದಂತೆ ನೇರವಾಗಿ ಖಚಿತವಾಗಿ ಕಾಣುವ ಶಕ್ತಿಯದು, ಇದನ್ನು ಅಂದಿನ ಸಮಸ್ತ ಭಾರತವೂ ಕಾಣಲೂ ಸಾಧ್ಯವಾಯಿತೆಂದು ಇತಿಹಾಸದಿಂದ ತಿಳಿದು ಬರುತ್ತದೆ. ಮಂಡನ ಮಿಶ್ರರಂತಹ ತೇಜಸ್ವೀ ಬ್ರಹ್ಮಜ್ಞಾನಿಗಳೇ ಶ್ರೀ ಸುರೇಶ್ವರಾಚಾರ್ಯ ಎಂಬ ಹೆಸರಿನಿಂದ ಪ್ರಸಿದ್ಧರಾದ ಶಂಕರರ ಶಿಷ್ಯರಾದರು. ಶಂಕರರು ದೇಶದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಪೀಠ (ಮಠ) ಗಳನ್ನು ಸ್ಥಾಪಿಸಿ, ಪ್ರತಿಯೊಂದು ಪೀಠಕ್ಕೂ ತಮ್ಮ ಒಬ್ಬೊಬ್ಬ ಶಿಷ್ಯರನ್ನು ಪೀಠಾಧಿಪತಿಯನ್ನಾಗಿಸಿದರು. ಹೀಗೆ "ಅದ್ವೈತ" ಸಿದ್ಧಾಂತವನ್ನು ಜನಪ್ರಿಯಗೊಳಿಸಿದರು.

ಬುದ್ಧಿವಂತಿಕೆಯ ತರ್ಕ ವಾದಗಳನ್ನೇ ಬಂಡವಾಳ ಮಾಡಿಕೊಂಡು, ಮತ್ತೊಬ್ಬರನ್ನು ಹೀಯಾಳಿಸುತ್ತಾ, ಮುಗ್ಧ ಜನರನ್ನು ಶೋಷಿಸುತ್ತಾ ತಾವೇ ಭಗವಂತನ ಅಪರಾವತಾರ ಎಂದುಕೊಳ್ಳುವ ಜನ ಈ ಕಾಲದಲ್ಲಿ ಹೇಗಿದ್ದಾರೋ ಅಂದೂ ಇದ್ದರು. ಆದರೆ ಶಂಕರರ ದಿವ್ಯತೇಜಸ್ಸಿನ ಮುಂದೆ ಅವರೆಲ್ಲರೂ ಸೋಲುಕಾಣಬೇಕಾಯಿತು. ಹೀಗೆ ಹಲವಾರು ಪಂಡಿತರನ್ನೂ ಶಾಸ್ತ್ರ ವೇತ್ತರನ್ನೂ ಜಯಿಸಿ, ಶಂಕರರು ಸರ್ವಜ್ಞ ಪೀಠವನ್ನೇರಿದರು. ಭಾರತದ ದಕ್ಷಿಣದಲ್ಲಿ ವಾದ ಮಾಡಿ ತಮ್ಮನ್ನು ಜಯಿಸುವವರೇ ಇಲ್ಲವೆಂದು ಹೀಗಳೆದು ಶಾರದೆಯ ದೇಗುಲದ ದಕ್ಷಿಣದಲ್ಲಿ ವಾದ ಮಾಡಿ ತಮ್ಮನ್ನು ಜಯಿಸುವವರೇ ಇಲ್ಲವೆಂದು ಹೀಗಳೆದು ಶಾರದೆಯ ದೇಗುಲದ ದಕ್ಷಿಣದ ಬಾಗಿಲನ್ನು ಮುಚ್ಚಿಸಿದ್ದ ಕಾಶ್ಮೀರದ ಪಂಡಿತರ ಬಾಯಿ ಮುಚ್ಚಿಸಿದರು ಕಾಶ್ಮೀರ ಪುರವಾಸಿನಿ ಶಾರದೆಯ ದೇಗುಲದ ದಕ್ಷಿಣದ್ವಾರವನ್ನೂ, ಅದರೊಂದಿಗೆ ದುರಹಂಕಾರಿ ಔತ್ತರೇಯರ ಕಣ್ಣನ್ನೂ ತೆರೆಸಿದ ಮಹನೀಯರಾದರು.

ಉತ್ತರದಲ್ಲಿ ಬದರಿ ಪೀಠ, ಉತ್ತರಾಮ್ನಾಯ ಜ್ಯೋತಿರ್ ಮಠ; ದಕ್ಷಿಣದಲ್ಲಿ ಶೃಂಗೇರಿ ಪೀಠ-ದಕ್ಷಿಣಾಮ್ನಾಯ ಶಾರದಾ ಮಠ; ಪೂರ್ವದಲ್ಲಿ ಪುರಿ ಪೀಠ-ಪೂರ್ವಾಮ್ನಾಯ ಗೋವರ್ಧನ ಮಠ ; ಪಶ್ಚಿಮದಲ್ಲಿ ದ್ವಾರಕಾ ಪೀಠ -ಪಶ್ಚಿಮಾಮ್ನಾಯ ಮಠ ಈ ನಾಲ್ಕೂ ಮಠಗಳು ಇಂದಿಗೂ ತಮ್ಮ ಗುರು ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿವೆ.

ಶಂಕರರು ಬಾದರಾಯಣರ "ಬ್ರಹ್ಮಸೂತ್ರ" (ವೇದಾಂತ ಸೂತ್ರ) ಗಳಿಗೆ ಭಾಷ್ಯವನ್ನು ರಚಿಸಿದರು. ಉಪನಿಷತ್ತುಗಳಿಗೆ ವ್ಯಾಖ್ಯಾನ ನೀಡಿದರು. ಅಲ್ಲದೆ





ಶ್ರೀಮದ್ಭಗವದ್ಗೀತೆಗೆ ಭಾಷ್ಯವನ್ನು ಬರೆದು ಪ್ರಸ್ಥಾನತ್ರಯಗಳನ್ನು ಪೂರ್ಣಗೊಳಿಸಿದರು.

'ಭಜಗೋವಿಂದಮ್',ಸೌಂದರ್ಯಲಹರಿ ಮುಂತಾದ ಹಲವಾರು ಸೊಗಸಾದ ಸ್ತೋತ್ರಗಳನ್ನೂ ಕೂಡಾ ಶಂಕರರು ರಚಿಸಿದ್ದಾರೆ. ತಾಯಿಗೆ ಕೊಟ್ಟ ಮಾತಿನ ಪ್ರಕಾರ ಆಕೆಯ ಕೊನೆ ಗಾಲದಲ್ಲಿ ಕಾಲಟಿಗೆ ಹಿಂದಿರುಗಿದ ಶಂಕರರು ಆಕೆಯ ಅಂತಿಮ ವಿಧಿಗಳನ್ನು ಪೂರೈಸಿದರು. ತಮ್ಮ ಮೂವತ್ತೆರಡನೇ ವಯಸ್ಸಿನಲ್ಲಿ ಶಂಕರರು ಬ್ರಹ್ಮೈಕ್ಯರಾದರು.

ಸಂಸ್ಕೃತದಲ್ಲಿ "ದ್ವಿ" ಎಂದರೆ ಎರಡು ಎಂದರ್ಥ. ಹಾಗಾಗಿ "ಅ" + "ದ್ವೈತ" ಅಂದರೆ "ಎರಡಲ್ಲದ್ದು"ಎಂದು ಅರ್ಥೈಸಬಹುದು. ಅದ್ವೈತ ಸಿದ್ಧಾಂತದ ಮೂಲಸಾರವೇ ಇದು."ಆತ್ಮ" ಮತ್ತು "ಪರಮಾತ್ಮ" ಎಂಬುದು ಎರಡು ಬೇರೆ ಬೇರೆ ಅಂಶಗಳಲ್ಲ. ಇರುವುದು ಒಂದೇ. ಆತ್ಮನೇ ಪರಮಾತ್ಮ(ದೇವರು)ಪರಮಾತ್ಮನೇ ಆತ್ಮ "ಅಹಂ ಬ್ರಹ್ಮಾಸ್ಮಿ"(ನನ್ನೊಳಿರುವ ಆತ್ಮವೇ ಪರಬ್ರಹ್ಮ)"ತತ್ತ್ವಮ್ ಅಸಿ"(ನೀನು ಅದೇ ಆತ್ಮದಿಂದ ಆಗಿರುವೆ) ಎಂಬುದು ಅದ್ವೈತ ತತ್ವದ ಮೂಲ ಮಂತ್ರ.

ಆದಿ ಶಂಕರಾಚಾರ್ಯರು ಪರಮಾತ್ಮ ಅಂದರೆ "ಆತ್ಮ",ಅದು ಮಾತ್ರ ಸತ್ಯ, ಈ ಜಗತ್ತಿನಲ್ಲಿ ಮಿಕ್ಕೆಲ್ಲವೂ ಮಿಥ್ಯ ಹಾಗೂ "ಸರ್ವಂ ಬ್ರಹ್ಮಮಯಂ ಜಗತ್"(ಈ ಜಗತ್ತಿನಲ್ಲಿ ಎಲ್ಲವೂ ಪರಮಾತ್ಮನಿಂದಲೇ ಆವರಿಸಲ್ಪಟ್ಟಿದೆ) ಎಂಬುದಾಗಿ ಜಗತ್ತಿಗೆ ತಿಳಿಯುವಂತೆ ವಿವರಿಸಿದರು.

ನರ್ಮದಾ ನದಿ ತೀರ ದಲ್ಲಿ ಗೋವಿಂದ ಭಗವತ್ಪಾದರನ್ನು ಭೇಟಿಯಾದ ಶಂಕರರು ಅವರನ್ನು ತನ್ನ ಗುರುಗಳನ್ನಾಗಿ ಸ್ವೀಕರಿಸಿದರು. ಅವರಿಂದ ಯೋಗ, ವೇದ, ಉಪನಿಷತ್, ವೇದಾಂತಗಳನ್ನು ಅಭ್ಯಸಿಸಿದ ನಂತರ ಕಾಶಿಗೆ ತೆರಳಿ ಅಲ್ಲಿ ಕೆಲವರನ್ನು ತಮ್ಮ ಶಿಷ್ಯರನ್ನಾಗಿಸಿಕೊಂಡು ಅವರಿಗೂ ವೇದಾಂತದ ಪಾಠ ಹೇಳಿ ಕೊಟ್ಟರು. ದೇಶದ ಮೂಲೆ ಮೂಲೆಗಳಲ್ಲಿ ಸಂಚರಿಸಿದ ಶಂಕರರು ಅನೇಕರನ್ನು ಆಧ್ಯಾತ್ಮಕ್ಕೆ ಸಂಬಂಧಪಟ್ಟ ವಾದದಲ್ಲಿ ಸೋಲಿಸಿದರು.

ಇವುಗಳಲ್ಲಿ ಮಂಡನಮಿಶ್ರರನ್ನು ವಾದದಲ್ಲಿ ಸೋಲಿಸಿದ ಘಟನೆ ಬಹು ಪ್ರಮುಖವಾದದು. ಮಂಡನಮಿಶ್ರರೇ ನಂತರ ಶ್ರೀ ಸುರೇಶ್ವರಾಚಾರ್ಯ ಎಂಬ ಹೆಸರಿನಿಂದ ಪ್ರಸಿದ್ಧರಾದ ಶಿಷ್ಯರಾದರು.

ದೇಶದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಪೀಠ (ಮಠ) ಗಳನ್ನು ಉತ್ತರದಲ್ಲಿ ಬದರಿ ಪೀಠ-ಉತ್ತರ ಜ್ಯೋತಿರ್ ಮಠದಕ್ಷಿಣದಲ್ಲಿ ಶೃಂಗೇರಿಪೀಠ -ದಕ್ಷಿಣ ಶಾರದಾ ಮಠ ಪೂರ್ವದಲ್ಲಿ ಪುರಿ ಪೀಠ-ಪೂರ್ವಾ ಗೋವರ್ಧನ ಮಠ ಪಶ್ಚಿಮದಲ್ಲಿ ದ್ವಾರಕಾ ಪೀಠ-ಪಶ್ಚಿಮ ಮಠ ಸ್ಥಾಪಿಸಿ, ಪ್ರತಿಯೊಂದು ಪೀಠಕ್ಕೂ ತಮ್ಮ ಒಬ್ಬೊಬ್ಬ ಶಿಷ್ಯರನ್ನು ಪೀಠಾಧಿಪತಿಯನ್ನಾಗಿಸಿದರು."ಅದ್ವೈತ" ಸಿದ್ಧಾಂತವನ್ನು ಜನಪ್ರಿಯಗೊಳಿಸಿದರು. ಹಲವಾರು ಪಂಡಿತರನ್ನೂ ಶಾಸ್ತ್ರ ವೇತ್ತರನ್ನೂ ಜಯಿಸಿ, ಸರ್ವಜ್ಞ ಪೀಠವನ್ನೇರಿದರು. ಭಾರತದ ದಕ್ಷಿಣದಲ್ಲಿ ವಾದ ಮಾಡಿ ತಮ್ಮನ್ನು ಜಯಿಸುವವರೇ ಇಲ್ಲವೆಂದು ಹೀಗಳೆದು ಶಾರದೆಯ ದೇಗುಲದ ದಕ್ಷಿಣದ ಬಾಗಿಲನ್ನು ಮುಚ್ಚಿಸಿದ್ದ ಕಾಶ್ಮೀರದ ಪಂಡಿತರ ಬಾಯಿ ಮುಚ್ಚಿಸಿದರು.

ಆದಿಶಂಕರರ ಪಾದಾರವಿಂದಗಳಲ್ಲಿ ಭಕ್ತಿಯ ನಮನ ಸಲ್ಲಿಸೋಣ.

# ಪವಿತ್ರ ನರ್ಮದಾ ಪುಷ್ಕರ ಪರ್ವಕಾಲ



"ಸದ್ಯಃ ಪುನಾತಿ ಗಾಂಗೇಯಂ ದರ್ಶನಾದೇವ ನಾರ್ಮದಂ"
ಪದ್ಮ ಪುರಾಣದ ವಾಗ್ಯ

- ಡಾ।। ಸುಮನ ಬದಪ್ರೀನಾಥ್
94820 94855

ನರ್ಮದಾ ನದಿಯ ದರ್ಶನ ಮಾತ್ರದಿಂದಲೇ ಮಾನ ವನು ಪವಿತ್ರನಾಗುತ್ತಾನೆ. ಪುಣ್ಯಭೂಮಿ ಭಾರತ ಗಂಗಾ, ಯಮುನಾ, ಗೋದಾವರಿ, ಕಾವೇರಿ ಮುಂತಾದ ಪವಿತ್ರ ನದಿಗಳ ನೆಲೆ ವೀಡು. ಈ ಪಾವನನದಿಗಳ ಸಮೂಹದಲ್ಲಿ ನರ್ಮದಾ ನದಿಯ ಮಹತ್ವ ಅಪಾರವಾದುದು. ನರ್ಮದಾ ನದಿಯ ದರ್ಶನ ಸ್ನಾನ, ಪೂಜಾದಿಗಳು ಸದಾಕಾಲವೂ, ಆಚರಣೀ ಯವೂ, ಅಪೇಕ್ಷಣೀಯವೂ,ಆದರೂ ಈ ವರ್ಷ ಅದಕ್ಕೆ ಅಧಿಕ ಪ್ರಾಶಸ್ತ್ಯ, ಇದೀಗ ನರ್ಮದಾ ಪುಷ್ಕರ ಪರ್ವಕಾಲ. ಪುಷ್ಕರವೆಂದರೆ ನದಿಗಳನ್ನು ಆರಾಧಿಸುವ ಪುಣ್ಯ ಕಾಲವಾ ಗಿದೆ.ಈ ಸಮಯದಲ್ಲಿ ಪವಿತ್ರನದಿಗಳಿಗೆ ಪೂಜೆ, ಅವುಗಳಲ್ಲಿ ಸ್ನಾನ, ಅವುಗಳ ದಡದಲ್ಲಿರುವ ಯತ್ರಾಸ್ಥಳಗಳಿಗೆ ಭೇಟಿ ನೀಡು ವುದು ಇವುಗಳಿಂದ ನದಿದೇವತೆಗೆ ಅರ್ಥಾತ್ ಜಲದೇವತೆಗೆ ಆರಾಧನೆ ಸಲ್ಲಿಸಲಾಗುವುದು. ಪುಷ್ಕರ ಪರ್ವಕಾಲ ರಾಶಿ ಚಕ್ರದಲ್ಲಿ ಗುರುಗ್ರಹದ ಚಲನೆಯನ್ನು ಅವಲಂಭಿಸಿದೆ. ಗಂಗಾ,ಯಮುನಾ,ಕಾವೇರಿ, ಸರಸ್ವತಿ,ನರ್ಮದಾ ಮುಂತಾದ ಹನ್ನೆರಡು ಪುಣ್ಯ ನದಿಗಳ ಸ್ನಾನಾದಿಗಳು ರಾಶಿ ಚಕ್ರದ ಒಂದೊಂದು ರಾಶಿಯಲ್ಲಿ ಶ್ರೇಷ್ಠ ವೆನಿಸಿದೆ. ಗುರು ಮತ್ತು ಪುಷ್ಕರ (ಜಲದೇವತೆ) ರಾಶಿಚಕ್ರದ ಒಂದೊಂದು ರಾಶಿಯನ್ನು ಪ್ರವೇಶಿಸಿ ದಾಗ (ಇಬ್ಬರೂ ಒಟ್ಟಿಗೆ ಪ್ರವೇಶಿಸುತ್ತಾರೆ) ಈ 12 ಪವಿತ್ರ ನದಿಗಳಿಗೆ ಪುಷ್ಕರ ಪರ್ವಕಾಲ ಉಂಟಾಗುತ್ತದೆ. ಮೇಷರಾಶಿ ಯನ್ನು ಗುರು ಪುಷ್ಕರರು ಪ್ರವೇಶಿಸಿದಾಗ ಗಂಗಾ ನದಿಗೆ ಸಿಂಹ ರಾಶಿಯನ್ನು ಪ್ರವೇಶಿಸಿದಾಗ ಗೋದಾವರಿಗೆ, ತುಲಾರಾಶಿಗೆ ಬಂದಾಗ ಕಾವೇರಿಗೆ ಹೀಗೆ, ಗುರುಪುಷ್ಕರರು ವೃಷಭರಾಶಿ ಯನ್ನು ಪ್ರವೇಶಿಸಿದಾಗ ನರ್ಮದಾ ನದಿಗೆ ಪುಷ್ಕರ ಪರ್ವಕಾಲ ಉಂಟಾಗುತ್ತದೆ. ಈ ವರ್ಷ ನರ್ಮದಾ ಪುಷ್ಕರ ಬಂದೊದಗಿದೆ. ನರ್ಮದಾ ನದಿಯಲ್ಲಿ ಸ್ನಾನ, ನದಿಗೆ ಪೂಜೆ, ನದಿ ದಡದಲ್ಲಿ ರುವ ತೀರ್ಥ ಕ್ಷೇತ್ರಗಳಿಗೆ ಭೇಟಿ ನೀಡಿ ಪುಣ್ಯ ಭಾಜನರಾಗುವ ಕಾಲ ಇದಾಗಿದೆ.

ನರ್ಮದಾ ಪುರಾಣ ಪ್ರಸಿದ್ಧವೂ,ಇತಿಹಾಸ ಪ್ರಸಿದ್ಧವೂ ಆದ ನದಿ. ಮಹಾಭಾರತ, ಮತ್ಸ್ಯ, ಪದ್ಮ, ಕೂರ್ಮ, ಸ್ಕಾಂದಪುರಾಣ ಗಳಲ್ಲಿ ಈ ನದಿಯ ಮಹಿಮೆಯು ಉಲ್ಲೇಖಿತಗೊಂಡಿದೆ. ನರ್ಮದೆ ವಿಂಧ್ಯ ಪರ್ವತದ ಸಾಲಿನಲ್ಲಿರುವ ಅಮರ ಕಂಟಕ ಬೆಟ್ಟದಿಂದ ಉಗಮಗೊಂಡು, ಪೂರ್ವ ಪಶ್ಚಿಮವಾಗಿ ಪ್ರವಹಿಸಿ, ಬ್ರೋಚ್‌ನಗರದ ಬಳಿ ಕ್ಯಾಂಬೆ ಕೊಲ್ಲಿಯಲ್ಲಿ ಸಾಗರದೊಡನೆ ಸಂಗಮಿಸುತ್ತದೆ. ನರ್ಮದೆಗೆ ಸೋಮೋದ್ಭವ, ಮೇಖಲ ಕನ್ಯಕಾ,ರೇವಾ ಮುಂತಾದ ಹೆಸರುಗಳಿವೆ. ನರ್ಮದೆಯ

ಉಗಮ ಸ್ಥಾನದಲ್ಲಿ 10 ಕೋಟಿ ತೀರ್ಥಗಳಿವೆಯೆಂದು ಪುರಾಣೋಕ್ತವಾಗಿದೆ. ನರ್ಮದೆಯ ಹರಹಿನ ಉದ್ದಕ್ಕೂ 400 ತೀರ್ಥಗಳಿವೆಯೆಂದು ಹೇಳಲಾಗಿದೆ. ನರ್ಮದೆ ರುದ್ರನ ದೇಹದಿಂದ ಉತ್ಪನ್ನಗೊಂಡಳೆಂದೂ, ಅದರಿಂದ ಅವಳು ಅತಿ ಪವಿತ್ರಳೆಂದೂ ಪುರಾಣಗಳು ಸಾರುತ್ತಿವೆ. ಸಾವಿರಾರು ಋಷಿ ಮುನಿಗಳು ಪ್ರಾಚೀನ ಕಾಲದಿಂದ ನರ್ಮದೆಯ ದಡದಲ್ಲಿ ತಪಗೈದಿದ್ದಾರೆ. ನರ್ಮದೆಯ ವೈಶಿಷ್ಟ್ಯವೆಂದರೆ ನರ್ಮದಾ ಪರಿಕ್ರಮಣ. ನರ್ಮದೆಯ ಉಗಮದಿಂದ ಯಾತ್ರೆ ಪ್ರಾರಂಭಿಸಿ, ಬಲ ದಂಡೆಯ ಮೇಲೆ ಸಾಗುತ್ತಾ, ಅಲ್ಲಿನ ಪವಿತ್ರ ಕ್ಷೇತ್ರಗಳಲ್ಲಿ ಸ್ನಾನ, ದೇವ ಪೂಜೆಗಳನ್ನಾಚರಿಸುತ್ತಾ, ನರ್ಮದಾ ಸಮುದ್ರ ಸಂಗಮವನ್ನು ತಲುಪಿ,ಅಲ್ಲಿ ಸ್ನಾನಗೈದು ಮತ್ತೆ ಅಲ್ಲಿಂದ ಎಡ ದಂಡೆಯ ಮೇಲೆ ಸಾಗುತ್ತಾ ಪಾವನ ಕ್ಷೇತ್ರಗಳನ್ನು, ದೇಗುಲಗಳನ್ನು ಸಂದರ್ಶಿಸಿ ಮತ್ತೆ ಉಗಮ ಸ್ಥಾನವನ್ನು ತಲುಪಿ ಅಲ್ಲಿ ಸ್ನಾನ ಮಾಡಿ ಯಾತ್ರೆಯನ್ನು ಪರಿ ಸಮಾಪ್ತಿಗೊಳಿಸುವುದಕ್ಕೆ ನರ್ಮದಾ ಪರಿಕ್ರಮಣ ಎಂದು ಕರೆಯುತ್ತಾರೆ. ಹಿಂದೆ ಇದು ಬಹು ರೂಢಿಯಲ್ಲಿತ್ತು. ನರ್ಮದೆಯು ಪಿತೃಕನ್ಯೆ ಎಂದು ಕರೆಯಲ್ಪಟ್ಟಿದ್ದು ಅವಳ ದಡದಲ್ಲಿ ಪಿತೃ ಕಾರ್ಯಗಳನ್ನು ಮಾಡುವುದರಿಂದ ಪಿತೃಗಳು ಸದ್ಗತಿ ಪಡೆಯುವರೆಂದು ಪುರಾಣಗಳಲ್ಲಿ ಉಕ್ತವಾಗಿದೆ. ಪುರಾಣಗಳ ಪ್ರಕಾರ, ನರ್ಮದೆ ಜನುಮ ತಾಳಿದ ಕತೆ ಇಂತಿದೆ. ಒಮ್ಮೆ ಶಿವನು ಪತ್ನಿ ಉಮೆಯೊಡನೆ ಈ ಪ್ರದೇಶದಲ್ಲಿ ಘೋರ ತಪವನ್ನಾಚರಿಸುತ್ತಿದ್ದ ಆಗ ಶಿವನ ದೇಹದಲ್ಲಿ ಬೆವರು ಉತ್ಪನ್ನವಾಯಿತು. ಆ ಬೆವರಿನಿಂದ ನರ್ಮದೆ ಉಗಮಗೊಂಡು ನದಿಯಾಗಿ ಪ್ರವಹಿಸತೊಡಗಿದಳು. ಅದರಿಂದಲೇ ನರ್ಮದೆಗೆ ರುದ್ರ ಕನ್ಯೆ ಎಂದು ಹೆಸರಾಯಿತು. ಈ ರುದ್ರಕನ್ಯೆ ನದಿಯಾಗಿ ಪ್ರವಹಿಸಿದಾಗ ಅವಳ ಬಾಗು ಬಳಕುಗಳಿಂದ ಆನಂದಿತನಾದ ಶಿವ ಅವಳಿಗೆ ನರ್ಮದಾ ಎಂಬ ಹೆಸರನ್ನಿತ್ತ. ನದಿ ಹರಿಯುವಾಗ ಕುಣಿಕುಣಿದಾಡುತ್ತಾ ಹರಿಯುವುದರಿಂದಲೂ ತುಂಬಾ ಶಬ್ದ ಮಾಡುವುದರಿಂದಲೂ ಅವಳು ರೇವಾ ಎಂದು ಕರೆಯಲ್ಪಟ್ಟಿದ್ದಾಳೆ.

ನರ್ಮದೆ ಪ್ರವಹಿಸುವ ದಾರಿ ಯುದ್ದಕ್ಕೂ ಅನೇಕ ಪುಣ್ಯ ಕ್ಷೇತ್ರಗಳಿವೆ.ಅಮರ ಕಂಟಕ, ಭೇರಾ ಘಾಟ್, ಓಂಕಾರ ಮಾಂಧಾತಾ, ಕರ್ನಾಲಿ, ಶುಕ್ಲ ತೀರ್ಥ, ಬ್ರೋಚ್ ಮುಂತಾದವು ಪ್ರಮುಖವಾದವು. ಉಗಮ ಸ್ಥಾನವಾದ ಅಮರ ಕಂಟಕದಲ್ಲಿ ಹಲವಾರು ದೇಗುಲಗಳಿವೆ. ಓಂಕಾರ ಮಾಂಧಾತಾ ನರ್ಮದಾ ನದಿಯಲ್ಲಿನ ಒಂದು ಸಣ್ಣ ದ್ವೀಪ. ಇಲ್ಲಿ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದಾದ ಓಂಕಾರೇಶ್ವರ ದೇಗುಲವಿದೆ. ದೇವಾಲಯ ಭವ್ಯವಾಗಿದೆ. ಸತ್ಯಯುಗದಲ್ಲಿ ಮಾಂಧಾತಾ ಚಕ್ರವರ್ತಿ ಇಲ್ಲಿ ಶಿವನನ್ನು ಪೂಜಿಸಿದನೆಂದು ಹೇಳಲಾಗಿದೆ. ಇಲ್ಲಿ ಕಾರ್ತಿಕ ಪೌರ್ಣಿಮೆ ವಿಶೇಷ ಜಾತ್ರೆ ನಡೆಯುತ್ತದೆ. ಗಂಡಕಿ ನದಿ ಸಾಲಿಗ್ರಾಮಗಳಿಗಾಗಿ ಪ್ರಸಿದ್ಧವಾಗಿರುವಂತೆ ನರ್ಮದಾ ನದಿ ಅದರಲ್ಲಿ ದೊರೆಯುವ ಬಾಣ ಲಿಂಗಗಳಿಗಾಗಿ ಪ್ರಖ್ಯಾತವಾಗಿವೆ. ಈ ಬಾಣ ಲಿಂಗಗಳ ಮೇಲೆ ತ್ರಿನೇತ್ರಗಳ ಮತ್ತು ಪವಿತ್ರ ಸೂತ್ರದ ಚಿಹ್ನೆಗಳಿರುತ್ತವೆ. ನರ್ಮದೇಶ್ವರ ಎಂದು ಇವುಗಳನ್ನು ಕರೆಯುತ್ತಾರೆ. ಇವು ಓಂಕಾರನಾಥಕ್ಕೆ ಸ್ವಲ್ಪ ದೂರದಲ್ಲಿ ದೊರೆಯುತ್ತವೆ. ಮತ್ತಾವ ನದಿಯಲ್ಲೂ ಬಾಣ ಲಿಂಗಗಳು ದೊರೆಯುವುದಿಲ್ಲ. ನರ್ಮದಾ ಸಾಗರ ಸಂಗಮದ ಬಳಿಯಿರುವ ಬ್ರೋಚ್‌ನಲ್ಲಿ ಭೃಗುಋಷಿಗಳ ಆಶ್ರಮವಿತ್ತೆಂದು ಹೇಳುತ್ತಾರೆ. ಇಲ್ಲಿರುವ ದಶಾಶ್ವಮೇಧ ಘಾಟ್ ಸ್ನಾನಕ್ಕೆ ಬಹು ಪ್ರಶಸ್ತ, ನರ್ಮದಾ ಸಾಗರ ಸಂಗಮ ಅತಿ ಪವಿತ್ರವಾದುದು. ಹೀಗೆ ನರ್ಮದೆಯ ಮಹಿಮೆ ಅಪಾರವಾದುದು.

ನರ್ಮದಾ ನದಿಯಲ್ಲಿ ಪುಷ್ಕರಸ್ನಾನ ಮಾಡಿದ ನಂತರ ಗುರು ಗ್ರಹದ ಪ್ರೀತ್ಯರ್ಥವಾಗಿ "ಬೃಹಸ್ಪತಿ ಸುರಾಧ್ಯಕ್ಷ ಸರ್ವದೇವ ನಮಸ್ಕೃತ ಗೃಹಾಣಾರ್ಘ್ಯಂ ವೃಷಭಸ್ತೋ ಭಾರ್ಯಯಾ







ಸಹ" ಎಂಬ ಮಂತ್ರವನ್ನು ಹೇಳುತ್ತಾ ಮೂರು ಬಾರಿ ಅರ್ಘ್ಯ ಕೊಡಬೇಕೆಂದು ಹೇಳಲಾಗಿದೆ.ನಂತರ ಮಂಗಳ ದ್ರವ್ಯ ಗಳಿಂದ ಪೂಜೆ,ದೀಪಾರಾಧನೆ,ಮೊರದ ಬಾಗಿನ, ವಸ್ತ್ರ ದಾನ, ದ್ರವ್ಯ ದಾನ ಮುಂತಾಗಿ ಶ್ರದ್ಧಾ ಭಕ್ತಿಯಿಂದ ನದಿಗೆ ಪೂಜೆ ಸಲ್ಲಿಸುತ್ತಾರೆ. ಪುಷ್ಕರದ ಮೊದಲ ಹನ್ನೆರಡು ದಿನಗಳು ಆದಿ ಪುಷ್ಕರಣೆ ಎಂದೂ ಪ್ರಸಿದ್ಧವಾಗಿದೆ. ನರ್ಮದಾ ಪುಷ್ಕರ ಒಂದು ವರ್ಷವಿರುತ್ತದೆ. ಅದು 2024 ನೇ ಇಸವಿ ಮೇ 1 ರಂದು ಪ್ರಾರಂಭಗೊಂಡು ಮೇ 12 ರ ವರೆಗೂ ಆದಿಪುಷ್ಕರಣಿ ಜರುಗ ಆದೆ. ಸಜ್ಜನರು, ಸದ್ಭಕ್ತರು, ಆಸಕ್ತರು ಈ ಸದವಕಾಶವನ್ನು ಉಪಯೋಗಿಸಿಕೊಂಡು ಪುಣ್ಯ ಭಾಜನರಾಗಲೆಂದೇ ಸದಾಶಯ.




**16-05-2024 ಗುರುವಾರ**
ಹಗಲು: ಧ್ವಜಾರೋಹಣ
ರಾತ್ರಿ: ದೊಡ್ಡಶೇಷವಾಹನ

**17-05-2024 ಶುಕ್ರವಾರ**
ಹಗಲು: ಚಿಕ್ಕಶೇಷವಾಹನ
ರಾತ್ರಿ : ಹಂಸವಾಹನ

**18-05-2024 ಶನಿವಾರ**
ಹಗಲು : ಸಿಂಹವಾಹನ
ರಾತ್ರಿ: ಮುತ್ತಿನಚಪ್ಪರವಾಹನ

**19-05-2024 ಭಾನುವಾರ**
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಸರ್ವಭೂಪಾಲವಾಹನ

**20-05-2024 ಸೋಮವಾರ**
ಹಗಲು: ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ
ರಾತ್ರಿ: ಗರುಡವಾಹನ

**21-05-2024 ಮಂಗಳವಾರ**
ಹಗಲು: ಹನುಮದ್ವಾಹನ
ಸಾ: ವಸಂತೋತ್ಸವ
ರಾತ್ರಿ: ಗಜವಾಹನ

**22-05-2024 ಬುಧವಾರ**
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ

**23-05-2024 ಗುರುವಾರ**
ಹಗಲು: ರಥೋತ್ಸವ
ರಾತ್ರಿ: ಅಶ್ವವಾಹನ

**24-05-2024 ಶುಕ್ರವಾರ**
ಹಗಲು: ಚಕ್ರಸ್ನಾನ
ರಾತ್ರಿ: ಧ್ವಜಾವರೋಹಣ





# ಶ್ರೀ ವೇಂಕಟೇಶ್ವರಸ್ವಾಮಿ ಆಲಯ

## ಪ್ರಾಚೀನ ಕಾಲದ ಸಾಹಿತ್ಯದಲ್ಲಿ ಶ್ರೀವೆಂಕಟೇಶ್ವರಸ್ವಾಮಿ ಆಲಯ (ಕ್ರಿ.ಶ. ಮೊದಲ ಶತಮಾನದಿಂದ 9ನೇ ಶತಮಾನದವರೆಗೆ)

### ಮಹಂತರ ಕಾಲದಲ್ಲಿ ತಿರುಮಲೆ

ವಿಜಯನಗರ ಸಾಮ್ರಾಜ್ಯ ಖಿಲವಾಗುತ್ತಿದ್ದಂತೆ ಆಲಯ ಚರಿತ್ರೆಯನ್ನು ತಿಳಿಸುವ ಶಾಸನಗಳು ಕಡಿಮೆಯಾಗುತ್ತ ಹೋದವು. ಆಂಗ್ಲರು ದಕ್ಷಿಣಭಾರತದಲ್ಲಿ ತಳವೂರಿದ ಮೇಲೆ ಕ್ರಿ.ಶ.1801ರಲ್ಲಿ ತಮ್ಮ ಆಡಳಿತ ಪ್ರಾಂತ್ಯಗಳಲ್ಲಿನ ದೇವಾಲಯಗಳ ಆಡಳಿತವನ್ನೂ ವಶಪಡಿಸಿಕೊಂಡು ಆಲಯಗಳ ಆದಾಯವನ್ನೂ, ರಾಜ್ಯದ ಸಾಧಾರಣ ಆದಾಯದಲ್ಲಿಯೇ ಸೇರಿಸಿದರು. ನಂತರ 19 ನೇ ಶತಮಾನದಲ್ಲಿ, ಅವರು ಭಾರತದ ಧಾರ್ಮಿಕ ಸಂಸ್ಥೆಗಳ ಆಡಳಿತವನ್ನು ಬಿಟ್ಟು ಬಿಡಬೇಕೆಂದುಕೊಂಡಾಗ ತಿರುಮಲೆಯ ಶ್ರೀ ವೆಂಕಟೇಶ್ವರಸ್ವಾಮಿ ಆಲಯ ಹಾಗೂ ತಿರುಪತಿ,ತಿರುಚಾನೂರು ಆಲಯಗಳ ಆಡಳಿತವನ್ನು 1843ರಲ್ಲಿ ಹತಿರಾಮಜೀ ಮಠದ ಅಂದಿನ ಮಹಂತ ಸೇವಾದಾಸಜೀ ಅವರಿಗೆ ಉತ್ತರ ಆರ್ಕಾಟ್ ಜಿಲ್ಲಾಧಿಕಾರಿಯ ಒಂದು ಸನ್ನದಿನ ಮೂಲಕ ಒಪ್ಪಿಸಿದರು.

ಹೀಗೆ ಆಲಯಗಳ ಆಡಳಿತ ಹತಿರಾಮಜೀ ಮಠದ ಮಹಂತರ ಹಸ್ತಾಂತರವಾದ ಮೇಲೆ ವಿಚಾರಣ ಕರ್ತರಾಗಿ ಅವರು ಕಾಲದಿಂದ ಕಾಲಕ್ಕೆ ಆಲಯಗಳ ಜೀರ್ಣೋದ್ಧಾರ ಕಾರ್ಯಗಳು,ಹೊಸ ನಿರ್ಮಾಣಗಳನ್ನು ಕೈಗೆತ್ತಿಕೊಂಡರು. ಶಕವರ್ಷ 1771 ರ ಸೌಮ್ಯ ಸಂವತ್ಸರದ ಭಾದ್ರಪದದಲ್ಲಿ (1849 ಆಗಸ್ಟ್ 31)ಮಹಂತ ಸೇವಾದಾಸನು ಒಂಭತ್ತು ತೀರ್ಥಗಳನ್ನು ಹೊಂದಿದ್ದ ಸ್ವಾಮಿ ಪುಷ್ಕರಿಣಿಯನ್ನು ಜೀರ್ಣೋದ್ಧಾರಗೊಳಿಸಿದ ಬಗೆಯನ್ನು ತಿ.ತಿ.350ದಾಖಲೆಗೊಳಿಸುತ್ತದೆ.ಜೊತೆಗೇ ಆತ ಜಲಕೇಳಿ ಮಹೋತ್ಸವವನ್ನು ಪುನಃ ಪ್ರಾರಂಭಿಸಿದನೆಂದು ತಿಳಿಸಿದೆ. ಇದೇ ಸೇವಾದಾಸನು ಆಲಯದ ಹಲವಾರು ಭಾಗಗಳನ್ನು ಸರಿಪಡಿಸಿದನೆಂದು ಶ್ರೀವೆಂಕಟೇಶ್ವರ ಸ್ವಾಮಿಯ ಮಹಾದ್ವಾರ ಗೋಪುರದ ಮೇಲಿನ ಗಾರೆಯಲ್ಲಿನ ತೆಲುಗು ಶಾಸನವು ತಿಳಿಸುತ್ತದೆ. 2-2-1865 ರಲ್ಲಿನ ರಕ್ತಾಕ್ಷಿ ಸಂವತ್ಸರದ ಮಾಘಮಾಸದಲ್ಲಿ ಇವನ ಉತ್ತರಾಧಿಕಾರಿಯಾದ ಇವನ ಶಿಷ್ಯನೇ ಆದ ಮಹಂತ ಧರ್ಮ ದಾಸಜೀಯು ಮಠದಲ್ಲಿನ ತನ್ನ ಗುರುವಾದ ಸೇವಾದಾಸನು ಸಮಾಧಿಯಾದ ಸ್ಥಳದ ಬೃಂದಾವನದಲ್ಲಿ ಹಾಕಿಸಿದ ಶಾಸನವು ಸೇವಾ ದಾಸನು ಅನಭಿಹಾನಂದಜೀಯ ಶಿಷ್ಯನೆಂದು (ಜಿ.ಟಿ.283) ಹೇಳುತ್ತದೆ. ಈ ಧರ್ಮ ದಾಸಜೀಯು ಕಪಿಲತೀರ್ಥದ ಪುಷ್ಕರಿಣಿಯನ್ನೂ ಅದರ ಸುತ್ತಲ ಮಂಟಪಗಳನ್ನೂ ರಿಪೇರಿ ಮಾಡಿದನೆಂದು 1865-2-

10 ರಲ್ಲಿನ ಜಿ.ಟಿ.209 ತಿಳಿಸುತ್ತ,ತಿರುಮಲೆಯ ಆಲಯದ ಪಡಿ ಕಾವಲಿ ಗೋಪುರದ ಹೊರಗೋಪುರವನ್ನು, ಶೇಷಗಿರಿವಾಸನ ಸೇವೆಯಲ್ಲಿ ನಿರ್ಮಿಸಿದನೆಂದು ಹೇಳುತ್ತದೆ. (ತಿ.ತಿ.382-1878-7-11) ಆಲಯದ ತೀರ ಈಚಿನ ಶಾಸನವೆಂದರೆ ತಿರುಮಲೆಯ ಆಲಯದ ಗರ್ಭಗುಡಿಯ ವಿಮಾನದ ಮೇಲೆ ಕನಕ ಕಲಶವನ್ನು ಮಹಂತ ಪ್ರಯಾಗದಾಸನ ಸಹೋದರ ಶಿಷ್ಯನಾದ ರಾಮಲಕ್ಷ್ಮಣದಾಸನು ಕೀಲಕ ಸಂವತ್ಸರದ ಆಶ್ವಯುಜದಲ್ಲಿ (1908-9-30) ಸ್ಥಾಪಿಸಿದನೆಂದು ತಿಳಿಸುವ ತಿ.ತಿ.240.

### ಅರ್ವಾಚೀನ ತಿರುಪತಿ

ವಿಚಾರಣ ಕರ್ತ ಮಹಂತರ ಆಳ್ವಿಕೆಯು ಧರ್ಮಕರ್ತರ ಸಮಿತಿ ವ್ಯವಸ್ಥೆಗೆ ಪರಿವರ್ತಿಸಿದಾಗ 1933ರಲ್ಲಿ ಮಠದ ಆಡಳಿತ ಕೊನೆಯಾಯಿತು.ನಂತರ 1951 ರಲ್ಲಿ ಹಿಂದೂ ಧರ್ಮದತ್ತಿ ಸಂಸ್ಥೆಗಳ ಕಾನೂನು ಹಾಗೂ 1966 ರ ಆಂಧ್ರಪ್ರದೇಶದ ಮುಜರಾಯಿ ಶಾಸನಗಳ ಪ್ರಕಾರ ಸಾರ್ವಜನಿಕಾಭಿಪ್ರಾಯವನ್ನು ಪ್ರತಿನಿಧಿಸುವ ಒಂದು ಧರ್ಮಕರ್ತರ ಮಂಡಳಿಗೆ ಆಡಳಿತವನ್ನು ಒಪ್ಪಿಸಲಾಯಿತು. 1979 ರಲ್ಲಿ ತಿರುಮಲ ತಿರುಪತಿ ದೇವಸ್ಥಾನಗಳ ಕಾಯದೆಯುಂಟಾಗಿ ಆಲಯಗಳ ಆಡಳಿತ ಸ್ವಾಯತ್ತವಾಗಿ ಧರ್ಮಕರ್ತರ ಮಂಡಳಿಯೂ ಆಡಳಿತ ಸಮಿತಿಯೂ ಏರ್ಪಾಡಾದವು. ಇದರಿಂದಾಗಿ ಆಲಯಗಳ ಆಡಳಿತ ಸ್ವಯಂಪೂರ್ಣವಾಗಿರುವ ವ್ಯವಸ್ಥೆಯಾಗಿದೆ

ಹೀಗಾಗಿ ಆಲಯದ ಚರಿತ್ರೆಯನ್ನು ತಿಳಿಯಲು ಇಲ್ಲಿನ ಶಾಸನಗಳು ಮುಖ್ಯ ಆಧಾರವಾಗಿವೆ. ಕ್ರಿ.ಶ.9 ನೇ ಶತಕದ ವರೆಗಿನ ಸಾಹಿತ್ಯಕ ಆಧಾರಗಳೊಡನೆ ಆಲಯವನ್ನು ಕ್ರಿಸ್ತಶಕದಾರಂಭದಿಂದ ಇಂದಿನವರೆಗೆ ಗಮನಿಸಬಹುದಾಗಿದೆ.

### ತಿರುಮಲೆಯ ಆಲಯ ವಿವರ

#### ಪೀಠಿಕೆ

ಶತಮಾನಗಳ ಕಾಲಾವಧಿಯಲ್ಲಿ ತಿರುಮಲೆಯ ಶ್ರೀ ವೆಂಕಟೇಶ್ವರಸ್ವಾಮಿ ಆಲಯವು ಹಲವಾರು ಬಾರಿ ಹತ್ತು ಹಲವು ಹೆಚ್ಚಿನ ನಿರ್ಮಿತಿಗಳನ್ನು,ಪರಿವರ್ತನೆಗಳನ್ನು ಹೊಂದಿ ಮುಂದುವರಿದಿದೆ. ಇದು ಮೊದಲಬಾರಿ ನಿರ್ಮಾಣವಾದಾಗ ಪ್ರಾಯಶಃ ಒಂದು ಗರ್ಭಗುಡಿ, ಒಂದು ಮುಖಮಂಟಪ, ಜೊತೆಗೇ ಅಂತರಾಳ ಪ್ರದಕ್ಷಿಣಾಪಥಗಳನ್ನು ಮಾತ್ರವೇ ಹೊಂದಿದ್ದ ಸರಳ ರಚನೆಯಾಗಿರಬೇಕು. ಆಲಯದಲ್ಲಿ ದೊರೆತಿರುವ ಅಸಂಖ್ಯ ಶಾಸನಗಳು ನಂತರದ ಕಾಲಘಟ್ಟಗಳಲ್ಲಿ ನಡೆದ ಅನೇಕ ಹೊಸ ಸೇರ್ಪಡೆ, ಪುನರ್ ನಿರ್ಮಾಣ, ಮೊದಲಾದವುಗಳ ಬಗ್ಗೆ ತಿಳಿಸಿ ಕೊಡುತ್ತವೆ. ಕುತೂಹಲಕರ ಅಂಶವೆಂದರೆ ಶ್ರೀ ವೆಂಕಟೇಶ್ವರ ಸ್ವಾಮಿಯನ್ನು ಹೆಸರಿಸುವ ಮೊದಲ ಶಾಸನವು ಆಧುನಿಕ ತಿರುಚಾನೂರು ಆದ ತಿರುಚೋಕಿನೂರಿನಲ್ಲಿನ ದಾಗಿದ್ದು, ಇದು ವೆಂಕಟಾದ್ರಿ ಬೆಟ್ಟದ ಮೇಲಿನ ತಿರುಮಲೆಯ ಆಲಯಕ್ಕೆ ಸಂಬಂಧಿಸಿದ್ದಲ್ಲ. ಕ್ರಿ.ಶ.826 ರಲ್ಲಿನ- ಕೋವಿಜಯ ದಂತಿವರ್ಮನ ಆಳ್ವಿಕೆಯ 51 ನೇ ವರ್ಷದ ತಿರುಚೋಕಿನೂರಿನ ತಿರುವಿಳಂಕೋಯಿಲಿನಲ್ಲಿದ್ದ ತಿರುವೆಂಗಡತ್ತುಪ್ಪೆರುಮಾನಡಿಗಳ ಬಗ್ಗೆ ಪರೋಕ್ಷವಾಗಿ ತಿಳಿಸುತ್ತದೆ. ಶಾಸನದ ಪದ ಪ್ರಯೋಗದಿಂದಾಗಿ, ತಿರುಚಾನೂರಿನಲ್ಲಿದ್ದ ಈ ದೈವ ತಿರುವೆಂಗಡದ ದೈವವನ್ನು ಪ್ರತಿನಿಧಿಸುತ್ತಿದ್ದಿರಬೇಕೆಂದು ಖಚಿತವಾಗುತ್ತದೆ. 13 ನೇ ಶತಮಾನದಲ್ಲಿ ತಿರುಮಲೆಯ ಆಲಯದ ಜೀರ್ಣೋದ್ಧಾರ ನಡೆದಾಗ ಗರ್ಭಗುಡಿಯ ಹೊರಗೋಡೆಗಳನ್ನು ಉಳಿಸಿಕೊಂಡು ಅದನ್ನು ಮುಚ್ಚುವಂತೆ ನಿರ್ಮಾಣ ಕಾರ್ಯ ನಡೆದದ್ದರಿಂದ, ಇಂದು ಮೂಲ ಗರ್ಭಗುಡಿಯ ಹೊರಗೋಡೆಗಳನ್ನು ಪರೀಕ್ಷಿಸಿ,ಇದಕ್ಕೂ ಮೊದಲು ಆಲಯ ಯಾವ ರೀತಿ ನಿಂತಿದ್ದಿತೆಂಬುದನ್ನು ನಿರ್ಧರಿಸುವುದು ಸಾಧ್ಯವಿಲ್ಲ.

ಈಗಣ ದೇವಾಲಯ ಹಲವಾರು ನಿರ್ಮಾಣಗಳು, ಗೋಪುರಗಳು, ಪ್ರಕಾರಗಳನ್ನು ಹೊಂದಿದ್ದು,ಆಲಯದ ಕಟ್ಟಡಗಳ ಹರವು, ಸಾಮಾನ್ಯ ವಾಸ್ತು ವಿನ್ಯಾಸಗಳನ್ನು ತಿಳಿಯುವುದು,ಒಟ್ಟು ಆಲಯದ ಅಧ್ಯಯನದ ದೃಷ್ಟಿಯಿಂದ ಅತ್ಯಗತ್ಯವಾಗುತ್ತದೆ.

ಮೊದಲೇ ತಿಳಿಸಿರುವಂತೆ ಹಲವು ಎಕರೆ ಸ್ಥಳದಲ್ಲಿ ಹರಡಿರುವ ಈ ಆಲಯವು 415 ಅಡಿ ಉದ್ದ ಹಾಗೂ 263 ಅಡಿ ಅಗಲವಾಗಿದೆ. ಶ್ರೀ ವೆಂಕಟೇಶ್ವರಸ್ವಾಮಿ ಕೇಂದ್ರವಾದಂತೆ ಮೂರು ಒಂದರೊಳಗೊಂದು ಪ್ರಾಕಾರಗಳಲ್ಲಿ ಹರಡಿದೆ. ಅತಿ ಒಳ ಪ್ರಾಕಾರವನ್ನು ಮುಕ್ಕೋಟಿ ಪ್ರದಕ್ಷಿಣಾಪಥವೆಂದು ಕರೆಯಲಾಗುತ್ತಿದ್ದು, ದಕ್ಷಿಣ,ಪಶ್ಚಿಮ,ಉತ್ತರಗಳಲ್ಲಿ ಮಾತ್ರವೇ ನಿರ್ಮಾಣವಾಗಿದ್ದು ಮುಕ್ಕೋಟಿ ಏಕಾದಶಿಯಂದು-ವೈಕುಂಠ ಏಕಾದಶಿಯಂದು- ಮಾತ್ರವೇ (ಸಾಮಾನ್ಯವಾಗಿ ಡಿಸೆಂಬರ್ ಕೊನೆಗೆ ಅಥವಾ ಜನವರಿ ಮೊದಲಿಗೆ ಬರುವಂತಹದು) ಭಕ್ತರು ಪ್ರದಕ್ಷಿಣೆ ಮಾಡಲು ತೆರೆಯಲಾಗುತ್ತದೆ.

## ದೇವಾಲಯದ ಹೊರಗಡೆಯ ನಿರ್ಮಾಣಗಳು

ಬೆಟ್ಟದ ಮೇಲಿರುವ ಆಲಯಕ್ಕೆ ಬರುವಾಗ ಹಳೆಯ ದಾರಿಯಲ್ಲಿ ದಕ್ಷಿಣಕ್ಕೆ ಮುಖಮಾಡಿದ ಜೀರ್ಣಗೊಂಡ ಅರ್ಧ ಮಂಟಪದ ಗೋಪುರದ್ವಾರದಲ್ಲಿ ಹೊರಟು ಉತ್ತರಕ್ಕೆ ಬಂದರೆ ಅಲ್ಲಿ ಮತ್ತೊಂದು ಗೋಪುರವೂ ಅಂಗಳವೂ-ಇವೂ ಪ್ರಾಚೀನವೇ-ಕಂಡುಬರುತ್ತವೆ.

ಈ ದ್ವಾರಗೋಪುರವನ್ನು ದಾಟಿದರೆ ಪೂರ್ವದಿಂದ ಪಶ್ಚಿಮಕ್ಕೆ ಆಲಯದ ಮಹಾದ್ವಾರವನ್ನು ಸೇರುವ ಸನ್ನಿಧಿ ಬೀದಿಗೆ ಬರುತ್ತವೆ. (ಇವೆರಡೂ ಗೋಪುರಗಳೂ ಈಗ ಇಲ್ಲ. ತಿರುಮಲೆಯಲ್ಲಿನ ಕಲ್ಯಾಣಕಟ್ಟೆ ಹಾಗೂ ಹಳೆಯ ಅನ್ನದಾನ ಯೋಜನೆಯ ನಡುವಣ ತೋರಣ ದ್ವಾರ ಮಂಟಪ-ವೈಕುಂಠ ತೋರಣ-ಯಾತ್ರಿಕರನ್ನು ಸ್ವಾಗತಿಸುತ್ತದೆ.) ಅದನ್ನು ದಾಟಿ ನಡೆದರೆ ಸನ್ನಿಧಿಯಲ್ಲಿ ಆಲಯಕ್ಕೆ ಎದುರಾಗಿ ಆಂಜನೇಯ ಸ್ವಾಮಿ ಆಲಯ.

## ತಿರುಮಲೆಯ ದೇವಾಲಯ

1.ಮಹಾದ್ವಾರಗೋಪುರ 2. ಪ್ರತಿಮಾ ಮಂಟಪ 3.ರಂಗ ನಾಯಕ ಮಂಟಪ 4. ಊಂಜಲ್ ಮಂಟಪ (ಸಾಳುವ ನರ ಸಿಂಹ ನಿರ್ಮಿತ) 5. ತಿರುಮಲರಾಯ ಮಂಟಪ 6.ಧ್ವಜಸ್ಥಂಭ ಮಂಟಪ 7.ಮುಕುರ ಮಂಟಪ 8.ಪೂಲಬಾವಿ 9.ಸಂಪಂಗಿ ಪ್ರದಕ್ಷಿಣ 10.ಬೆಳ್ಳಿಯ ಬಾಗಿಲು 11. ವರದರಾಜ ಸ್ವಾಮಿ ಗುಡಿ 12.ಪೋಟು 13.ಬಂಗಾರದ ಬಾವಿ 14.ಕಲ್ಯಾಣ ಮಂಟಪ 15. ಮಧ್ಯ ಮಂಟಪ 16.ಪಶ್ಚಿಮದ ಮಂಟಪಗಳು 17. ತಾಳ್ಳಪಾಕ ಅರ 18. ರಾಮಾನುಜರ ಗುಡಿ 19. ನರಸಿಂಹ ಸ್ವಾಮಿ ಗುಡಿ 20. ವಿಮಾನ ಪ್ರದಕ್ಷಿಣ 21. ತಿರುಮಾಮಣಿ ಮಂಟಪ 22. ಗರುಡಾಳ್ವಾರ್ ಸನ್ನಿಧಿ 23. ಬಂಗಾರು ವಾಕಿಲಿ 24. ಹುಂಡಿ 25. ಸ್ನಪನ ಮಂಟಪ 26. ರಾಮರ್ ಮೇಡೈ 27. ಸಾಯಣ ಮಂಟಪ 28. ಗರ್ಭಗುಡಿ, ಆನಂದನಿಲಯ 29. ಮುಕ್ಕೋಟಿ ಪ್ರದಕ್ಷಿಣ 30. ವಿಷ್ವಕ್ಸೇನರ ಗುಡಿ

ವಿಶಾಲವಾದ ಬಯಲಿನಲ್ಲಿ ಸ್ವಲ್ಪ ತಗ್ಗಿನಲ್ಲಿ ಆಲಯದ ಮುಖದ್ವಾರ. ಪೆರಿಯತಿರುವಾಸಲ್ ಅಥವಾ ಪಡಿಕಾವಲಿ ಗೋಪುರ.ಈ ಬಯಲಿನ ಪೂರ್ವದ ಕೊನೆಯಲ್ಲಿ ಆಂಜನೇಯ ಮಂದಿರವೂ ಎಡಭಾಗದಲ್ಲಿ ಸಾವಿರಕಂಬದ ಮಂಟಪವೂ ಇದ್ದು (ಈಗ ವಿಶಾಲವಾದ ಬಯಲು 2015) ರಸ್ತೆಯ ಉತ್ತರಕ್ಕೆ ಪೆರಿಯಜಿಯರ್ ಮಠವೂ ಪಶ್ಚಿಮದಲ್ಲಿ ಮಹಾದ್ವಾರ ಗೋಪುರದ ಎದುರಿಗೆ ಕಿರಿದಾದರೂ ಎತ್ತರವಾದ ನಾಲ್ಕು ಕಂಭಗಳ ಒಂದು ಮಂಟಪ-ಪ್ರಾಚೀನಕಾಲದಲ್ಲಿ ಉತ್ಸವ ಸಂದರ್ಭಗಳಲ್ಲಿ ಬಳಸಲಾಗುತ್ತಿದ್ದ ಮಂಟಪ ಇದೆ. ಈ ಮಂಟಪದಿಂದ ಕೆಳಕ್ಕೆ ಆಲಯದ ಮುಂಭಾಗಕ್ಕೆ ಆಲಯದ ಪೂರ್ವಕ್ಕೆ ಬರುವಂತೆಯೂ, ಉತ್ತರದಿಂದ ದಕ್ಷಿಣಕ್ಕೆ ನಡೆಯುವ ರಥಬೀದಿಯನ್ನು ಸೇರುವಂತೆಯೂ ಇರುವ ಮೆಟ್ಟಲುಗಳಿವೆ. (ಈಗ ಈ ಮಂಟಪ ಕಾವಲು ಗೋಪುರವಾಗಿದ್ದು ರಥಬೀದಿಯಲ್ಲಿ ಸೇರಿಹೋಗಿದೆ. 2015)

ದೇವಾಲಯದ ಎದುರಿಗೆ ನಿಂತುಕೊಂಡರೆ ಆಲಯದ ಉತ್ತರದ ಪ್ರಾಕಾರದ ಗೋಡೆಗೆ ಹೊಂದಿದಂತೆ ಒಂದು ಕಿರಿಯ ಕೊಳ-ಸ್ವಾಮಿ ಪುಷ್ಕರಿಣಿ-ಎಂಬ ತಿರುಕೋನೇರಿಯಿದೆ. ಈ ಪುಷ್ಕರಿಣಿಯ ವಾಯುವ್ಯದಲ್ಲಿ ಉತ್ತರ ರಥ ಬೀದಿಯ ಮಧ್ಯದಲ್ಲಿ ಶ್ರೀವರಾಹಸ್ವಾಮಿ ದೇವಾಲಯವಿದೆ.

ಉತ್ತರ ದಕ್ಷಿಣ ರಥಬೀದಿಗಳು ಪ್ರತಿಯೊಂದೂ 800 ಅಡಿ ಉದ್ದವಿದ್ದರೆ ಪಶ್ಚಿಮ ರಥಬೀದಿ 900 ಅಡಿ ಉದ್ದವಾಗಿದೆ. ಆಲಯದ ಹಾಗೂ ಪುಷ್ಕರಿಣಿಯ ಪೂರ್ವಕ್ಕೆ ಇರುವ ಪೂರ್ವದ ರಥಬೀದಿ ಸುಮಾರು 750 ಅಡಿ ಉದ್ದವಿದೆ. ಈ ವಿಸ್ತಾರವಾದ ಹಾಸು ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರು ಆಗಿದ್ದು ಈ ನಾಲ್ಕು ಬೀದಿಗಳ ನಡುವಣ ನೆಲ ತಗ್ಗಿನಲ್ಲಿದೆ.

ರಥಬೀದಿಗಳ ನಡುವೆ ಇರುವ ಹದಿನಾರು ಎಕರೆ ಸ್ಥಳದಲ್ಲಿ ಶ್ರೀವೆಂಕಟೇಶ್ವರಸ್ವಾಮಿ ಆಲಯವು 2.2ಎಕರೆಗಳ ಸ್ಥಳ ಹೊಂದಿದೆ. ಸ್ವಾಮಿಪುಷ್ಕರಿಣಿ 1.5 ಎಕರೆಯಿದ್ದು,ಪಾತ ಪುಷ್ಕರಿಣಿ ಎನ್ನುವ ಹೆಸರಿನಲ್ಲಿದ್ದ ನಂತರದಲ್ಲಿ ಹೂದೋಟವಿದ್ದ ಈಗಿನ ಪಾಪವಿನಾಶನಂ ಷೆಡ್‌ಗಳ 2.5 ಎಕರೆ ಸ್ಥಳದಲ್ಲಿದ್ದು, ಮಿಕ್ಕ ಹತ್ತು ಎಕರೆಯಲ್ಲಿ ಹಲವಾರು ಮಠಗಳು ಮನೆಗಳು ನೆಲೆಯಾಗಿವೆ. ಮಾಡವೀಧಿಗಳಲ್ಲಿ ರಾಜಾಶ್ರಯದಲ್ಲಿ ಶತಮಾನಗಳ ಕಾಲಾವಧಿಯಲ್ಲಿ ಸ್ಥಾಪಿತವಾದ ಸತ್ರಗಳು ಮಠಗಳು ಇವೆ.(ಈಗ ಇವೆಲ್ಲವನ್ನೂ ತೆರವುಗೊಳಿಸಿ, ಬಯಲನ್ನುಂಟಾಗಿಸಿ ಯಾತ್ರಿಕರಿಗೆ ಕುಳಿತು ಮೆರವಣಿಗೆ ನೋಡಲು ಏರ್ಪಾಡು ಮಾಡಲಾಗಿದೆ.-2015)

**- ಮುಂದುವರೆಯುತ್ತದೆ.**

### ತಿರುಮಲ ತಿರುಪತಿ ದೇವಸ್ಥಾನಗಳು

# ಶ್ರೀ ವೆಂಕಟೇಶ್ವರ ಅನ್ನಪ್ರಸಾದ ಟ್ರಸ್ಟ್

## (ಒಂದು ದಿನದ ದೇಣಿಗೆ ಕೊಡುವ ಯೋಜನೆ)

ಅನ್ನವೇ ಪರಬ್ರಹ್ಮ ಸ್ವರೂಪ, ಹಸಿದವನಿಗೆ ಅನ್ನ ನೀಡುವುದಕ್ಕಿಂತ ಉತ್ತಮವಾದ ಪುಣ್ಯ ಮತ್ತೊಂದಿಲ್ಲ. ತಿರುಮಲೆ ತಿರುಪತಿ ದೇವಸ್ಥಾನವು ತಿರುಮಲೆ ಮತ್ತು ತಿರುಚಾನೂರಿನಲ್ಲಿ ನಿತ್ಯವೂ ಅನ್ನಪ್ರಸಾದ ವಿತರಣೆಯನ್ನು ನಡೆಸುತ್ತಿದೆ. ಈ ಕಾರ್ಯಕ್ಕೆ ಅನೇಕ ದಾನಿಗಳು ಉದಾರವಾಗಿ ದೇಣಿಗೆ ನೀಡುತ್ತಾರೆ, ಎಂಬುದು ತಿಳಿದಿರುವ ವಿಷಯ! ಪ್ರತಿಯೊಬ್ಬರಿಗೂ ಭೂಮಿಯನ್ನು ದಾನ ಮಾಡಲು ಸಾಧ್ಯವಿಲ್ಲ. ಇದನ್ನು ಗಮನಿಸಿದ ತಿ.ತಿ.ದೇ., ಒಂದು ದಿನದ ಅನ್ನಪ್ರಸಾದದ ವೆಚ್ಚವನ್ನು ಭಕ್ತರಿಂದ ಕಾಣಿಕೆಯಾಗಿ ಸ್ವೀಕರಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಭಕ್ತರು ಸ್ಪಂದಿಸಿ ! ಮತ್ತೊಬ್ಬರ ಹಸವನ್ನು ತೀರಿಸಿ! ಮಾಧವನ ಕೃಪೆಗೆ ಪಾತ್ರರಾಗಿ !!!

ದೇಣಿಗೆಯನ್ನು ವ್ಯಕ್ತಿಗಳು ಮಾತ್ರವಲ್ಲದೆ ಕಂಪನಿಗಳು, ಸಂಸ್ಥೆಗಳು ಮತ್ತು ಟ್ರಸ್ಟ್‌ಗಳು ಸಂಯುಕ್ತವಾಗಿಯೂ ಸಹ ವಿರಾಳವನ್ನು ನೀಡಬಹುದು.

ದಾನಿಗಳು ದೈನಂದಿನ ಮೊತ್ತವನ್ನು (ರೂ. 38 ಲಕ್ಷಗಳು ) ಅಲ್ಪಾಹಾರ - (ರೂ. 8 ಲಕ್ಷಗಳು) ಮಧ್ಯಾಹ್ನ ಭೋಜನ (ರೂ. 15 ಲಕ್ಷಗಳು ) ಅಥವಾ ರಾತ್ರಿ ಭೋಜನ (ರೂ. 15 ಲಕ್ಷಗಳು) ವಿತರಿಸಲು ಆಯ್ಕೆ ಮಾಡಬಹುದು. ದಾತರಿಗೆ ತಿ.ತಿ.ದೇ., ದೇವಸ್ಥಾನದವರು ಕಲ್ಪಿಸುವ ಸೌಕರ್ಯಗಳು ಒಂದೇ ಮಾದರಿಯಲ್ಲಿ ಇರುತ್ತದೆ.

**ಹೆಚ್ಚಿನ ವಿವರಗಳಿಗಾಗಿ :**

ಉಪಕಾರ್ಯನಿರ್ವಹಣಾಧಿಕಾರಿ (ಡೋನಾರ್ ಸೆಲ್) ಎಫ್.ಎ.ಸಿ.,

ತಿ.ತಿ.ದೇ., ತಿರುಮಲೆ . ಫೋನ್ : -

0877 - 2263001, 2263472.

ಈ ಮೇಲ್ ಐ.ಡಿ. :-

**cdmc.ttd@tirumala.org**

ಇದರಲ್ಲಿ ಪಾಲ್ಗೊಂಡ ಭಕ್ತದಾತರು ಭಕ್ತರಿಗೆ ತಾವೇ ಸೇವೆ ಸಲ್ಲಿಸುವ ಅವಕಾಶವಿರುತ್ತದೆ. ಮಾತೃಶ್ರೀ ತರಿಗೊಂಡ ವೆಂಗಮಾಂಬ ಅನ್ನ ಪ್ರಸಾದ ವಿತರಣಾ ಕೇಂದ್ರದಲ್ಲಿ ಅವರ ಹೆಸರನ್ನು ಪ್ರದರ್ಶಿಸಲಾಗುತ್ತದೆ.

### ದೈನಂದಿನ ವೆಚ್ಚಗಳು

| | |
|---|---|
| 1. ಅಲ್ಪಹಾರ (ಟಿಫಿನ್ ) | - 08 ಲಕ್ಷಗಳು |
| 2.ಮಧ್ಯಾಹ್ನ ಭೋಜನ | - 15 ಲಕ್ಷಗಳು |
| 3. ರಾತ್ರಿ ಭೋಜನ | - 15 ಲಕ್ಷಗಳು |
| ಒಟ್ಟು ಮೊತ್ತ | - 38 ಲಕ್ಷಗಳು |





**ಈ ಮೊತ್ತವನ್ನು ದಾನಿಗಳು ತಿ.ತಿ.ದೇ., ಅನ್ನಪ್ರಸಾದ ಟ್ರಸ್ಟ್‌ನಲ್ಲಿ ನೀಡಬಹುದು.**



# ಕನಕಧಾರ ಸ್ತೋತ್ರ

ಅಂಗಂ ಹರೇಃ ಪುಲಕ ಭೂಷಣ ಮಾಶ್ರಯಂತೀ,
ಭೃಂಗಾಂಗನೇವ ಮುಕುಳಾಭರಣಂ ತಮಾಲಮ್,
ಅಂಗೀಕೃತಾಖಿಲ ವಿಭೂತಿ ರಪಾಂಗಲೀಲಾ,
ಮಾಂಗಲ್ಯದಾಸ್ತು ಮಮ ಮಂಗಳದೇವತಾಯಾಃ

ಕರಿ ತಮಲ ವೃಕ್ಷದ ಅರೆ ಅರಳಿದ ಮೊಗ್ಗುಗಳನ್ನು ಆಶ್ರಯಿಸಿರುವ ಜೇನುನೊಣಗಳಂತೆ, ಕರಿತಮಲ ವೃಕ್ಷದಂತೆ ತಂಪಾಗಿರುವ, ನೀಲವರ್ಣನಾದ, ಆನಂದಮಯನಾದ ಶ್ರೀಮಹಾವಿಷ್ಣುವಿನ ರೋಮಾಂಚನಭರಿತ ಶರೀರವನ್ನು ಮಂಗಳದೇವತೆ ಎಂಬ ಸಾರ್ಥಕನಾಮಧಾರಿಯಾದ ಶ್ರೀ ಮಹಾಲಕ್ಷ್ಮಿಯು ಆಶ್ರಯಿಸಿದ್ದಾಳೆ. ಆಕೆಗೆ ವಿಷ್ಣುವಿನ ವಕ್ಷ ಸ್ಥಳವೇ ನಿವಾಸವಲ್ಲವೇ! ಇಡೀ ಪ್ರಪಂಚದ ಐಶ್ವರ್ಯವನ್ನು ತನ್ನೊಳಗೆ ಹೊತ್ತುಕೊಂಡು ತನ್ನ ದಿವ್ಯ ನೋಟದ ಮೂಲಕ ಸಂಪತ್ತನ್ನು ಸುರಿಸುತ್ತಿರುವ ಆಕೆಯ ಕರುಣ ಕಟಾಕ್ಷವು ನನಗೆ ಲಭಿಸಿ ಜೀವನದಲ್ಲಿ ಸಮೃದ್ಧಿಯನ್ನು ತರಲಿ.

ಮುಗ್ಧಾಮುಹುರ್ವಿದಧತೀ ವದನೇ ಮುರಾರೇಃ,
ಪ್ರೇಮತ್ರಪಾ ಪ್ರಣಿಹಿತಾನಿ ಗತಾಗತಾನಿ,
ಮಾಲಾದೃಶೋರ್ಮಧುಕರೀವ ಮಹೋತ್ಪಲೇ ಯಾ,
ಸಾ ಮೇ ಶ್ರಿಯಂ ದಿಶತು ಸಾಗರಸಂಭವಾಯಾಃ

ದುಂಬಿಯು ಕಮಲದ ಹೂವಿನ ಬಳಿ ಸುಳಿದಾಡುವಂತೆ, ಶ್ರೀಮಹಾಲಕ್ಷ್ಮಿಯ ಸುಂದರವಾದ ಕಣ್ಣುಗಳು ತನ್ನ ನಾಥನಾದ ನಾರಾಯಣನನ್ನು ನೋಡಲು ಹಾತೊರೆಯುತ್ತಿದೆ. ನಾಥನು ತನ್ನನ್ನು ನೋಡಿದ ಕ್ಷಣ ಲಜ್ಜೆಯಿಂದ ತನ್ನ ನೋಟವನ್ನು ಹಿಂತೆಗೆಯುತ್ತಾಳೆ. ಹೀಗೆ ನಾರಾಯಣನು ತನ್ನನ್ನು ನೋಡಿದಾಗ ನಾಚುತ್ತಾ, ಆತನ ದೃಷ್ಟಿ ಬೇರೆ ಕಡೆ ಇದ್ದಾಗ ನಾಥನನ್ನು ದಿಟ್ಟಿಸುತ್ತಾ ಇರುವ ನಯನ ಮನೋಹರ ಕಣ್ಣಿನ ನೋಟವು ನನ್ನ ಮೇಲೆ ಹರಿದು ನನಗೆ ಸಿರಿ ಸಂಪದಗಳನ್ನು ದಯಪಾಲಿಸಲಿ.

ವಿಶ್ವಾಮರೇಂದ್ರಪದವಿಭ್ರಮದಾನದಕ್ಷಂ
ಆನಂದಹೇತುರಧಿಕಂ ಮುರವಿದ್ವಿಷೋಽಪಿ,
ಈಷನ್ನಿಷೀದತು ಮಯಿ ಕ್ಷಣಮೀಕ್ಷಣಾರ್ಥಮ್,
ಇಂದ್ರೀವರೋದರ ಸಹೋದರಮಿಂದಿರಾಯಾಃ

ನೀಲಿ ಕಮಲಗಳನ್ನು ಹೋಲುವ ಶ್ರೀಮಹಾಲಕ್ಷ್ಮಿಯ ಕಾಂತಿಯುತ ಅರೆ ಮಿಲಿತ ಕಣ್ಣುಗಳ ನೋಟ, ಸಮಸ್ತ ಸ್ವರ್ಗ ಸಾಮ್ರಾಜ್ಯಾಧಿಪತ್ಯವನ್ನು ತನ್ನ ಭಕ್ತರಿಗೆ ಅನುಗ್ರಹಿಸುವ ಸಮಸ್ತ ಶಕ್ತಿಯನ್ನು ಹೊಂದಿದೆ. ಮುರಾಂತಕನಾದ ಶ್ರೀಮಹಾವಿಷ್ಣುವಿಗೂ ಸಹ ಆ ನೋಟವು ಪರಮಾನಂದವನ್ನು ನೀಡುತ್ತದೆ. ಆದ್ದರಿಂದ ಇಂದಿರಾ ದೇವಿಯ ಅರಳಿದ ಕಣ್ಣಿನ ನೋಟವು ನನ್ನ ಮೇಲೆ ಒಂದು ಕ್ಷಣ ವಿಶ್ರಾಂತಿ ಪಡೆಯಲಿ.

ಆಮೀಲಿತಾಕ್ಷಮಧಿಗಮ್ಯ ಮುದಾ ಮುಕುಂದ
ಮಾನಂದ ಕಂದಮನಿಮೇಷ ಮನಂಗತಂತ್ರಮ್,
ಆಕೇಕರಸ್ಥಿತಕನೀನಿಕ ಪಕ್ಷ್ಮನೇತ್ರಂ
ಭೂತ್ಯೈ ಭವೇನ್ಮಮ ಭುಜಂಗಶಯಾಂಗನಾಯಾಃ

ಭಾವ ಪರವಶತೆಯಿಂದ ಕಣ್ಣುಗಳನ್ನು ಮುಚ್ಚಿರುವ, ಆನಂದಕ್ಕೆ ಆಧಾರನಾದ ನಾರಾಯಣನನ್ನು ಪ್ರೀತಿಯಿಂದ ರೆಪ್ಪೆ ಮಿಟುಕಿಸದೆ ಮದನ ಪರವಶಳಾಗಿ ಅರೆ ತೆರೆದ ಕಣ್ಣುಗಳಿಂದ ಲಜ್ಜೆಯ ನೋಟದಿಂದ ಓರೆಗಣ್ಣಿನಿಂದ ಸ್ವಾಮಿಯನ್ನು ದಿಟ್ಟಿಸುತ್ತಿರುವ ರಮಾದೇವಿಯ ನೇತ್ರ ದೃಷ್ಟಿಯು ನನಗೆ ಸುಖ ಸಂಪದಗಳನ್ನು ಪ್ರಸಾದಿಸಲಿ.

ಕಾಲಾಂಬುದಾಳಿಲಲಿತೋರಸಿ ಕೈಟಭಾರೇಃ
ಧಾರಾಧರೇ ಸ್ಫುರತಿ ಯಾ ತಟಿದಂಗನೇವ,
ಮಾತುಸ್ಸಮಸ್ತಜಗತಾಂ ಮಹನೀಯ ಮೂರ್ತಿಃ
ಭದ್ರಾಣಿ ಮೇ ದಿಶತು ಭಾರ್ಗವನಂದನಾಯಾಃ

ಚಂದದ ಮಳೆ ಬಂದಾಗ ಕಪ್ಪು ಮೋಡದ ಆಕಾಶದಲ್ಲಿ ಥಳಥಳಿಸುವ ಮಿಂಚಿನಂತೆ, ಶ್ರೀಮಹಾವಿಷ್ಣುವಿನ ವಕ್ಷಸ್ಥಳದಲ್ಲಿ ಕಂಗೊಳಿಸುತ್ತಿರುವ ಜಗಜ್ಜನನಿ, ಆ ಮಹಾಲಕ್ಷ್ಮಿಯ ಮಂಗಳಕರ ರೂಪವು ನನಗೆ ಶುಭವನ್ನು ಪ್ರಸಾದಿಸಲಿ.

ಬಾಹ್ವಂತರೇ ಮಧುಜಿತಃ ಶ್ರಿತಕೌಸ್ತುಭೇಯಾ,
ಹಾರಾವಳೀವ ಹರಿನೀಲಮಯೀ ವಿಭಾತಿ,



ಕಾಮಪ್ರದಾ ಭಗವತೋऽಪಿ ಕಟಾಕ್ಷಮಾಲಾ
ಕಲ್ಯಾಣಮಾವಹತು ಮೇ ಕಮಲಾಲಯಾಯಾಃ

ಹೇ ಜಗಜ್ಜನನಿಯೇ, ಪ್ರೀತಿಯ ನೋಟವುಳ್ಳ, ಕೌಸ್ತುಭಮಣಿಯನ್ನು ಧರಿಸಿರುವ, ಮುರಾಸುರನನ್ನು ಸಂಹರಿಸಿದ ಶ್ರೀ ಮಹಾವಿಷ್ಣುವಿನ ವಕ್ಷಸ್ಥಳದಲ್ಲಿ ನೀಲಮಣಿ ಹಾರದಂತೆ ಹೊಳೆಯುವ, ನಾರಾಯಣಿಯ ಕರುಣ ಕಟಾಕ್ಷವು ನನ್ನನ್ನು ಆಶೀರ್ವದಿಸಿ,ನನಗೆ ಐಶ್ವರ್ಯ,ಸಂಪತ್ತನ್ನು ತರಲಿ.

ಪ್ರಾಪ್ತಂ ಪದಂ ಪ್ರಥಮತಃ ಖಲು ಯತ್ಪ್ರಭಾವಾತ್,
ಮಾಂಗಲ್ಯಭಾಜಿ ಮಧುಮಾಥಿನಿ ಮನ್ಮಥೇನ,
ಮಯ್ಯಾಪತೇತ್ತದಿಹ ಮಂಥರಮೀಕ್ಷಣಾರ್ಧಂ,
ಮಂದಾಲಸಂ ಚ ಮಕರಾಲಯಕನ್ಯಕಾಯಾಃ

ಶ್ರೀ ಮಹಾಲಕ್ಷ್ಮಿ ಕಟಾಕ್ಷದಿಂದ ಮಧುವನು ರಾಕ್ಷಸನನ್ನು ಸಂಹರಿಸಿದ ನಾರಾಯಣನು ಸಮಸ್ತ ಸನ್ಮಂಗಳಗಳನ್ನು ದಯಪಾಲಿಸುವವನಾಗಿದ್ದಾನೆ. ಅನುರಾಗಭರಿತವಾದ ಆ ದೇವಿಯ ದೃಷ್ಟಿಯು ತನ್ನ ಮೇಲೆ ಇದ್ದುದರಿಂದಲೇ ಕಾಮ ಪರವಶನಾಗಿ ಜಗದ್ರಕ್ಷಣದ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದಾನೆ. ಆ ದೇವಿಯ ಸೌಮ್ಯವಾದ, ಅರೆ ಮಿಲಿತ ಕಣ್ಣುಗಳ ನೇರ ನೋಟವು ನನ್ನ ಮೇಲೆ ಪ್ರಸರಿಸಿ ನನ್ನನ್ನು ಕೃತಾರ್ಥನನ್ನಾಗಿ ಮಾಡಲಿ.

ದದ್ಯಾದ್ದಯಾನುಪವನೋ ದ್ರವಿಣಾಂಬುಧಾರಾ
ಮಸ್ಮಿನ್ನ ಕಿಂಚನ ವಿಹಂಗಶಿಶೌ ವಿಷಣ್ಣೇ,
ದುಷ್ಕರ್ಮಘರ್ಮಮಪನೀಯ ಚಿರಾಯ ದೂರಂ,
ನಾರಾಯಣಪ್ರಣಯಿನೀನಯನಾಂಬುವಾಹಃ

ಬಿಸಿಲಿನ ತಾಪ ತಾಳಲಾರದೆ ಜಾತಕ ಪಕ್ಷಿ ಮರಿಯು ವಿಲವಿಲ ಒದ್ದಾಡುತ್ತಿರುವಾಗ, ಮೇಘವು ಮಳೆ ಸುರಿಸಿ, ಆ ಪಕ್ಷಿಗೆ ತಂಪನ್ನೀಯ್ದು, ಮಳೆ ನೀರಿನ ಹನಿಗಳು ಆ ಪಕ್ಷಿಯ ಬಾಯಾರಿಕೆ ತೀರಿಸಿ ತೃಪ್ತಿ ಪಡಿಸಿದಂತೆ, ಶ್ರೀಮನ್ನಾರಾಯಣನ ಪ್ರೇಯಸಿಯಾದ ಇಂದಿರಾದೇವಿಯ ಕಟಾಕ್ಷ ವೆಂಬ ಮೇಘವು ಕಾರುಣ್ಯವೆಂಬ ಗಾಳಿಯಿಂದ ಪ್ರೇರಿತವಾಗಿ, ಜನ್ಮ ಜನ್ಮಾಂತರದ ದುಷ್ಕರ್ಮಗಳೆಂಬ ತಾಪವನ್ನು ನಿವಾರಿಸಿ, ಧನವೆಂಬ ಮಳೆ ಸುರಿಸಿ ಚಾತಕ ಶಿಶುವಾದ ನನಗೆ ಸಂತೃಪ್ತಿಯನ್ನು ನೀಡಲಿ.

ಇಷ್ಟಾ ವಿಶಿಷ್ಟಮತಯೋऽಪಿ ಯಯಾ ದಯಾರ್ದ್ರ,
ದೃಷ್ಟ್ಯಾತ್ರಿವಿಷ್ಟಪಪದಂ ಸುಲಭಂ ಲಭಂತೇ,
ದೃಷ್ಟಿಂ ಪ್ರಹೃಷ್ಟ ಕಾಮಲೋದರ ದೀಪ್ತಿರಿಷ್ಟಾಂ,
ಪುಷ್ಟಿಂ ಕೃಷೀಷ್ಟಮಮ ಪುಷ್ಕರವಿಷ್ಟರಾಯಾಃ

ಸ್ವರ್ಗ ಲೋಕದ ಸುಖ ಕರುಣಿಸುವ, ಯಜ್ಞಯಾಗಾದಿಗಳ ಶುಭಕರ್ಮಗಳನ್ನು ಆಚರಿಸುವ ಇಚ್ಛಾಶಕ್ತಿ ಇಲ್ಲದವರ ಮೇಲೂ ಶ್ರೀಮಹಾದೇವಿಯ ದೃಷ್ಟಿ ಬಿದ್ದಲ್ಲಿ, ಮಾನವರು ಅನಾಯಾಸವಾಗಿ ಸ್ವರ್ಗಲೋಕ ಪದವಿಯನ್ನು ಹೊಂದಬಲ್ಲರು. ಅರಳಿದ ಕಮಲದ ಕಾಂತಿಯುಳ್ಳ ಶ್ರೀ ಮಹಾಲಕ್ಷ್ಮಿಯ ಕರುಣಾಮಯವಾದ ನೋಟವು ನನಗೆ ಐಶ್ವರ್ಯ ಸಮೃದ್ಧಿಗಳನ್ನು ದಯಪಾಲಿಸಲಿ.

ಗೀರ್ದೇವತೇತಿ ಗರುಡಧ್ವಜಸುಂದರೀತಿ
ಶಾಕಂಭರೀತಿ ಶಶಿಶೇಖರವಲ್ಲಭೇತಿ,
ಸೃಷ್ಟಿಸ್ಥಿತಿಪ್ರಳಯ ಕೇಳಿಷು ಸಂಸ್ಥಿತಾಯೈ,
ತಸ್ಯೈ ನಮಸ್ತ್ರಿಕಾಭುವನೈಗುರೋಸ್ತ ತರುಣ್ಯೈ.

ಲೋಕವನ್ನು ಸೃಷ್ಟಿಸುವ ಸಮಯದಲ್ಲಿ ಬ್ರಹ್ಮನ ಪತ್ನಿ ಭಾರತಿ ಎಂದು, ರಕ್ಷಣೆಯ ಸಮಯದಲ್ಲಿ ನಾರಾಯಣ ಪತ್ನಿಯಾಗಿ ನಾರಾಯಣಿ ಎಂದು, ಕಾಲಸ್ವರೂಪಿನಿಯಾಗಿ ಶಾಕಾಂಬರಿ ಎಂದು, ಪ್ರಳಯ ಕಾಲದಲ್ಲಿ ಶಂಭುವಿನ ರಾಣಿಯಾಗಿ ಗೌರಿ ಎಂಬ ಹೆಸರು ಪಡೆದು ಮೂರ್ಜಗ ದೊಡೆಯನಾದ ಮುರಹರಿಯ ಪ್ರಿಯಸಖಿಯಾದ ಶ್ರೀಮಹಾಲಕ್ಷ್ಮಿಗೆ ನಮಸ್ಕಾರಗಳು.

ಶ್ರುತ್ಯೈ ನಮೋऽಸ್ತು ಶುಭಕರ್ಮಫಲ ಪ್ರಸೂತ್ಯೈ
ರತ್ಯೈ ನಮೋऽಸ್ತು ರಮಣೀಯಗುಣಾರ್ಣವಾಯೈ
ಶಕ್ತ್ಯೈ ನಮೋऽಸ್ತು ಶತಪತ್ರನಿಕೇತನಾಯೈ,
ಪುಷ್ಟ್ಯೈನಮೋऽಸ್ತು ಪುರುಷೋತ್ತಮವಲ್ಲಭಾಯೈ

ಯಜ್ಞಯಾಗಾದಿ ಪುಣ್ಯಕರ್ಮಗಳ ಪ್ರಯೋಜನವನ್ನು ಸಾರುವ ವೇದ ಸ್ವರೂಪಿಣಿಯಾದ ಶ್ರೀಮಹಾಲಕ್ಷ್ಮಿಗೇ ಪ್ರಣಾಮಗಳು. ವಾತ್ಸಲ್ಯ, ಕಾರುಣ್ಯ, ಸೌಶಿಲ್ಯಾದಿ ಸದ್ಗುಣಗಳ ಸಾಗರವೇ ಆಗಿರುವ, ಆನಂದ ಸ್ವರೂಪಿಣಿ ಆದ ಶ್ರೀಮಹಾಲಕ್ಷ್ಮಿಗೆ ಕೈ ಜೋಡಿಸಿ ನಮಸ್ಕರಿಸುತ್ತೇನೆ. ಶತದಳ ಪದ್ಮದಲ್ಲಿ ನೆಲೆಸಿರುವ ಶಕ್ತಿ ಸ್ವರೂಪಿಣಿಯಾದ ಇಂದಿರಾದೇವಿಗೆ ನಮಸ್ಕಾರಗಳು. ಪರಮ ಪುರುಷನಾದ ಶ್ರೀಮಹಾವಿಷ್ಣುವಿನ ಪ್ರಿಯಸಖಿಯಾದ, ಸರ್ವಸಮೃದ್ಧಿ ದೇವತೆಯಾದ ಭಾರ್ಗವಿಗೆ ಪ್ರಣಾಮಗಳು.

ನಮೋऽಸ್ತು ನಾಳೀಕ ನಿಭಾನನಾಯೈ
ನಮೋऽಸ್ತು ದುಗ್ಧೋದಧಿ ಜನ್ಮಭೂಮ್ಯೈ
ನಮೋऽಸ್ತು ಸೋಮಾಮೃತಸೋದರಾಯೈ
ನಮೋऽಸ್ತು ನಾರಾಯಣವಲ್ಲಭಾಯೈ

ಶ್ರೀ ಮಹಾಲಕ್ಷ್ಮಿಯು ಪದ್ಮಮುಖಿ. ಆಕೆ ಕ್ಷೀರ ಸಾಗರದಲ್ಲಿ ಜನಿಸಿರುವವಳು. ಆಕೆ ಸಮುದ್ರ ಮಥನದಲ್ಲಿ ಚಂದ್ರ ಮತ್ತು ದಿವ್ಯ ಅಮೃತದೊಂದಿಗೆ ಜನಿಸಿರುವವಳು. ಆದ್ದರಿಂದ ಆಕೆ ಚಂದ್ರ ಸುಧಾ ಸಹೋದರಿ. ಶ್ರೀಮನ್ನಾರಾಯಣನಿಗೆ ಅತ್ಯಂತ ಪ್ರಿಯಳಾದವಳು. ಅಂತಹ ಜಗಜ್ಜನನಿಗೆ ನಮಸ್ಕಾರಗಳು.

ದಾರಿದ್ರ ವಿಮೋಚನ ಸ್ತೋತ್ರದಲ್ಲಿ ಲಕ್ಷ್ಮಿದೇವಿಯನ್ನು ಪದ್ಮ ಎಂದು, ಪದ್ಮಪ್ರಿಯೆ ಎಂದು, ಪದ್ಮ ಹಸ್ತ ಎಂದು, ಪದ್ಮಾಕ್ಷಿ ಎಂದು, ಪದ್ಮ ಸುಂದರಿ ಎಂದು, ಪದ್ಮೋದ್ಭವ ಎಂದು, ಪದ್ಮ ಮುಖಿ ಎಂದು, ಪದ್ಮ ಮಾಲಾಧರೆ ಎಂದು,ಪದ್ಮಿನಿ ಎಂದು, ಪದ್ಮಗಂಧಿನಿ ಎಂದು ಕೊಂಡಾಡಲ್ಪಟ್ಟಿದೆ. ಆಕೆಯ ಮುಖಾದಿಗಳನ್ನು ಪದ್ಮದೊಂದಿಗೆ ಹೋಲಿಸುವುದರಿಂದ ಆಕೆ ಶೈತ್ಯ ಸೌರಭ್ಯಗಳ ಸ್ಥಾನವೆಂದು ವರ್ಣಿಸಲ್ಪಟ್ಟಿದೆ. ಚಂದ್ರನೊಂದಿಗೆ

ಜನಿಸಿರುವಳು ಎಂದು ಹೇಳುವುದರಿಂದ ಆಕೆ ಪರಮಾನಂದಕ್ಕೆ ಸರಿಸಾಟಿ ಇಲ್ಲದವಳೆಂದು, ಅಮೃತ ಸಹೋದರಿ ಎಂದು ವಿವರಿಸುವುದರಿಂದ ಆಕೆಯನ್ನು ಎಷ್ಟೇ ಸೇವಿಸಿದರೂ ಮನ ತಣಿಯದೆಂದು, ಆಕೆ ಹುಟ್ಟಿದ ಸ್ಥಳ ರತ್ನಾಕರವಾಗಿರುವುದರಿಂದ ಆಕೆ ಆದಿ ಗರ್ಭೇಶ್ವರಿ ಎಂದು ಪ್ರಶಂಸಿಸಿದಂತಾಗಿದೆ.

ನಮೋಽಸ್ತು ಹೇಮಾಂಬುಜ ಪೀಠಿಕಾಯೈ
ನಮೋಽಸ್ತು ಭೂಮಂಡಲನಾಯಿಕಾಯೈ
ನಮೋಽಸ್ತು ದೇವಾದಿದಯಾಪರಾಯೈ
ನಮೋಽಸ್ತು ಶಾರ್ಙ್ಗಾಯುಧ ವಲ್ಲಭಾಯೈ

ಸ್ವರ್ಣ ಪದ್ಮಾಸನದಲ್ಲಿ ಕುಳಿತಿರುವ ಮಹಾಲಕ್ಷ್ಮಿಗೆ ವಂದನೆಗಳು. ಭೂ ಅಧಿದೇವತೆಯಾದ ಮಹಾದೇವಿಗೆ ನಮಸ್ಕಾರಗಳು. ದೇವಾದಿ ದೇವತೆಗಳು ಮತ್ತು ಸಾಧು ವರ್ಗದ ಕಾರುಣ್ಯವನ್ನು ಹೊಂದಿರುವ ಶಾಂತ ಮಾತೆಗೆ ಕೈ ಮುಗಿದು ನಮಸ್ಕರಿಸುವೆ. ಶಾರ್ಙ್ಗಮ ಧನಸ್ಸನ್ನು ಧರಿಸಿರುವ ವಿಷ್ಣು ದೇವನ ಪ್ರಿಯೆ ಶ್ರೀಲಕ್ಷ್ಮಿಗೆ ನಮಸ್ಕಾರಗಳು.

ನಮೋಽಸ್ತು ದೇವ್ಯೈ ಭೃಗುನಂದನಾಯೈ
ನಮೋಽಸ್ತು ವಿಷ್ಣೋರುರಸಿಸ್ಥಿತಾಯೈ
ನಮೋಽಸ್ತು ಲಕ್ಷ್ಮ್ಯೈ ಕಮಲಾಲಯಾಯೈ
ನಮೋಽಸ್ತು ದಾಮೋದರ ವಲ್ಲಭಾಯೈ

ಭೃಗು ಮಹಾಮುನಿಯ ಪುತ್ರಿಯು, ವಿಷ್ಣುವಿನ ವಕ್ಷಸ್ಥಳದಲ್ಲಿ ನೆಲೆಸಿರುವವಳು, ಪದ್ಮಾಸನಸ್ಥಿತಳು, ಯಶೋಧಾದೇವಿ ಆಡಿಸಿ ಲಾಲಿಸಿ ಪಾಲಿಸಿರುವ ಕೇಶವನ ಪ್ರಿಯಸಖಿಯಾದ ಲಕ್ಷ್ಮೀದೇವಿಗೆ ವಂದನೆಗಳನ್ನು ಸಮರ್ಪಿಸುತ್ತೇನೆ.

ನಮೋಽಸ್ತು ಕಾಂತ್ಯೈ ಕಮಲೇಕ್ಷಣಾಯೈ
ನಮೋಽಸ್ತು ಭೂತ್ಯೈ ಭುವನಪ್ರಸೂತ್ಯೈ
ನಮೋಽಸ್ತು ದೇವಾದಿಭಿರರ್ಚಿತಾಯೈ
ನಮೋಽಸ್ತು ನಂದಾತ್ಮಜವಲ್ಲಭಾಯೈ

ನಳಿನ ದಳಗಳಂತಿರುವ ನಯನಗಳನ್ನು ಹೊಂದಿರುವ, ತೇಜಸ್ವಿ, ರೂಪಿಣಿ, ಲೋಕಮಾತೆ, ಸಂಪತ್ಸ್ವರೂಪಿಣಿಯಾದ, ಪ್ರಥಮವಾಗಿ ದೇವತೆಗಳಿಂದ ಪೂಜಿಸಲ್ಪಡುವ, ನಂದಗೋಪನ ಪುತ್ರನಾದ ಶ್ರೀಕೃಷ್ಣನ ಪ್ರಿಯಸಖಿಯಾದ ಶ್ರೀಮಹಾಲಕ್ಷ್ಮಿಗೆ ನಮೋ ನಮಃ

ಸಂಪತ್ಕರಾಣಿ ಸಕಲೇಂದ್ರಿಯನಂದನಾನಿ,
ಸಾಮ್ರಾಜ್ಯ ದಾನವಿಭವಾನಿ ಸರೋರುಹಾಕ್ಷಿ,
ತ್ವದಂದನಾನಿ ದುರಿತಾದ್ಧರಣೋದ್ಯತಾನಿ,
ಮಾಮೇವ ಮಾತರನಿಶಂ ಕಲಯನ್ತು ಮಾನ್ಯೇ

ಪದ್ಮ ಪತ್ರಗಳಂತಹ ಕಣ್ಣುಗಳನ್ನು ಹೊಂದಿರುವ ತಾಯಿ, ನಿನಗೆ ಸಲ್ಲಿಸುವ ಸಹಸ್ರ ನಮಸ್ಕಾರಗಳು, ಸಮಸ್ತ ಸಂಪದಗಳನ್ನು ದಯಪಾಲಿಸುತ್ತವೆ. ಎಲ್ಲಾ ಇಂದ್ರೀಯಗಳಿಗೂ ಆನಂದವನ್ನು ನೀಡುತ್ತದೆ. ಸಾಮ್ರಾಜ್ಯ ವೈಭವಗಳನ್ನು ಅನುಗ್ರಹಿಸುತ್ತದೆ. ವಿಶೇಷವಾಗಿ ಸಂಚಿತ ಪಾಪಗಳು ನಾಶ ಹೊಂದುತ್ತವೆ. ತಾಯಿ, ಪೂಜ್ಯಳಾದ ಓ ಮಾತೆ, ನಿನ್ನ ಚರಣಗಳಿಗೆ ವಂದನೆಗಳನ್ನು ಸಮರ್ಪಿಸುತ್ತಿದ್ದೇನೆ. ನನ್ನನ್ನು ಕೃತಾರ್ಥನನ್ನಾಗಿ ಮಾಡು.

ಯತ್ಕಟಾಕ್ಷಸಮುಪಾಸನಾವಿಧಿಃ
ಸೇವಕಸ್ಯ ಸಕಲಾರ್ಥಸಂಪದಃ
ಸಂತನೋತಿ ವಚನಾಂಗಮಾನಸೈಃ
ಸ್ತ್ವಾಂ ಮುರಾರಿಹೃದಯೇಶ್ವರೀಂ ಭಜೇ

ಅಮ್ಮಾ! ಶ್ರೀ ಮಹಾಲಕ್ಷ್ಮೀ ನಿನ್ನನ್ನು ಸೇವಿಸುವವರಿಗೆ ನಿನ್ನ ಕೃಪಾಕಟಾಕ್ಷದ ಸಕಲ ವೈಭವಗಳು ಸಂಪ್ರಾಪ್ತಿಯಾಗುತ್ತವೆ. ಶ್ರೀಹರಿಯ ಪ್ರಾಣಸಖಿಯಾದ ಮಾತೆ, ಮನೋವಾಕಾಯ ಸಹಿತ ತ್ರಿಕರಣಗಳಿಂದ ನಿನ್ನನ್ನು ಸೇವಿಸುತ್ತೇನೆ. ನನ್ನನ್ನು ಅನುಗ್ರಹಿಸು.

ಸರಸಿಜನಿಲಯೇ ಸರೋಜಹಸ್ತೇ
ಧವಳತಮಾಂಶುಕಗಂಧಮಾಲ್ಯ-ಶೋಭೇ
ಭಗವತಿ ಹರಿವಲ್ಲಭೇ ಮನೋಜ್ಞೇ
ತ್ರಿಭುವನಭೂತಿಕರಿ ಪ್ರಸೀದ ಮಹ್ಯಮ್

ಕಮಲದ ಎಲೆಯಂತಹ ಕಣ್ಣುಗಳುಳ್ಳವಳು, ಕರದಲ್ಲಿ ಕಮಲದ ಮೊಗ್ಗನ್ನು ಹಿಡಿದಿರುವವಳು, ಎಲ್ಲಕ್ಕಿಂತಲೂ ಮಿಗಿಲಾಗಿ ಶ್ವೇತ ರೇಷ್ಮೆ ಧರಿಸಿರುವವಳು,ಚಂದನ ಲೇಪನದೊಂದಿಗೆ ಹೆಗಲ ಮೇಲೆ ಹೂವಿನ ದಂಡೆಗಳೊಂದಿಗೆ ವಿರೋಜಿಸುತ್ತಿರುವವಳು, ಮನಸ್ಸಿಗೆ ಇಂಪನ್ನು ನೀಡುವ, ಅಂದ ಚಂದಗಳನ್ನು ಹೊಂದಿರುವ ಮೂರ್ಜಗಕ್ಕೆ ಸಿರಿ ಸಂಪದಗಳನ್ನು ಒದಗಿಸುವ, ಜ್ಞಾನ, ಬಲ, ಐಶ್ವರ್ಯ, ವೀರ್ಯ ಶಕ್ತಿ, ತೇಜಸ್ಸುಗಳೆಂಬ ಆರು ಗುಣಗಳಿಂದ ವಿರಾಜಿಸುತ್ತಿರುವ ಶ್ರೀಮನ್ನಾರಾಯಣನ ಜೀವಿತೇಶ್ವರಿ ಆದ ಓ ಮಹಾಲಕ್ಷ್ಮಿ! ನನ್ನನ್ನು ಅನುಗ್ರಹಿಸು ತಾಯೇ.

ದಿಗ್ಗಸ್ತಿಭಿಃ ಕನಕಕುಂಭಮುಖಾವಸೃಷ್ಟ,
ಸ್ವರ್ವಾಹಿನೀ ವಿಮಲಚಾರುಜಲಪ್ಲುತಾಂಗೀಮ್
ಪ್ರಾತರ್ನಮಾಮಿ ಜಗತಾಂ ಜನನೀಮಶೇಷ,
ಲೋಕಾಧಿನಾಥ ಗೃಹಿಣೀ ಮಮೃತಾಬ್ಧಿಪುತ್ರೀಂ

ಐರಾವತ ದಿಗ್ಗಜರು ಕನಕ ಕಲಶಗಳಲ್ಲಿ ತಂದಿರುವ ಗಂಗಾಜಲದಿಂದ ಮಾಡಿದ ಅಭಿಷೇಕದಿಂದ ಸ್ನಾನ ಮಾಡಿದ ಮಾತೆಯೇ, ಜಗಜ್ಜನನಿಯೇ, ಸಮಸ್ತಲೋಕಕ್ಕೆ ಪ್ರಭುವಾದ ಶ್ರೀಮಹಾವಿಷ್ಣುವಿನ ಮಡದಿಯೇ, ಕ್ಷೀರಸಾಗರ ಪುತ್ರಿಯೂ ಆದ ಶ್ರೀಮಹಾಲಕ್ಷ್ಮಿಯನ್ನು ಪ್ರಾತಃಕಾಲದಲ್ಲಿಯೇ ನಮಸ್ಕರಿಸುತ್ತಿದ್ದೇನೆ.

ಕಮಲೇ ಕಮಲಾಕ್ಷವಲ್ಲಭೇ ತ್ವಂ,
ಕರುಣಾಪೂರರಂಗಿತೈರಪಾಂಗೈ
ಅವಲೋಕಯ ಮಾಮಕಿಂಚನಾನಾಂ,
ಪ್ರಥಮಂ ಪಾತ್ರಮಕೃತಿಮಂ ದಯಾಯಾಃ

ಕಮಲದ ನೇತ್ರಗಳುಳ್ಳ ಶ್ರೀಮನ್ನಾರಾಯಣನ ಪ್ರೀತಿಯ ಮಡದಿಯಾದ ಓ ಕಮಲಾಂಬಿಕೆ! ನನ್ನ ಮನವಿಯನ್ನು ಆಲಿಸು. ನಾನು ದರಿದ್ರರಲ್ಲಿ ಅಗ್ರೇಸರನು. ಎಲ್ಲಾ ವಿಧಗಳಲ್ಲಿಯೂ ನಿನ್ನ ಕೃಪೆಗೆ ಅರ್ಹನು. ದಯೆ ಮತ್ತು ಸಹಾನು ಭೂತಿಯ ನಿನ್ನ ನೋಟವನ್ನು ನನ್ನ ಕಡೆ ಹರಿಸಿ,ನನ್ನನ್ನು ಧನ್ಯನನ್ನಾಗಿಸು.

ಸ್ತುವಂತಿ ಯೇ ಸ್ತುತಿಭಿರಮೂಭಿರನ್ವಹಂ,
ತ್ರಯೀಮಯೀಂ ತ್ರಿಭುವನಮಾತರಂ ರಮಾಮ್,
ಗುಣಾಧಿಕಾ ಗುರುತರ ಭಾಗ್ಯಭಾಜಿನೋ,
ಭವಂತಿ ತೇ ಭುವಿ ಬುಧಭಾವಿತಾಶ ಯಾಃ

ವೇದಸ್ವರೂಪಿಣಿ,ಮೂರ್ಜಗಕೆ ಮಾತೆಯಾದ ಲಕ್ಷ್ಮೀದೇವಿಯನ್ನು ಈ ಸೋತ್ರದಿಂದ ಯಾರು ಪ್ರತಿದಿನವೂ ಸ್ತುತಿಸುತ್ತಾರೋ, ಅವರು ಅಧಿಕ ಸದ್ಗುಣ ಸಂಪನ್ನಗಳನ್ನು ಹೊಂದಿ, ಪರಮ ಭಾಗ್ಯವಂತರಾಗಿ ಪಂಡಿತರ ಪ್ರಶಂಸೆಗಳಿಗೆ ಪ್ರಾಪ್ತರಾಗುತ್ತಾರೆ.

ಸುವರ್ಣಧಾರಾಸ್ತೋತ್ರಂ
ಯಚ್ಛಂಕರಾಚಾರ್ಯ ನಿರ್ಮಿತಮ್
ತ್ರಿಸಂಧ್ಯಂ ಯಃಪಠೇನ್ನಿತ್ಯಂ ಸ
ಕುಬೇರ ಸಮೋ ಭವೇತ್

ಶಂಕರ ಭಗವತ್ಪಾದಾಚಾರ್ಯರಿಂದ ವಿರಚಿತವಾದ ಈ ಕನಕಧಾರಸ್ತೋತ್ರವನ್ನು ಬೆಳಿಗ್ಗೆ,ಮಧ್ಯಾಹ್ನ, ಸಾಯಂಕಾಲಗಳಲ್ಲಿ ಯಾರು ಪಠಿಸುತ್ತಾರೋ,ಅವರು ನವನಿಧಿನಾಯಕರಾಗಿ,ಕುಬೇರನಿಗೆ ಸಮನಾದ ಭಾಗ್ಯವನ್ನು ಹೊಂದುತ್ತಾರೆ.

**ಗದ್ಯ ಶ್ಲೋಕ**

ಇತಿ
ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಸ್ಯ
ಶ್ರೀ ಗೋವಿಂದ ಭಗವತ್ಪೂಜ್ಯ ಪಾದಶಿಷ್ಯಸ್ಯ
ಶ್ರೀ ಮಚ್ಛಂಕರ ಭಗವತಃ ಕೃತೌ
ಕನಕಧಾರಾಸ್ತೋತ್ರಂ ಸಂಪೂರ್ಣಮ್

ಶ್ರೀಮದ್ ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀ ಶಂಕರ ಭಗವತ್ಪಾದರಿಂದ ರಚಿತವಾಗಿರುವ ಕನಕಧಾರ ಸ್ತೋತ್ರವು ಸಂಪೂರ್ಣವಾಯಿತು.

ಭಾಷೋದ್ಧಾರಕರಾದ ಶ್ರೀವಾವಿಲ್ಲಿ ಅವರು ಪ್ರಚುರಪಡಿಸಿದ ಕನಕಧಾರೋತ್ಸವದಲ್ಲಿನ, ತಾಳಪತ್ರ ಲಿಖಿತ ಗ್ರಂಥದಲಿಲ್ಲದಂತಹ ಶ್ಲೋಕಗಳನ್ನು ಶೇಖರಿಸಿ ಪ್ರಚುರಪಡಿಸಿದ ಈ ಅಧಿಕಪಾಠ ಶ್ಲೋಕಗಳು ಕೆಳಕಂಡಂತಿವೆ.

**ಅಧಿಕ ಶ್ಲೋಕ**

ಬಿಲ್ವಾಟವೀ ಮಧ್ಯಲಸತ್ಸರೋಜೇ
ಸಹಸ್ರಪತ್ರೇ ಸುಖಸನ್ನಿವಿಷ್ಟಾಮ್
ಅಷ್ಟಾಪದಾಂಭೋರುಹ ಪಾಣಿಪದ್ಮಾಂ
ಸುವರ್ಣವರ್ಣಾಂ ಪ್ರಣಮಾಮಿ ಲಕ್ಷ್ಮೀಮ್

ಬಿಲ್ವವನದಲ್ಲಿ ಸಹಸ್ರದಳ ಶೋಭಿತವಾದ ಪದ್ಮದ ಮೇಲೆ ಹಾಯಾಗಿ ಕುಳಿತಿರುವವಳು,ಕನಕ ಕಮಲ ಪದ್ಮವನ್ನು ಕೈಯಲ್ಲಿ ಧರಿಸಿರುವ ರಮಾದೇವಿಗೆ ನಮಸ್ಕರಿಸುತ್ತಿದ್ದೇನೆ.

ಕಮಲಾಸನ ಪಾಣಿನಾ ಲಲಾಟೇ
ಲಿಖಿತಾಮಕ್ಷರ ಪಂಕ್ತಿ ಮಸ್ಯ ಜಂತೋಃ
ಪರಿಮಾರ್ಜಯ ಮಾತರಂಘ್ರಿಣಾ ತೇ
ಧನಿಕದ್ವಾರನಿವಾಸ ದುಃಖದೋಗ್ಧ್ರೀಮ್

ಅಮ್ಮಾ! ಶ್ರೀಮಂತರ ಮನೆಯ ಮುಂದೆ ನಿಂತು ಯಾಚಿಸುತ್ತಾ, ಅವರು ಕೊಡುವ ಹಣದಿಂದ ಬದುಕು ಎಂದು ಬ್ರಹ್ಮ ದೇವರು ಬರೆದ ಹಣೆಬರಹವನ್ನು ನಿನ್ನ ಪಾದಗಳಿಂದ ಅಳಿಸಿ ಪುನೀತಗೊಳಿಸು.

ಅಂಭೋರುಹಂ ಜನ್ಮಗೃಹಂ ಭವತ್ಯಾಃ
ವಕ್ಷಃ ಸ್ಥಲಂ ಭರ್ತೃಗೃಹಂ ಮುರಾರೇಃ
ಕಾರುಣ್ಯತಃ ಕಲ್ಪಯ ಪದ್ಮವಾಸೇ
ಲೀಲಾಗೃಹಂ ಮೇ ಹೃದಯಾರವಿಂದಮ್

ಅಮ್ಮಾ! ನಿನ್ನ ಜನ್ಮಸ್ಥಳ ಪದ್ಮ, ನೀ ಮೆಟ್ಟಿದ ಸ್ಥಳ ಶ್ರೀಮನ್ನಾರಾಯಣನ ವಕ್ಷಃಸ್ಥಳ, ಹಾಗೆಯೇ ನನ್ನ ಹೃದಯ ಪದ್ಮವನ್ನು ಸಹ ಕ್ರೀಡಾ ಗೃಹವನ್ನಾಗಿ ಮಾಡಿಕೋ ತಾಯಿ.

ಶ್ರೀ ಆದಿಶಂಕರಾಚಾರ್ಯರಿಂದ ರಚಿಸಲ್ಪಟ್ಟಿರುವ ಸ್ತೋತ್ರವೇ ಕನಕಧಾರ ಸ್ತೋತ್ರ. ಕನಕವೆಂದರೆ ಚಿನ್ನ, ಧರ ಎಂದರೆ ಹರಿವು. ಒಮ್ಮೆ ಶಂಕರಾಚಾರ್ಯರು ಒಂದು ಮನೆಯ ಬಳಿ ಬಂದು ಭಿಕ್ಷೆಯನ್ನು ಬೇಡಿದರು. ಆಕೆಯು ತನ್ನ ಬಳಿಯಿರುವ ಒಂದು ನೆಲ್ಲಿಕಾಯಿಯನ್ನು ನೀಡಿದಳು. ಆಕೆಯ ಭಕ್ತಿಗೆ ಮೆಚ್ಚಿ ಶಂಕರಚಾರ್ಯರು ಶ್ರೀ ಕನಕಧಾರ ಸ್ತೋತ್ರ ಪಠಿಸಿದರು ಆಗ ಮಹಾಲಕ್ಷ್ಮಿಯು ತನ್ನ ಅನುಗ್ರಹದಿಂದ ಕನಕ ವೃಷ್ಟಿಯನ್ನು ಸುರಿಸಿದರು. ಈ ಕನಕಧಾರ ಸ್ತೋತ್ರವನ್ನು ಪಠಿಸುವುದರಿಂದ ಎಲ್ಲರಿಗೂ ಸಕಲ ಸಂಪತ್ತು ಐಶ್ವರ್ಯ ವೃದ್ಧಿಸುತ್ತದೆ. ಈ ಅಕ್ಷಯ ತೃತೀಯ ಸಂದರ್ಭದಲ್ಲಿ ಕನಕಧಾರಸ್ತೋತ್ರವು ಸಪ್ತಗಿರಿ ಓದುಗರಿಗಾಗಿ....



# ಏಳು ಬೆಟ್ಟದ ಒಡೆಯನ ಸೋದರಿ
# ತಿರುಪತಿ ತಾತಯ್ಯಗುಂಟ ಗಂಗಮ್ಮ ಜಾತ್ರೆ


– ಮೂಲ : ಎ. ವಿಭೀಷಣ ಶರ್ಮ

ಅನುವಾದ : ಎಸ್. ವಸಂತ ಮಾಧವ


ಪುರಾಣ ಪ್ರಸಿದ್ಧಿಯಾದ, ಚಾರಿತ್ರಿಕ, ಪ್ರಸಿದ್ಧಿಯಾದ ತಿರುಪತಿಯಲ್ಲಿ ನಡೆಯುವ ಜಾತ್ರೆಗಳಲ್ಲಿ ತಾತಯ್ಯಗುಂಟ ಗಂಗಮ್ಮ ಜಾತ್ರೆಯೂ ಒಂದು. ಈ ವರ್ಷದಲ್ಲಿ, ಮೇ ತಿಂಗಳಲ್ಲಿ ಗಂಗಮ್ಮ ಜಾತ್ರೆಯೂ ಏಳು ದಿನಗಳವರೆಗೆ ನಡೆಯುತ್ತದೆ.

ಈ ಜಾತ್ರೆಯು ಪುರಾಣ ಪ್ರಸಿದ್ಧಿಯಾಗಲು ಮುಖ್ಯ ಕಾರಣವೆಂದರೆ ಗಂಗಮ್ಮ, ತಿರುಪತಿ ವೆಂಕಟೇಶ್ವರ ಸ್ವಾಮಿಯ ಸೋದರಿ. ಈ ಜಾತ್ರೆ ನಡೆಯುವ ಸಂದರ್ಭದಲ್ಲಿ ತಿರುಮಲೇಶನ ಆಲಯದಿಂದ ತಿರುಮಲೆ ತಿರುಪತಿ ದೇವಸ್ಥಾನದವರು ಶನಿವಾರದಂದು ಗಂಗಮ್ಮನಿಗೆ ತವರು ಮನೆಯ ಉಡುಗೊರೆಯಾಗಿ ಶೇಷ ವಸ್ತ್ರಗಳು, ಅರಿಶಿನ ಕುಂಕುಮ, ಬಳೆ, ಮೊರದ ಬಾಗಿನ ಮೊದಲಾದ ಮಂಗಳ ದ್ರವ್ಯಗಳನ್ನು ಆದರದಿಂದ ತಂದು ಅರ್ಪಿಸುತ್ತಾರೆ.

ಸಂಸ್ಕೃತದಲ್ಲಿ ಜಾತ ಎಂದರೆ ಹುಟ್ಟಿದ ಎಂದು ಅರ್ಥ. ತಾತಯ್ಯಗುಂಟ ಗಂಗಮ್ಮ ಜಾತ್ರೆಯು ಯಾವಾಗ ಪ್ರಾರಂಭವಾಯಿತು ಎಂದು ತಿಳಿಯಲು ಯಾವುದೇ ಚಾರಿತ್ರಿಕ ಆಧಾರಗಳು ಇಲ್ಲ. ಈ ಜಾತ್ರೆ ಎನ್ನುವ ಹುಟ್ಟಿದ ಹಬ್ಬ, ಮೊಟ್ಟ ಮೊದಲನೆಯದಾಗಿ ಗಂಗಮ್ಮ ತಾಯಿಗೇ ನಡೆದಿರುವುದು. ಇದು ಚರಿತ್ರಕಾರರು, ದೇಶಿಯ ಸಾಂಸ್ಕೃತಿಕ ವಿದ್ವಾಂಸರು ತಿಳಿಯಪಡಿಸಿರುವ ಮಹೋನ್ನತ ಸತ್ಯವೂ ಹೌದು.

ಯಾವುದೇ ವಿಗ್ರಹ ಆರಾಧನೆಗಾದರೂ ಒಂದು ವೃತ್ತಾಂತ ಇದ್ದೇ ಇರುತ್ತದೆ. ಹಾಗೆಯೇ, ತಾತಯ್ಯಗುಂಟ ಗಂಗಮ್ಮನ ಆವಿರ್ಭಾವಕ್ಕೆ ಪರಂಪರಾಗತವಾದ ಒಂದು ಕಥೆ ಇದೆ.

ಒಂದಾನೊಂದು ಕಾಲದಲ್ಲಿ ತಿರುಪತಿ ಒಂದು ಸಣ್ಣ ಗ್ರಾಮವಾಗಿತ್ತು. ಈ ಗ್ರಾಮವನ್ನು ಒಬ್ಬ ಪಾಳೇಗಾರನು ಆಳುತ್ತಿದ್ದನು. ತಾನು ಹೇಳುವುದೇ ನ್ಯಾಯವೆಂದು ತಾನು ಆಚರಿಸುವುದೇ ಧರ್ಮವೆಂದು ದುರಹಂಕಾರದಿಂದ ಬೀಗುತ್ತಿದ್ದನು. ಆ ಕಾಲದಲ್ಲಿ ಗ್ರಾಮಾಧಿಕಾರಿಯೇ ಸರ್ವಾಧಿಕಾರಿಯಾಗಿರುತ್ತಿದ್ದನು.

ಜನರು ಒಳಗೊಳಗೆ ಬಾಧೆ ಪಡುತ್ತಾ ಮನಸಾರೆ ಅಮ್ಮನನ್ನು ಪೂಜಿಸುತ್ತಿದ್ದರು. ಈ ಪ್ರಾರ್ಥನೆಯ ಫಲಿತವಾಗಿ ತಿರುಪತಿಯ ಸಮೀಪದಲ್ಲಿರುವ ಅವಿಲಾಲ ಗ್ರಾಮದಲ್ಲಿ ಅವತರಿಸಿದ ಆದಿಪರಾಶಕ್ತಿಯು ಪಾಳೇಗಾರನ ಪಾಪ ಕಾರ್ಯವನ್ನು ಅಂತ್ಯಗೊಳಿಸಬೇಕೆಂದು ಪಣತೊಟ್ಟಳು. ಪಾಳೇಗಾರನ ಮನೆಗೆ ಬಂದು ತನ್ನ ಶಕ್ತಿ ಸ್ವರೂಪವನ್ನು ಸಾಕ್ಷಾತ್ಕಾರಪಡಿಸಿದಳು. ಪಾಳೇಗಾರನು ಬೆದರಿ ಹೋದನು. ತನ್ನನ್ನು ರಕ್ಷಿಸಿ ಕೊಳ್ಳುವುದಕ್ಕಾಗಿ ತಕ್ಷಣ ಮನೆ ಬಿಟ್ಟು ಓಡಿ ಹೋದನು. ಹೀಗೆ ಓಡಿ ಹೋದವನನ್ನು ಹುಡುಕಿ ಸಂಹಾರ ಮಾಡ ಬೇಕೆಂದು ಶಕ್ತಿ ದೇವತೆಯು ಪಣತೊಟ್ಟಳು.

ಪಾಳೇಗಾರನು ಶಕ್ತಿಮಾತೆಯ ಕಣ್ಣಿಗೆ ಬೀಳದಂತೆ ಓಡುತ್ತಿದ್ದನು. ಆಗ ಶಕ್ತಿ ದೇವತೆಯು ಒಂದೇ ವೇಷದಲ್ಲಿ ಅಲ್ಲದೇ, ದಿನವೂ ಒಂದೊಂದು ವೇಷ ಧರಿಸುತ್ತಾ ಅವನನ್ನು ಹುಡುಕತೊಡಗಿದಳು. ಲೋಕದಲ್ಲಿ ಯಾರನ್ನೇ ಆಗಲಿ ನಿಂದಿಸಿದರೇ ತಿರುಗಿ ಬೀಳುತ್ತಾರೆ ಎಂದು ತಿಳಿದ ಶಕ್ತಿ ಮಾತೆ, ಆತ








ನನ್ನು ನಿಂದಿಸುತ್ತಾ ಹುಡುಕಲು ಹೊರಟಳು. ಹೀಗೆ ಏಳು ದಿನಗಳು ಕಳೆದವು. ಕೊನೆಗೆ ತಾತಯ್ಯಗುಂಟ ಹತ್ತಿರ ಪಾಳೇಗಾರನನ್ನು ಹಿಡಿದು ದಾರುಣವಾಗಿ ಹತ್ಯೆಗೈದಳು. ಹೀಗೆ ಅವನು ಹತನಾದದ್ದು ತಮಿಳು ಮಾಸವಾದ ಚಿತ್ತಿರ್ ತಿಂಗಳಲ್ಲಿ.

ಹೀಗೆ ಗ್ರಾಮಕ್ಕೆ ಅಂಟಿದ್ದ ಪೀಡೆಯನ್ನು ತೊಲಗಿಸಿದ ತಾಯಿಯನ್ನು ಗ್ರಾಮಸ್ಥರು, ''ಅಮ್ಮ ಇಲ್ಲೇ ನೆಲೆಸಿರಿ ಸದಾ ನಮ್ಮನ್ನು ಕಾಪಾಡಿ'' ಎಂದು ಪ್ರಾರ್ಥಿಸಲು ಆ ಪರಾಶಕ್ತಿಯು ಗಂಗಮ್ಮಳಾಗಿ ತಾತಯ್ಯಗುಂಟದ ಸಮೀಪ ನೆಲೆಸಿದಳು.

ಆದ್ದರಿಂದ ಈ ಸ್ಥಳವು ತಾತಯ್ಯಗುಂಟ ಗಂಗಮ್ಮ ಎಂದು ಪ್ರಸಿದ್ಧಿಯಾಗಿದೆ. ಈ ವಿರೋಚಿತ ಘಟನೆಯ ಸಾಕ್ಷಿಯಾಗಿ ತಿರುಪತಿಯಲ್ಲಿ ಏಳು ದಿನಗಳಂದು ವಿವಿಧ ವೇಷಗಳನ್ನು ಧರಿಸುವ ಗ್ರಾಮೀಣ ಸಂಸ್ಕೃತಿಯನ್ನು ಮೀರಿಸುವಂತೆ ಜಾತ್ರೆಗಳು ಜರಗುತ್ತವೆ.

ತಿರುಪತಿಯಲ್ಲಿ ನಡೆಯುವ ಗಂಗಮ್ಮ ಜಾತ್ರೆಯಂತಹ ಜಾತ್ರೆಯೂ ಯಾವುದೇ ದೇಶದಲ್ಲಿ ಎಲ್ಲಿಯೂ ಜರಗುವುದಿಲ್ಲ. ಪ್ರತಿ ದಿನಕ್ಕೊಂದು ವೇಷ, ಸಂಭ್ರಮದಿಂದ ಬೀದಿಗಳಲ್ಲಿ ತಿರುಗಾಟ ಯಾರಿಗಾದರೂ ಅದ್ಭುತವೆನಿಸುತ್ತದೆ. ಆದರೆ ಪ್ರತಿ ವೇಷಕ್ಕೂ ವಿಶೇಷ ಅಂತರಾರ್ಥಗಳಿವೆ.

### ಮೊದಲ ದಿನ ಬೈರಾಗಿವೇಷ

ಮಾನವರು ಧರ್ಮ, ಅರ್ಥ,ಕಾಮಗಳನ್ನೇ ಪುರುಷಾರ್ಥವೆಂದು ಭಾವಿಸಿದ್ದಾರೆ. ಆದರೆ ಇದು ಸಾಲದು, ಮೋಕ್ಷ ಒಂದಿದೆ. ಮೋಕ್ಷ ಸಿದ್ಧಿಸಬೇಕೆಂದರೆ ಮನುಷ್ಯನು ವೈರಾಗ್ಯವನ್ನು ಹೊಂದಬೇಕು. ಅದಕ್ಕಾಗಿಯೇ ಬೈರಾಗಿವೇಷ. ವಿರಾಗಿಯು ಸಂಸಾರದಲ್ಲಿ ನೀರಿನ ಮೇಲಿನ ಕಮಲದಂತೆ ಇರಬೇಕೆಂಬ ಸಂದೇಶವನ್ನು ನೀಡುತ್ತದೆ.

### ಎರಡನೇ ದಿನ ಬಂಡೆಯ ವೇಷ

ಬಂಡೆ ಕದಲುವುದಿಲ್ಲ,ಎಷ್ಟೇ ಕಷ್ಟ ಬಂದರೂ, ನಿಂದೆ ಬಂದರೂ ಅವುಗಳು ಶರೀರಕ್ಕೆ ಮಾತ್ರ, ಮನಸ್ಸಿಗೆ ಅಲ್ಲ ಎಂದು ಭಾವಿಸಿ ಸಹಿಷ್ಣುತೆಯನ್ನು ಹೊಂದಬೇಕು. ಇದೇ ಈ ವೇಷದ ಸಂದೇಶ.

### ಮೂರನೆಯ ದಿನ ದಲಿತರ ವೇಷ.


ಈ ವೇಷವನ್ನು ನೇಕಾರರು ಸ್ತ್ರೀ ವೇಷ ಧರಿಸಿ ತಮ್ಮ ಭಕ್ತಿಯನ್ನು ಪ್ರದರ್ಶಿಸುತ್ತಾರೆ. ಅಗಸರು ಪುರುಷ ವೇಷಧಾರಣೆ ಮಾಡುತ್ತಾರೆ. ದಲಿತರು ವೃತ್ತಿ ಧರ್ಮದಿಂದ ತಮ್ಮ ಸೇವೆಯನ್ನು ಮಾಡಿದರೂ ಅವರದು ಮಾನವ ಸೇವೆ.ಈ ಸೇವಾಭಾವನೆಯನ್ನು ಎಲ್ಲರೂ ಅಳವಡಿಸಿಕೊಳ್ಳಬೇಕೆಂಬ ಸಂದೇಶವಿದೆ.

### ನಾಲ್ಕನೇ ದಿನದಂದು ದೊರೆಯವೇಷ

ಈ ವೇಷವನ್ನು ಕೂಡ ನೇಕಾರರು ಮತ್ತು ಅಗಸರು ವಂಶಪಾರಂಪರ್ಯವಾಗಿ ಪ್ರದರ್ಶಿಸುತ್ತಾ ಬಂದಿದ್ದಾರೆ. ನೇಕಾರರು ದೊರೆಯ ವೇಷವನ್ನು ಧರಿಸಿದರೆ ಅಗಸರು ಮಂತ್ರಿ ವೇಷವನ್ನು ಧರಿಸುವುದು ವಾಡಿಕೆ.

### ಐದನೇ ದಿನ ಕೊಡಗಳನ್ನು ಹೊರುವ ವೇಷ.

ನೇಕಾರರು ಜಾತ್ರೆಯಲ್ಲಿ ಕೊಡವನ್ನು ನೆತ್ತಿಯ ಮೇಲೆ ಹೊರುವುದು ವಾಡಿಕೆ. ಕೊಡ ಶರೀರದ ಸಂಕೇತ. ಕೊಡಕ್ಕೆ ಸುತ್ತಿದ ಮಲ್ಲಿಗೆ ಹೂಗಳು ಸದ್ಭಾವನೆಗಳ ಗುರುತಾಗಿವೆ. ಹಸಿರು ಸೀರೆಯು ಕಲ್ಯಾಣ ಪ್ರದಾಯಕ ಹಾಗೂ ವಾದ್ಯ ಘೋಷಗಳು ಮಂಗಳ ಧ್ವನಿಯ ಸಂಕೇತವಾಗಿದೆ.



**ಆರನೇ ದಿನ ಮಾತಂಗಿವೇಷ**

ಮಾತಂಗಿಯು ಕಣ್ಣಿನ ದೇವತೆ ಸಹಸ್ರಾಕ್ಷನಾದ ವಿಷ್ಣುವಿನಂತೆ ಗಂಗಮ್ಮ ಕೂಡ ವಿಶ್ವ ರೂಪಿಣಿ ಎನ್ನುವ ಭಾವನೆ.

**ಏಳನೇ ದಿನ ಆಯುಧಗಳ ವೇಷ**

ಗೋಪುರದ ಆಕಾರದಲ್ಲಿರುವ ಆಯುಧಗಳನ್ನು ಹೊರುವುದು. ಇದು ಅದ್ವೈತ ಭಾವದ ಸಂಕೇತವು ಹೌದು. ಕಾಮಕ್ರೋಧಗಳು ತನ್ನಲ್ಲಿ ಪ್ರವೇಶಿಸದಂತೆ ರಕ್ಷಿಸಬೇಕೆಂಬ ಅಂತರಾರ್ಥವಿದೆ.

ಇವುಗಳೊಂದಿಗೆ ಮಂಗಳವಾರದಂದು ಸುಮಂಗಳೆಯರ ವೇಷ. ಈ ವೇಷವನ್ನು ನೇಕಾರರು ಪ್ರದರ್ಶಿಸುತ್ತಾರೆ.

ಸಣ್ಣಗಂಗಮ್ಮನ ನಂತರ ದೊಡ್ಡಗಂಗಮ್ಮ ರೂಪದಲ್ಲಿ ಮೀಸೆ ತಿರುಗಿಸುವ ಮೂಲಕ ಜಾತ್ರೆಗೆ ಮಂಗಳ ಹಾಡಲಾಗುತ್ತದೆ. ಇಂತಹ ಗಂಗ ಮ್ಮನ ಆಕೃತಿ ನಿರ್ಮಾಣ ಮಾಡುವಲ್ಲಿ ಆಚಾರ್ಯರು, ಅಗಸರು, ಕುಂಬಾರರು, ದಲಿತರು ಸಹಕರಿಸುತ್ತಾರೆ. ಕಮ್ಮಾರರು, ಕ್ಷೌರಿಕರು, ಗೊಲ್ಲರು ಕೂಡಾ ತಮ್ಮ ಸೇವೆಯನ್ನು ನಿರ್ವಹಿಸುತ್ತಾರೆ. ನೇಕಾರ ಕುಲಸ್ಥರು ಅಮ್ಮನವರ ವಿಶ್ವ ರೂಪವನ್ನು ಭಿನ್ನ ಮಾಡಿದ ನಂತರ ಆ ಮಣ್ಣನ್ನು ಭಕ್ತರು ಎಷ್ಟೋ ಭಕ್ತಿ ಶ್ರದ್ಧೆಗಳಿಂದ ಸ್ವೀಕರಿಸುತ್ತಾರೆ. ಆ ಮಣ್ಣನ್ನು ತಮ್ಮ ತಮ್ಮ ಮನೆಗೆ ತೆಗೆದು ಕೊಂಡು ಹೋಗಿ ತಮ್ಮಲ್ಲಿರುವ ಅನಾರೋಗ್ಯ ನಿವಾರಣೆಗಾಗಿ, ಶ್ರೇಯೋಭಿವೃದ್ಧಿಗಾಗಿ, ಎಷ್ಟೋ ಸಮಸ್ಯೆಗಳ ನಿವಾರಣೆಗಾಗಿ ಅದನ್ನು ಸಂರಕ್ಷಿಸಿಟ್ಟು ಕೊಳ್ಳುತ್ತಾರೆ. ಈ ವಿಶೇಷ ಜಾತ್ರೆ ದಿನಗಳಲ್ಲಿ ಜನರು ತಮ್ಮ ಮನೆಗಳಲ್ಲಿ ವಿಧ ವಿಧವಾದ ಭಕ್ಷ, ಭೋಜ್ಯಗಳನ್ನು ಮಾಡುವುದು ವಾಡಿಕೆ ಆಗಿದೆ. ಆದಿ ಶಂಕರರ ಪ್ರಕಾರ ಗ್ರಾಮದೇವತೆಗಳೆಲ್ಲರೂ ಕಾಳಿಮಾತಾ ಸ್ವರೂಪರೇ.

ಮಹಾಭಾರತದಲ್ಲಿ ದುರ್ಯೋಧನನು ತನ್ನವರೆಲ್ಲರನ್ನು ಕಳೆದು ಕೊಂಡ ನಂತರ ಪ್ರಾಣಭೀತಿಯಿಂದ ಕೊನೆಯಲ್ಲಿ ನದಿಯಲ್ಲಿ ಮುಳುಗಿ ಅವಿತುಕೊಂಡನು. ಅವನನ್ನು ಮೇಲೆ ಕರೆಯುವ ಉಪಾಯ ತಿಳಿಯದೆ ಕೊನೆಗೆ ಆತನ ಪೌರುಷವನ್ನು ಅವಹೇಳನ ವಿವರಣೆ. ಈ ಅವಮಾನವನ್ನು ಸಹಿಸದ ದುರ್ಯೋಧನನು ನದಿಯೊಳಗಿಂದ ಎದ್ದು ಮೇಲೆ ಬಂದನು. ಭೀಮನ ಕೈಯಿಂದ ದುರ್ಗತಿ ಹೊಂದಿದನು. ಇದು ವಿರೋಧಿಯ ಮೇಲೆ ಪ್ರಯೋಗಿಸುವ ತಿರುಗುಬಾಣ. ತನ್ನ ಕಣ್ಣು ತಪ್ಪಿಸಿಕೊಂಡು ತಿರುಗುತ್ತಿದ್ದ ಪಾಳೇಗಾರನನ್ನು ಹೊರಗೆ ಎಳೆಯಲು ಶಕ್ತಿ ಮಾತೆಯು ಮಾಡಿದ ಉಪಾಯ. ಜಾತ್ರೆಯಲ್ಲಿನ ವೇಷಧಾರಿಗಳು ಏಕೆ ಕಿರುಚುತ್ತಾರೆ ಎನ್ನುವುದಕ್ಕೆ ಇದೇ ಸರಿಯಾದ ಸಮಾಧಾನ.

ಏನೇ ಇದ್ದರೂ ಗಂಗಮ್ಮ ತಿರುಪತಿಯ ಗ್ರಾಮದ ಗ್ರಾಮದೇವತೆ. ಈ ದೇವಸ್ಥಾನವು ಕಾಲಾನುಕ್ರಮದಲ್ಲಿ ಅಭಿವೃದ್ಧಿ ಹೊಂದುತ್ತಿದೆ. ಇದರ ಅಂಗವಾಗಿ ಭಕ್ತರ ಕೋರಿಕೆಯ ಮೇರೆಗೆ ತಾತಯ್ಯಗುಂಟ ಗಂಗಮ್ಮ ದೇವಸ್ಥಾನದಲ್ಲಿ ಯಂತ್ರವಿಗ್ರಹ, ಶಿಖರ ಕಲಶ ಸ್ಥಿರ ಪ್ರತಿಷ್ಠಾ ಮಹಾ



ಕುಂಭಾಭಿಷೇಕ ಮಹೋತ್ಸವಗಳನ್ನು 01-05-2023 ರಿಂದ 05 - 05-2023 ರ ವರೆಗೆ ನಿರ್ವಹಿಸಲಾಯಿತು. ಇದಕ್ಕೆ ತಿರುಮಲೇಶನ ಸಹಕಾರ ಬೆಟ್ಟದಷ್ಟು. ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀಶ್ರೀಶ್ರೀ ಕಂಚಿ ಕಾಮಕೋಟಿ ಪೀಠಾಧಿಪತಿಗಳು ಹಾಗೂ ಜಗದ್ಗುರುಗಳಾದ ಶ್ರೀ ಶ್ರೀ ಶ್ರೀ ಶಂಕರ ವಿಜಯೇಂದ್ರ ಸರಸ್ವತಿ ಸ್ವಾಮಿಯವರ ಅಮೃತ ಹಸ್ತದಿಂದ ಈ ಮಹಾಕುಂಭಾಭಿಷೇಕ ಪರಿಪೂರ್ಣವಾಯಿತು. ಆ ಸಮಯದಲ್ಲಿ ಶ್ರೀ ಕೃಷ್ಣನ ಸೋದರಿಯಾದ ಯೋಗಮಾಯೆಯೇ ಈ ಗಂಗಮ್ಮ ಎಂದು ಅವಧೂತ ದತ್ತ ಪೀಠಾಧಿಪತಿ ಗಣಪತಿ ಸಚ್ಚಿದಾನಂದ ಸ್ವಾಮಿ ತಿಳಿಸಿದರು. ವಿಶಾಖ ಶ್ರೀಶಾರದಾ ಪೀಠಾಧಿಪತಿ ಸ್ವರೂಪಾನಂದೇಂದ್ರ ಸರಸ್ವತಿ ಮಹಾ ಸ್ವಾಮಿಯವರು- ಗಂಗಮ್ಮ ತಾಯಿ ಶಾಂತ ಸ್ವರೂಪಿಣಿ ಎಂದು ಕೊಂಡಾಡಿದರು.

ಗ್ರಾಮ ಸಂರಕ್ಷಣೆಗಾಗಿ ಸಿಡುಬಿನಂತಹ ಮಾರಕ ಕಾಯಿಲೆಗಳ ನಿವಾರಣೆಗಾಗಿ, ದುಷ್ಟ ಶಕ್ತಿಗಳನ್ನು ತಡೆಯಲು, ಕ್ರಿಮಿಕೀಟಗಳಿಂದ ಬರುವ ವ್ಯಾಧಿಗಳನ್ನು ನಿಯಂತ್ರಿಸಲು, ಸಮೃದ್ಧ ಮಳೆಬೆಳೆಯಿಂದ ಸಸ್ಯ ಶ್ಯಾಮಲವಾಗಿರಲು, ಬೆಳೆಗಳಿಗೆ ರೋಗಗಳು ತಗುಲದಂತೆ ನೋಡಿಕೊಳ್ಳಲು ಹೀಗೆ ಅನೇಕ ಶುಭ ಫಲಿತಗಳಿಗಾಗಿ ಈ ಗಂಗಮ್ಮ ಜಾತ್ರೆ ಮಾಡುವುದು ತಲತಲಾಂತರಗಳಿಂದ ಬಂದಿರುವ ಸಂಪ್ರದಾಯವಾಗಿದೆ.



# ಆರೋಗ್ಯ ಸಂರಕ್ಷಣೆಗೆ ತೇಜಪತ್ರೆ

- ಮೂಲ : ಡಾ॥ ಮಧುಸೂದನ ಶರ್ಮ
ಅನುವಾದ : ಡಿ.ಎಸ್. ಬದ್ರಿನಾಥ್

ಸಂಸ್ಕೃತದಲ್ಲಿ 'ತಮಾಲಪತ್ರೆ' ಎಂದು ಕರೆಯಲ್ಪಡುವ ಈ ಲವಂಗದೆಲೆಯನ್ನು ಆಂಗ್ಲಭಾಷೆಯಲ್ಲಿ 'ಇಂಡಿಯನ್ ಬೇ ಲೀಫ್' ಎಂದು ಪ್ರಾಂತೀಯವಾಗಿ ತೇಜ್‌ಪತ್ತ ಎಂದು ವ್ಯವಹರಿಸುವುದುಂಟು. 'ಲಾರೇಸಿ' ಎಂಬ ವೃಕ್ಷ ಕುಟುಂಬಕ್ಕೆ ಸೇರಿದ ತೇಜ್‌ಪತ್ರೆಯ ಶಾಸ್ತ್ರೀಯ ನಾಮಧೇಯ 'ಸಿನಾಮೊಮ್ ತಮಲಾ'. ತೇಜಪತ್ರೆ ಮತ್ತು ಅದರ ಚೂರ್ಣ ತುಂಬಾ ಸುವಾಸನೆ ಭರಿತವಾಗಿರುತ್ತದೆ.

ವರ್ಷವೆಲ್ಲಾ ಲಭ್ಯವಾಗುವ ಒಣಗಿದ ತೇಜಪತ್ರೆಯನ್ನು ನಾವು ಎದುರಿಸುವ ಯಾವುದೇ ಅನಾರೋಗ್ಯ ಸಮಸ್ಯೆಗೆ ಹೇಗೆ ಸದ್ವಿನಿಯೋಗ ಪಡಿಸಿಕೊಳ್ಳಬಹುದೆಂದು ಪ್ರಸ್ತುತ ತಿಳಿದುಕೊಳ್ಳೋಣ.

### ಪೈತ್ಯಕ್ಕೆ:

ತೇಜಪತ್ರೆ, ಪೋತದ ಬೀಜ, ಏಲಕ್ಕಿ, ನೆಲ್ಲಿಕಾಯಿ, ತ್ರಿಕಟು ಚೂರ್ಣ, ಕುಟ್ಟಿದ ಚೆಕ್ಕೆಯ ಪುಡಿ, ಒಂದೊಂದನ್ನು 10 ಗ್ರಾಂ. ಸ್ಪಟಿಕಬೆಲ್ಲ ಪುಡಿ 120 ಗ್ರಾಂ ಕಲಿಸಿಟ್ಟುಕೊಂಡು, ದಿನವೂ 2 ಬಾರಿ ಬಾರಿಯೊಂದಕ್ಕೆ ಅರ್ಧ ಟೀ ಸ್ಪೂನ್ ಪುಡಿಯನ್ನು 100 ಮೀ.ಲೀ. ನೀರಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ ತಲೆಸುತ್ತುವಿಕೆ, ಕಣ್ಣು ಕತ್ತಲಾಗುವುದು.

ಬಾಯಲ್ಲಿ ನೀರೂರುವುದು, ತಲೆ ನೋವು, ವಾಂತಿ ಬಂದಂತಾಗುವುದು ಮೊದಲಾದ ಪೈತ್ಯ ವಿಕಾರಗಳು ಕಡಿಮೆಯಾಗುತ್ತವೆ.

### ಹೆಚ್ಚಿನ ತೂಕ ತಗ್ಗಲು :

400 ಮಿ.ಲೀ. ನೀರಿನಲ್ಲಿ 30 ತೇಜಪತ್ರೆಗಳನ್ನು ಕತ್ತರಿಸಿ ಹಾಕಿ 100 ಮಿ.ಲೀ.ನೀರು ಉಳಿಯುವಂತೆ ಮರಳಿಸಿ, ಕೆಳಗಿಳಿಸಿ ಬಿಸಿಯಾರಿದ ನಂತರ ಶೋಧಿಸಿಟ್ಟುಕೊಂಡು ಎರಡು ಬಾರಿ, ಬಾರಿಯೊಂದಕ್ಕೆ 50 ಮೀ.ಲೀ. ಔಷಧಿಯನ್ನು ಸೇವಿಸುತ್ತಿದ್ದರೆ ಶರೀರದಲ್ಲಿ ಅಧಿಕವಾಗಿ ಶೇಖರಣೆಗೊಂಡ ಕೊಬ್ಬು ಕ್ರಮೇಣ ಕರಗಿ ಹೋಗುತ್ತದೆ.

### ಕೊಲೆಸ್ಟ್ರಾಲ್‌ತಗ್ಗಲು :

ದಿನಂ ಪ್ರತಿ ಒಂದು ಬಾರಿ 200 ಮೀ.ಲೀ. ನೀರಿನಲ್ಲಿ 15 ತೇಜಪತ್ರೆ ಎಲೆಗಳನ್ನು ಕತ್ತರಿಸಿ ಹಾಕಿ 50 ಮಿ.ಲೀ. ನೀರು ಉಳಿಯುವಂತೆ ಮರಳಿಸಿ ಕೆಳಗಿಳಿಸಿ ಉಗುರುಬೆಚ್ಚಗಿನ ನೀರಿರುವಾಗಲೇ ಶೋಧಿಸಿ 2 ಚಿಟಿಕೆ ದಾಲ್ಚಿನ್ನಿ ಚೆಕ್ಕೆಯ ಪುಡಿ ಹಾಕಿ ಕಲಿಸಿ ಕುಡಿಯಬೇಕು. ಹೀಗೆ ಉಪಯೋಗಿಸುವುದರಿಂದ ಅಲ್ಪ ಸ್ಥಾಯಿಯಲ್ಲಿದ್ದ ಮಧುಮೇಹವೂ ಸಹ ನಿಯಂತ್ರಣಕ್ಕೆ ಬರುತ್ತದೆ.

### ದಂತ, ವಸುಡುಗಳ ವ್ಯಾಧಿಗಳಿಗೆ :

ತೇಜಪತ್ರೆಯ ಪುಡಿ, ಒಣಗಿದ ಕಮಲದ ತೊಗಟೆಯ ಪುಡಿ ಸಮಾನವಾಗಿ ಕಲಿಸಿಟ್ಟುಕೊಂಡು ದಿನವೂ ಒಂದೆರಡು ಬಾರಿ ದಂತಧಾವನ ಚೂರ್ಣವನ್ನಾಗಿ ಬಳಸುತ್ತಿದ್ದರೆ, ಹಲ್ಲು - ವಸಡುಗಳ ವ್ಯಾಧಿಗಳು ಕಡಿಮೆಯಾಗಿ ಹಲ್ಲು - ವಸುಡುಗಳ ಧೃಡತೆಯನ್ನು ಕೈಗೂಡಿಸುತ್ತದೆ. ರುಚಿಹೀನತೆಯು ಶಮನಗೊಂಡು ಬಾಯಿ ದುರ್ವಾಸನೆಯು ಸಹಾ ಕಡಿಮೆಯಾಗುತ್ತದೆ.

### ಶರೀರದ ದುರ್ವಾಸನೆ ಹೋಗಲಾಡಿಸಲು :

ತೇಜಪತ್ರೆ, ಲಾವಂಚ, ಜಟಾಮಾಂಸಿ ಶ್ರೀಗಂಧ, ಪುಡಿಗಳನ್ನು ಒಂದೊಂದು 100ಗ್ರಾಂ ತಕ್ಕಷ್ಟು ಕಲಿಸಿಟ್ಟುಕೊಂಡು ದಿನವೂ ಒಂದು ಬಾರಿ ಬೇಕಾಗುವಷ್ಟು ಪುಡಿಯಲ್ಲಿ ನೀರು ಹಾಕಿ ಕಲಿಸಿ, ಪೇಸ್ಟಿನಂತೆ ಮಾಡಿ ಶರೀರಕ್ಕೆ ಹಚ್ಚಿ,ಆರಿದ ನಂತರ ಸ್ನಾನ ಮಾಡುತ್ತಿದ್ದರೆ ಅತಿ ಶೀಘ್ರದಲ್ಲಿ ಫಲಿತಾಂಶ ಹೊರಬರುತ್ತದೆ.

### ದೇಹದ ನವೆ - ದದ್ದುಗಳಿಗೆ :

ತೇಜಪತ್ರೆ, ಏಲಕ್ಕಿ, ಮೋತೆ, ಜಟಾಮಾಂಸಿ, ಗಂಧದ ಚಕ್ಕೆ, ನಾದ ಕೇಸರಿಗಳ ಚೂರ್ಣಗಳನ್ನು ಒಂದೊಂದು 25 ಗ್ರಾಂ ಹೇಳಿದಂತೆ ಕಲಿಸಿಟ್ಟುಕೊಂಡು ವಾರಕ್ಕೆ 2,3 ಬಾರಿ ತಕ್ಕಷ್ಟು

ಪುಡಿಯಲ್ಲಿ ತಕ್ಕಷ್ಟು ನೀರು ಹಾಕಿ, ಪೇಸ್ಟಿನಂತೆ ಮಾಡಿ ದೇಹಕ್ಕೆ ಮಸಾಜು ಮಾಡಿ, ಒಂದು ತಾಸು ಬಿಟ್ಟು ಸ್ನಾನ ಮಾಡಿದರೆ ಒಳ್ಳೆಯ ಫಲಿತಾಂಶ ಉಂಟಾಗುತ್ತದೆ. ಹೀಗೆ ಬಳಸುವುದರಿಂದ ಶರೀರದುರಿ, ತುರಿಕೆಗಳು ಸಹಾ ಕಡಿಮೆಯಾಗುತ್ತದೆ.

**ಬಾಯಿದುರ್ವಾಸನೆ ತಗ್ಗಲು :**

ತೇಜಪತ್ರೆ, ಜಾಪತ್ರೆ, ಲವಂಗ, ಮೆಂತ್ಯದ ಚೂರ್ಣ ಒಂದೊಂದನ್ನು 10 ಗ್ರಾಂ ಹೇಳಿದಂತೆ ಕಲಿಸಿಟ್ಟುಕೊಂಡು ದಿನವೂ 2-3 ಬಾರಿ 3 ಅಥವಾ 4ಚಿಟಿಕೆಗಳಷ್ಟು ಬಾಯಲ್ಲಿ ಚಪ್ಪರಿಸಿ ತಿನ್ನುವುದರಿಂದ ಶೀಘ್ರದಲ್ಲಿ ಗುಣಮುಖರಾಗುವಿರಿ.

**ಜೀರ್ಣಾಂಗಗಳು ಸರಿಯಾಗಿ ಕೆಲಸ ಮಾಡಲು :**

300 ಮಿ.ಲೀ.ನೀರಿನಲ್ಲಿ 4-5 ಎಲೆಗಳನ್ನು ಕತ್ತರಿಸಿ ಹಾಕಿ, ಗುಲಗಂಜಿಯಷ್ಟು ಶುಂಠಿ ತುಂಡನ್ನು ಕುಟ್ಟಿಹಾಕಿ 100 ಮಿ.ಲೀ. ನೀರು ಉಳಿಯುವಂತೆ ಮರಳಿಸಿ, ಇಳಿಸಿ ಬಿಸಿಯಾರಿದ ನಂತರ ಶೋಧಿಸಿ ಎರಡೂ ಬಾರಿ, ಬಾರಿಯೊಂದಕ್ಕೆ 50.ಮಿ.ಲೀ. ಕಷಾಯದಲ್ಲಿ ಒಂದು ಟೀ ಸ್ಪೂನ್ ಜೇನು ಕಲಿಸಿ ಸೇವಿಸುತ್ತಿದ್ದರೆ ಹಸಿವು ವೃದ್ಧಿಸಿ ಜೀರ್ಣಶಕ್ತಿ ಪ್ರಚೋದನೆಗೊಳ್ಳುತ್ತದೆ.

**ಬಿಳಿಸೆರಗಿಗೆ:**

200 ಮಿ.ಲೀ. ಪರಿಶುಭ್ರವಾದ ನೀರಿನಲ್ಲಿ ಎರಡು ತೇಜಪತ್ರೆ ಎಲೆಗಳನ್ನು ಕತ್ತರಿಸಿ ಹಾಕಿ 100 ಮಿ.ಲೀ. ನೀರು ಉಳಿಯುವಂತೆ ಮರಳಿಸಿ, ಇಳಿಸಿ, ಬಿಸಿಯಾರಿದ ಬಳಿಕ ಶೋಧಿಸಿ ಆ ನೀರಿನಿಂದ ಜನನೇಂದ್ರಿಯ ಭಾಗಗಳನ್ನು ಶುಭ್ರ ಮಾಡಿಕೊಂಡರೆ ಸ್ತ್ರೀಯರಲ್ಲಿ ಬೆಳಸೆರಗು, ಜನನೇಂದ್ರಿಯಗಳಿಗೆ ಬರುವ ಇತರೆ ಸೋಂಕುಗಳು ನಿವಾರಣೆಗೊಳ್ಳುತ್ತವೆ.

**ಒಣ ಕೆಮ್ಮು ಶಮನಕ್ಕೆ:**

ತೇಜಪತ್ರೆ, ಅತಿಮಧುರ, ಒಣಗಿದ ಖರ್ಜೂರದ ಬೀಜಗಳು, ಏಲಕ್ಕಿ, ಹಿಪ್ಲೆ, ಸ್ಪಟಿಕ ಬೆಲ್ಲದ ಚೂರ್ಣಗಳನ್ನು ಒಂದೊಂದಕ್ಕೆ 10 ಗ್ರಾಂ ಹೇಳಿದಂತೆ ಕಲಿಸಿಟ್ಟುಕೊಂಡು ಮೂರು ಹೊತ್ತು ಬಾರಿಯೊಂದಕ್ಕೆ ಒಂದು ಗ್ರಾಂ ಪುಡಿಯನ್ನು ಚಪ್ಪರಿಸುತ್ತಿದ್ದರೆ ತ್ವರಿತ ಉಪಶಮನವುಂಟಾಗುತ್ತದೆ.

**ಷುಗರ್ (ಮಧುಮೇಹ) ನಿಯಂತ್ರಣಕ್ಕೆ:**

ತೇಜಪತ್ರೆ ಚೂರ್ಣ 50 ಗ್ರಾಂ, ಮೆಂತೆ ಕಾಳುಗಳನ್ನು ಕುಟ್ಟಿ ಮಾಡಿದ ಪುಡಿ 50 ಗ್ರಾಂ, ನೇರಳೆ ಹಣ್ಣಿನ ಬೀಜದ ಪುಡಿ 100 ಗ್ರಾಂ, ಬಿಲ್ವತ್ರೆ ಎಲೆಗಳ ಚೂರ್ಣ 100 ಗ್ರಾಂ ಕಲಿಸಿಟ್ಟುಕೊಂಡು ದಿನವೂ ಎರಡು ಬಾರಿ ಭೋಜನದ ನಂತರ ಬಾರಿಯೊಂದಕ್ಕೆ ಒಂದು ಟೀ ಸ್ಪೂನ್ ಔಷಧಿಯನ್ನು 100 ಮಿ.ಲೀ. ನೀರಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ ಮಧುಮೇಹ ವ್ಯಾಧಿಯು ನಿಯಂತ್ರಣದಲ್ಲಿರುತ್ತದೆ.

**ಗಮನಕ್ಕೆ:** ಮೇಲೆ ಹೇಳಿರುವ ಗಿಡ ಮೂಲಿಕೆಗಳು ಔಷಧಾಲಯ ತಯಾರಿಕಾ ಕೇಂದ್ರಗಳಲ್ಲಿ, ಆಯುರ್ವೇದ ಔಷಧಾಲಯಗಳಲ್ಲಿ ಲಭಿಸುತ್ತವೆ.



## ರಸಪ್ರಶ್ನೆಗಳು

## ಮಾರ್ಚ್ 2024 ತಿಂಗಳ ರಸಪ್ರಶ್ನೆಯ ಉತ್ತರಗಳು

1. ರುದ್ರ
2. ವಿಶಿಷ್ಟ ರೂಪ
3. ಮಕರ ಸಂಕ್ರಾತಿಯ ದಿನ
4. ನಾರಾಯಣ ಸ್ವಾಮಿ ದೇವಾಲಯ
5. ಹೋಲಿ ಹುಣ್ಣಿಮೆ
6. ಮಹಾಶಿವರಾತ್ರಿ
7. ಉಪನಯನ
8. ಪಂಚಾಯುಧ ತೀರ್ಥಗಳು
9. ಉಪ ಎಂದರೆ ಹತ್ತಿರ ವಾಸ ಎಂದರೆ ಇರುವುದು
10. ಯಕ್ಷರ
11. ಅಶ್ವಮೇಧಯಾಗ
12. ಪಂಚಾಯುಧ ತೀರ್ಥವಿದೆ
13. ವೇಂಗೈ
14. ಎಂಟನೇ ವಯಸ್ಸಿನಲ್ಲಿ
15. ಲಿಂಗ ರೂಪದಲ್ಲಿ

# ನಮ್ಮಾಳ್ವಾರ್ ವೈಭವ

ಪಾಂಡ್ಯ ದೇಶದ ತಾಮ್ರ ಪರ್ಣೀ ತೀರದಲ್ಲಿ 'ತಿರುನಹರಿ' ಅಥವಾ 'ತಿರುಕ್ಕುರು ಹೂರ್' ಎಂಬ ಊರಿನಲ್ಲಿ ವೆಲ್ಲಾಳ ವರ್ಣದಲ್ಲಿ ನಮ್ಮಾಳ್ವಾರ್ ಅವರು ಭಗವಂತನ ಕೌಸ್ತುಭಾಂಶ ಸಂಭೂತರಾಗಿ ಕಲಿಯುಗದಾದಿ ಪ್ರಮಾಥಿ ಸಂವತ್ಸರ,ವೃಷಭಮಾಸ, ಶುಕ್ರವಾರ, ವಿಶಾಖ ನಕ್ಷತ್ರದಲ್ಲಿ ಅವತರಿಸಿದರು. ಇವರ ತಾಯಿ ಉಡೈನಂಗೈಯಾರ್, ತಂದೆ ವೆಳ್ಳಾಳರಕಾರಿಯಾರ್, ಹುಟ್ಟಿದ ಶಿಶು ಅಳಲಿಲ್ಲ. ಹಾಲು ಕುಡಿಯಲಿಲ್ಲ, ಕಣ್ಣು ಬಿಡಲಿಲ್ಲ. ಆದರೂ ಮಗು ಬದುಕಿತ್ತು. ಹುಟ್ಟಿದ ಕೂಡಲೇ ಎಲ್ಲರನ್ನೂ ಸ್ಪರ್ಶಿಸಿ ಅಜ್ಞಾನಕ್ಕೊಳಪಡಿಸುವ 'ಶಠ' ಎಂಬ ವಾಯುವನ್ನು ನಮ್ಮಾಳ್ವಾರ್ ಅವರು ಹುಂಕಾರದಿಂದ ಓಡಿಸಿ 'ಶಠಕೋಪ' ರೆಂದು ಪ್ರಸಿದ್ಧರಾದರು. ಇವರಿಗೆ 'ಮಾರನ್' ಎಂಬ ಹೆಸರೂ ಪ್ರಚಾರದಲ್ಲಿದೆ.



ಮನೆತದ ಪದ್ಧತಿಯಂತೆ ಭಗವದ್ಭಕ್ತರಾದ ಇವರ ತಂದೆ ತಾಯಿಗಳು ಮಗುವನ್ನು ಹುಟ್ಟಿದ ಹನ್ನೆರಡನೆಯ ದಿನ ತಿರುನರಹರಿಯ ದೇವ ಮಂದಿರಕ್ಕೆ ಕರೆದುಕೊಂಡು ಹೋದರು. ಮಗು ಕಣ್ತೆರೆದು ದೇವರನ್ನು ನೋಡಿತು ಜನ್ಮತಃ ಯೋಗಿಯಾಗಿದ್ದ ಮಗು ಅಂಬೆ ಗಾಲಿಡುತ್ತಾ ಹೋಗಿ ಹತ್ತಿರದ ಹುಣಿಸೆಯ ಮರದ ಬುಡದಲ್ಲಿ ಕುಳಿತು ಬಿಟ್ಟಿತು. ಅನ್ನಾಹಾರಗಳಿಲ್ಲದೆ 16 ವರ್ಷಗಳು ಅಲ್ಲಿಯೇ ಧ್ಯಾನ ಮಗ್ನವಾಗಿತ್ತು. ವಯಸ್ಸಿಗೆ ತಕ್ಕ ಬೆಳವಣಿಗೆ ಇತ್ತು. ಆದರೆ ಮುಚ್ಚಿದ ಕಣ್ಣು ತೆರೆಯಲಿಲ್ಲ. ಈ ಮಹಾಪುರುಷನನ್ನು ಹುಡುಕಿಕೊಂಡು ಬಂದ ಮಧುರಕವಿ ಆಳ್ವಾರ್ ಅವರಿಗೆ ಆ ಊರಿನವರು ಇವರ ವಿಶೇಷವನ್ನು ತಿಳಿಸಿದರು. ಅವರಿಗೆ ಚೈತನ್ಯವಿದೆಯೇ ಇಲ್ಲವೇ ಎಂದು ತಿಳಿಯಲು ಮಧುರಕವಿ ಆಳ್ವಾರರು ಅವರ ಮುಂದೆ ದೊಡ್ಡ ಕಲ್ಲೊಂದನ್ನು ಎತ್ತಿ ಹಾಕಿದರು. ಪರಮಯೋಗಿ ನಮ್ಮಾಳ್ವಾರ್ ಅವರು ಕಣ್ತೆರದು ನೋಡಿದರು. ಆಗ ಮಧುರ ಕವಿಗಳು ಅವರನ್ನು 'ಶೆತ್ತದಿನ್ ವಯತ್ತಿಲ್ ಶಿರಿಯದು ಪಿರಂದಾಲ್ ಎತ್ತೆ ತಿನ್ರು ಎಂಗೇ ತಿನ್ರು ಎಂಗೇ ಕಿಡಕ್ಕುಂ' (ಸತ್ತುದರ ಎಂದರೆ ಅಚೇತನ ವಸ್ತುವಿನ ಹೊಟ್ಟೆಯಲ್ಲಿ ಚಿಕ್ಕದು ಎಂದರೆ ಚೇತನವು ಹುಟ್ಟಿದ ಅದು ಯಾವುದನ್ನು ತಿಂದುಕೊಂಡು ಎಲ್ಲಿ ಇರುವುದು) ಎಂದು ಪ್ರಶ್ನಿಸಿದರು. ಮಾರನ್ ಅವರು "ಅತ್ತೆ ತಿನ್ರು ಅಂಗೇ ಕಿಡಕ್ಕುಂ" ಅದನ್ನು ತಿನ್ನುತ್ತಾ ಎಂದರೆ ಭಗವದನುಭವ ಮಾಡುತ್ತಾ ಅಲ್ಲೇ ಇರುವುದು) ಎಂದರು. ಈ ಉತ್ತರವನ್ನು ಅರ್ಥ ಮಾಡಿಕೊಂಡ ಮಧುರಕವಿಗಳು ಅವರ ಪಾದಗಳ ಮೇಲೆ ಬಿದ್ದು ತಮಗೆ ತತ್ವವನ್ನು ಉಪದೇಶಿಸಬೇಕೆಂದು ಬೇಡಿದರು. ಆಗ ಮಾರನ್ ಅವರು ನಾಲ್ಕು ವೇದಗಳಿಗೆ ಸಮವಾದ ನಾಲ್ಕು ಪ್ರಬಂಧಗಳನ್ನು ಕಂಡು ಉಪದೇಶಿಸಿದರು.

ನಮ್ಮಾಳ್ವಾರವರ ಈ ಸೂಕ್ತಿಗಳು ಬಹಳ ಸುಲಭವಾಗಿಯೂ ಹೃದಯಂಗಮವಾಗಿಯೂ ಇದೆ. ಶ್ರುತಿಗಳು, ಸ್ಮೃತಿಗಳು, ಪುರಾಣಗಳು, ಇತಿಹಾಸಗಳು,ಸೂತ್ರಗಳು, ಅಷ್ಟಾದಶ ಪುರಾಣಗಳು ಅದಲ್ಲದೆ ಅಷ್ಟಾದಶ ಉಪಪುರಾಣಗಳು, ರಾಮಾಯಣ,ಮಹಾಭಾರತ ಅವುಗಳೆಲ್ಲಾ ಏನನ್ನು ತಿಳಿಸಬೇಕೆಂದು ಪ್ರಯತ್ನ ಪಡುತ್ತಿವೆಯೋ ಅದೆಲ್ಲವನ್ನೂ ಶಠಗೋಪರ ವಚನಗಳು ತಿಳಿಸಿಕೊಡುತ್ತೇವೆ. ಈ ಸೂಕ್ತಿಗಳನ್ನು ವೇದಾಂತ ದೇಶಿಕರು "ಶಠಮಥನ ಮುನೇಃ ಸಂಹಿತಾ ಸಾರ್ವಭೌಮಿ" ಎಂದು ಕೊಂಡಾಡಿದ್ದಾರೆ. ಋಷಿಗಳು ವೇದವನ್ನು ರಚಿಸಲಿಲ್ಲ. ಮಿಂಚು ಪ್ರಕಾಶವನ್ನು ಚೆಲ್ಲುವಂತೆ ಅವರಿಗೆ ದರ್ಶನವಾಗಿ ಸಾಕ್ಷಾತ್ಕಾರ ವಾಯಿತು. ತಮಗೆ ಕಂಡು ಬಂದದ್ದನ್ನು ಅವರು ಹೇಳಿದರು. ಹಾಗೆಯೇ ಈ ಪ್ರಬಂಧಗಳು ಆಳ್ವಾರವರಿಂದ ಕಾಣಲ್ಪಟ್ಟದ್ದು. ಭಗವಂತನು ಆಳ್ವಾರರುಗಳಿಗೆ ವಿಶೇಷವಾದ ಕಟಾಕ್ಷವನ್ನು ಕರುಣಿಸಿದನು. ಆ ಕಟಾಕ್ಷದಿಂದ ಆಳ್ವಾರವರು ತತ್ವವೆಲ್ಲಾ ವಿಶದವಾಗಿ ತಿಳಿಯುವಂತಾಯಿತು.

ಆಳ್ವಾರರುಗಳಲೆಲ್ಲಾ ನಮ್ಮಾಳ್ವಾರವರು ಅಪ್ರತಿಮವಾದ ವೈಭವವನ್ನು ಉಳ್ಳವರು. "ಪ್ರಪನ್ನ ಜನ ಕೂಟಸ್ಥರು" ಎಂಬ ಬಿರುದಿಗೆ ಪಾತ್ರರಾದರು. ಇವರನ್ನು ಭಕ್ತರು "ನಮ್ಮ ಆಳ್ವಾರವರು" ಎಂದು ಅತ್ಯತಿಶಯ ಗೌರವ ಆದರಗಳೊಡನೆ ಕೊಂಡಾಡಿದ್ದಾರೆ. ಮಧುರಕವಿ ಆಳ್ವಾರವರು ತಮ್ಮ ಆಚಾರ್ಯರಾದ ನಮ್ಮಾಳ್ವಾರವರಲ್ಲಿ ಅತ್ಯಂತ ಭಕ್ತಿ ಉಳ್ಳವರು. ಅವರು ಆಚಾರ್ಯರ ಜೀವಿತ


ಕಾಲದಲ್ಲಿಯೇ ಅವರ ಅರ್ಚಾಮೂರ್ತಿಯನ್ನು ತಿರುನಗರಿಯಲ್ಲಿ ಪ್ರತಿಷ್ಠಾಪಿಸಿ ಅವರಿಗೆ ಉತ್ಸವಾದಿಗಳನ್ನು ನಡೆಸುತ್ತಾ ಬಂದರು. "ವೇದಂ ತಮಿಳ್‌ಶೈದ ಮಾರನ್" ಎಂದು ಎಲ್ಲರೂ ಕೊಂಡಾಡುವಂತೆ ಮಾಡಿದರು. ನಮ್ಮಾಳ್ವಾರ್ ಅವರು ತಮ್ಮ 35 ವಯಸ್ಸಿನಲ್ಲಿ ಪರಮಪದ ಸೇರಿದರು. ಮಧುರಕವಿ ಆಳ್ವಾರವರಿಗೆ ತತ್ವ, ಹಿತ, ಪುರುಷಾರ್ಥಗಳನ್ನು ಉಪದೇಶಿಸಿ ಆಚಾರ್ಯರಾದ ನಮ್ಮಾಳ್ವಾರವರು ಆಚಾರ್ಯ ಪರಂಪರೆಯಲ್ಲಿಯೇ ಮೊದಲಿನವರಾದರು.

ಈ ಶಠ ಮುನಿಗಳ ಶ್ರೀ ಸೂಕ್ತಿಗಳ ಅತ್ಯಂತ ಪ್ರಶಸ್ತವಾದುವು. ಭಗವಂತನ ಭಕ್ತಿಯೇ ಒಂದು ವಾಕ್ ರೂಪ ತಾಳಿ ಬಂದು ಆಳ್ವಾರರಿಂದ ಅರ್ಥ ಪಂಚಕಗಳನ್ನೂ ಶರಣಾಗತಿ ಮಂತ್ರದ ವಿವರಣೆಯನ್ನೂ ಲೋಕಕ್ಕೆ ಸುಸ್ಪಷ್ಟವಾಗಿ ತಿಳಿಸಿಕೊಟ್ಟಿರುತ್ತದೆ.

ನಮ್ಮಾಳ್ವಾರವರು 4 (ನಾಲ್ಕು) ಪ್ರಬಂಧಗಳನ್ನು ಅನುಗ್ರಹಿಸಿದ್ದಾರೆ. 1) ತಿರುವಿರುತ್ತಂ 2) ತಿರುವಾಶಿರಿಯಂ 3) ಪೆರಿಯ ತಿರುವಂದಾದಿ ಮತ್ತು 4) ತಿರುವಾಯ್ಮೊಳಿ. ತಮ್ಮ ಗಾಢವಾದ ಭಗವತ್ ಪ್ರೇಮವನ್ನು ಹೃದಯ ಕರುಗುವಂತೆ ಈ ಪ್ರಬಂಧಗಳಲ್ಲಿ ತೋಡಿಕೊಂಡಿದ್ದಾರೆ. ಎಲ್ಲಾ ಪ್ರಬಂಧಗಳು ಅಂದಾದಿ ಶೈಲಿಯಲ್ಲಿವೆ. ಮಾನವ ಕುಲಕ್ಕೇ ಇವು ಸ್ಫೂರ್ತಿ ನೀಡಿ ಭಗವದನುಭವದ ಆನಂದ ಅಮೃತ ಸಾಗರದಲ್ಲಿ ತೇಲುವಂತೆ ಮಾಡುತ್ತದೆ.

**1. ತಿರುವಿರುತ್ತಂ :** ಋಗ್ವೇದ ಸಾರವನ್ನೊಳಗೊಂಡ ಇದು ಆಳ್ವಾರವರು ಅನುಗ್ರಹಿಸಿರುವ ಪ್ರಥಮ ಪ್ರಬಂಧ. ನೂರು ಪಾಶುರಗಳನ್ನುಳ್ಳ ಇದು ಬಹಳ ಕಠಿಣವಾದುದು. ಲೋಕದಲ್ಲಿ ಪರಮಾತ್ಮನೊಬ್ಬನೇ ಪುರುಷ ಉಳಿದವರೆಲ್ಲಾ ಸ್ತ್ರೀ ಪ್ರಾಯರಾಗಿ ಅವನಿಗೆ ಶೇಷಭೂತರಾದವರು ಎಂದು ತಿಳಿಸಲು ಆಳ್ವಾರವರು ಈ ಪ್ರಬಂಧದಲ್ಲಿ ತಮ್ಮನ್ನು ನಾಯಕಿಯನ್ನಾಗಿ ಭಾವಿಸಿಕೊಂಡು ನಾಯಕರಾದ ಭಗವಂತನಲ್ಲಿ ತಮಗಿರುವ ಗಾಢವಾದ ಪ್ರೇಮವನ್ನು ಕೇಳುವವರ ಮನಕರಗುವಂತೆ ಅಭಿವ್ಯಕ್ತಗೊಳಿಸಿದ್ದಾರೆ.

**2. ತಿರುವಾಶಿರಿಯಂ :** 7ಪಾಶುರಗಳನ್ನು ಮಾತ್ರವುಳ್ಳ ಅತ್ಯಂತ ಚಿಕ್ಕದಾದ ಈ ಪ್ರಬಂಧ ಯಜುರ್ವೇದ ಸಾರವನ್ನುಳ್ಳದ್ದು,7ಪಾಶುರಗಳಲ್ಲಿಯೇ ಆಳ್ವಾರವರು ತತ್ವ, ಹಿತ, ಪುರುಷಾರ್ಥಗಳನ್ನು ಅತ್ಯಂತ ಪ್ರಭಾವ ಪೂರ್ಣವಾಗಿ ಪ್ರತಿಪಾದಿಸಿದ್ದಾರೆ. ಭಗವಂತನ ದಿವ್ಯಮಂಗಳ ವಿಗ್ರಹದ ಸೌಂದರ್ಯವನ್ನು ಪರಿಪೂರ್ಣವಾಗಿ ಇಲ್ಲಿ ಆಳ್ವಾರವರು ಅನುಭವಿಸಿದ್ದಾರೆ.



**3. ಪೆರಿಯ ತಿರುವಂದಾದಿ:** 87 ಪಾಶುರಗಳನ್ನುಳ್ಳ ಈ ಪ್ರಬಂಧ ಅಥರ್ವಣವೇದದ ಸಾರವನ್ನೊಳಗೊಂಡಿದೆ. ಈ ಪ್ರಬಂಧದಲ್ಲಿ ಆಳ್ವಾರವರು ವಿನೋದವಾಗಿ ಭಗವಂತನನ್ನು "ನೀನು ದೊಡ್ಡವನೋ? ನಾನು ದೊಡ್ಡವನೋ? ಈ ಲೋಕವೂ ಮೇಲಿನ ಲೋಕವೂ ನಿನ್ನಲ್ಲಿದೆ. ಇಂತಹ ನೀನು ನನ್ನ ಕಿವಿಯ ಮೂಲಕ ಒಳಹೊಕ್ಕು ಸದಾ ಸರ್ವದಾ ನನ್ನ ಒಳಗೆ ಇದ್ದೀಯ. ಆದುದರಿಂದ ನಾನು ದೊಡ್ಡವನು, ನೀನು ದೊಡ್ಡವನೆಂದು ತಿಳಿಯುವವರು ಯಾರು? ಎಂದು ವಿನೋದಕ್ಕಾಗಿ ಆದರೂ ಸತ್ಯವಾದ ತಮ್ಮ ಹಿರಿಮೆಯನ್ನು ಹೇಳಿಕೊಂಡಿದ್ದಾರೆ.

ಈ ಪ್ರಬಂಧದಲ್ಲಿ ಆಳ್ವಾರವರು ಮನಸ್ಸು ತನ್ನ ದೋಷಗಳನ್ನು ಹೋಗಲಾಡಿಸಿಕೊಂಡು ಶುದ್ಧವಾಗಿ ಮಹಾಮಹಿಮನಾದ ಭಗವಂತನನ್ನು ಭಜಿಸಬೇಕೆಂದು ಮನಸ್ಸಿಗೆ ಬೋಧಿಸಿದ್ದಾರೆ ಭಗವಂತನ ಅನುಗ್ರಹವನ್ನು ಪಡೆದು ಭವದ್ಭಕ್ತಿಯಲ್ಲಿ ಮಿಂದು ಪುನೀತನಾಗಬೇಕೆಂದು ತಮ್ಮ ಮನಸ್ಸನ್ನು ಪ್ರೇರೇಪಿಸಿದ್ದಾರೆ.

**4. ತಿರುವಾಯ್ಮೊಳಿ:** 1102 ಪಾಶುರಗಳನ್ನುಳ್ಳ ಈ ಸುದೀರ್ಘ ಪ್ರಬಂಧ ಚತುರ್ವೇದಗಳ ಸಾರಾರ್ಥಗಳನ್ನೂ ಹೊಂದಿದೆ ಎಂದು ವೇದಾಂತದೇಶಿಕರು ನಿರೂಪಿಸಿದ್ದಾರೆ. ಮೊದಲ 21 ಪಾಶುರಗಳು ಬ್ರಹ್ಮ ಸೂತ್ರಗಳ ಅರ್ಥವನ್ನು ವಿಶದವಾಗಿ ತಿಳಿಸಿ ಋಗ್ವೇದದ 21 ಶಾಖೆಗಳಿಗೆ ಸಮವಾಗಿವೆ. ಗೀತಾನುಬದ್ಧವಾಗಿ ಸಾವಿರ ಪಾಶುರಗಳು ಸಾಮವೇದದ ಸಹಸ್ರ ಶಾಖೆಗಳಿಗೆ ಸಮವಾಗಿವೆ. ಅರ್ಥಯುಕ್ತವಾದ 101 ದಶಕಗಳು, ಯಜುರ್ವೇದದ 101 ಶಾಖೆಗಳನ್ನು ಪ್ರತಿಪಾದಿಸುತ್ತವೆ. ಶೃಂಗಾರಾದಿ ರಸಗಳನ್ನುಳ್ಳ ಈ ಪ್ರಬಂಧ ಅಥರ್ವಣವೇದದ ಸಾರವೂ ಆಗಿದೆ.

'ದ್ರಾವಿಡ ವೇದಸಾಗರ'ವೆಂದು ಖ್ಯಾತಿ ಪಡೆದ ಈ ಮಹತ್ಪ್ರಬಂಧವನ್ನು ಸಮಗ್ರವಾಗಿ ವಿವೇಚಿಸುವುದು ಅಸಾಧ್ಯ. ಭಗವಂತನು ಸರ್ವಕಾರಣನಾಗಿದ್ದಾನೆ. ಈ ಜಗತ್ತಿನ ಸೃಷ್ಟಿ,

ಸ್ಥಿತಿ, ಪ್ರಲಯಗಳಿಗೆ ಅವನೇ ಕಾರಣ, ಈ ಜಗತ್ಕಾರಣ ಭೂತನಾದ ಪರಮಾತ್ಮನು ಶ್ರೀಮನ್ನಾರಾಯಣನೇ ಎಂಬುದನ್ನು ನಮ್ಮಾಳ್ವಾರವರು ದೃಢವಾಗಿ ಪ್ರತಿಪಾದಿಸಿದ್ದಾರೆ. ಈ ಪ್ರಬಂಧದ ಪ್ರತಿಯೊಂದು ಶತಕದ ಪ್ರತಿಯೊಂದು ದಶಕವೂ ಭಗವಂತನ ಒಂದೊಂದು ಕಲ್ಯಾಣಗುಣವನ್ನು ಪ್ರತಿಪಾದಿಸುತ್ತದೆ.

ಒಂದೊಂದು ಪಾಶುರವೂ ಅವನ ಕಲ್ಯಾಣ ಗುಣಗಳಲ್ಲಿ ಒಂದನ್ನು ಕೊಂಡಾಡುತ್ತದೆ. ಭಗವಂತನ ನಿರತಿಶಯವಾದ ಕಲ್ಯಾಣ ಗುಣಗಳನ್ನು ಈ ಸಹಸ್ರ ಗಾಥೆಯಲ್ಲಿ ಸಹಸ್ರಾರು ರೀತಿಯಲ್ಲಿ ಕೊಂಡಾಡಲ್ಪಟ್ಟಿದೆ.

ಭಗವತ್ಸ್ವರೂಪ, ಜೀವಸ್ವರೂಪ, ಮೋಕ್ಷೋಪಾಯ ಸ್ವರೂಪ, ಫಲ ಸ್ವರೂಪ, ವಿರೋಧಿ ಸ್ವರೂಪ ಎಂಬ ಅರ್ಥ ಪಂಚಕಗಳನ್ನು ಈ ಬೃಹತ್ಪ್ರಬಂಧ ಪ್ರತಿಪಾದಿಸುತ್ತದೆ ಎಂದು ಆಚಾರ್ಯರುಗಳು ಕೊಂಡಾಡಿದ್ದಾರೆ. ಚೇತನರು ತಮ್ಮ ಉದ್ಧಾರವನ್ನು ಸಾಧಿಸಿಕೊಳ್ಳಲು ಅನುಸರಿಸಬೇಕಾದ ಉಪಾಯ ಸ್ವರೂಪವನ್ನು ಆಳ್ವಾರವರು ಈ ಪ್ರಬಂಧದಲ್ಲಿ ಖಚಿತವಾಗಿ ನಿರೂಪಿಸಿದ್ದಾರೆ.

ಸಂಸಾರದಲ್ಲಿ ತೊಳಲುವ ಚೇತನರಿಗೆ ಭಗವಂತನ ಪಾದಗಳನ್ನು ಬಿಟ್ಟು ಬೇರೆ ಗತಿಯಿಲ್ಲ. ಆನಂದಾನುಭವ ಸ್ವರೂಪನಾದ ಭಗವಂತನ ನಿತ್ಯಾನುಭವ ಮತ್ತು ನಿತ್ಯ ಕೈಂಕರ್ಯದ ಪ್ರಾಪ್ತಿಗಾಗಿ ಚೇತನನು ಭಗವಂತನಲ್ಲಿ ಶರಣಾಗತಿ ಮಾಡಬೇಕು ಭಕ್ತಿ ಯೋಗವನ್ನೋ ಅಥವಾ ಶರಣಾಗತಿಯನ್ನೋ ಮಾಡಿ ಭಗವಂತನನ್ನು ಪಡೆಯಬೇಕು.

ನಮ್ಮಾಳ್ವಾರವರ ತಿರುವಾಯ್ಮೊಳಿ ಪ್ರಬಂಧವು ಅತ್ಯಂತ ಗಹನವಾದ ಸಕಲ ವೇದಾಂತಾರ್ಥಸಾರವನ್ನು ನಿರೂಪಿಸುತ್ತದೆ. ಆಳ್ವಾರವರು ತಮ್ಮ ದಿವ್ಯಜ್ಞಾನದಿಂದ ಭಗವಂತನ ಸಾಕ್ಷಾತ್ಕಾರ ಪಡೆದವರು. ಈ ಪ್ರಬಂಧದಲ್ಲಿ ಅವರು ಭಗವಂತನೊಡನೆ ನಿತ್ಯ ಸಂಶ್ಲೇಷ ಪಡೆಯಲು ಹಂಬಲಿಸಿರುವುದು ಪ್ರತಿಬಿಂಬಿತವಾಗಿದೆ.

ಒಂದೊಂದು ಹಂತದಲ್ಲಿಯೂ ತಮಗೆ ಉಂಟಾದ ಅನುಭವಗಳನ್ನು ಆಳ್ವಾರವರು ಇದರಲ್ಲಿ ನಿರೂಪಿಸಿದ್ದಾರೆ. ಭಗವಂತನನ್ನು ಸೇರಲು ತಮಗೆ ಅರ್ಹತೆ ಇದೆಯೇ? ಎಂದು ಶಂಕಿಸಿದ್ದಾರೆ.

ಮರುಕ್ಷಣವೇ ಆ ಭಗವಂತನ ಪರಮ ಔದಾರ್ಯ, ಕರುಣೆ, ವಾತ್ಸಲ್ಯಾದಿ ಗುಣಗಳ ಅನುಸಂಧಾನದಿಂದ ಆ ಶಂಕೆಗಳ ಪರಿಹಾರವಾಗಿರುವುದು, ಭಗವಂತನು ತಾನೇ ಬಂದು ತನ್ನ ಸಂಶ್ಲೇಷವನ್ನು ನೀಡಿರುವುದು ಮತ್ತು ಆ ಭಗವದನುಭವ ಮರೆಯಾಗಿ ಅವನಿಗಾಗಿ ತೀವ್ರವಾಗಿ ಹಂಬಲಿಸುವುದು, ಮೊದಲು ತಾವು ಭಗವಂತನನ್ನು ಹುಡುಕಿಕೊಂಡು ಹೋದರೂ ಕೊನೆಗೆ ಅವನೇ ಬಂದು ತಮ್ಮನ್ನು ಹಿಂಬಾಲಿಸಿದನೆಂದೂ ಆಳ್ವಾರರೂ ತಿಳಿಸಿದ್ದಾರೆ.

ತೀವ್ರವಾದ ತಮ್ಮ ಪ್ರೇಮ ಸ್ವರೂಪವನ್ನು ನಾಯಿಕಾ ಭಾವದ ಮೂಲಕ ಆಳ್ವಾರವರು ನಿವೇದಿಸಿದ್ದಾರೆ. ಕೊನೆಯಲ್ಲಿ ತಮಗಾದ ಪರಿಪೂರ್ಣ ಭಗವತ್ಪ್ರಾಪ್ತಿಯನ್ನು ನಿರೂಪಿಸಿ ಅರ್ಚಿರಾದ ಗತಿಯಲ್ಲಿ ಶ್ರೀವೈಕುಂಠವನ್ನು ಸೇರುವ ಮುಕ್ತನ ವೈಭವವನ್ನು ಅದ್ಭುತವಾಗಿ ವರ್ಣಿಸಿದ್ದಾರೆ. ಭಗವಂತನನ್ನು ಎಲ್ಲದರಲ್ಲಿಯೂ ಕಂಡು ಆ ಭಗವಂತನಿಗಾಗಿ ಕಾಡಿ ಬೇಡಿ ಕೊನೆಗೆ ಅವನ ದಿವ್ಯ ಸಾನ್ನಿಧ್ಯ ಪಡೆದು ಅವನನ್ನು ಸಾಕ್ಷಾತ್ಕರಿಸಿಕೊಂಡ ವೈಭವವನ್ನು ಈ ಪ್ರಬಂಧದಲ್ಲಿ ನಿವೇದಿಸಿದ್ದಾರೆ. ಮಾನವ ಕುಲವು ಹೇಗೆ ಪರಮಾತ್ಮನಲ್ಲಿ ತಮ್ಮನ್ನು ನಿವೇದಿಸಿಕೊಂಡು ಅವನ ಸಾನ್ನಿಧ್ಯದಲ್ಲಿ ಆನಂದವನ್ನು ಪಡೆದು ಧನ್ಯರಾಗಬಹುದೆಂದು ಲೋಕಕ್ಕೆ ತಿಳಿಸಿ ಕೊಟ್ಟಿದ್ದಾರೆ.

ಡಿ॥ – ಎ. ಗೀತಾ ವೀರರಾಘವನ್



**ಭಕ್ತರು ದೇವಸ್ಥಾನದಲ್ಲಿ ಮೌನವನ್ನು ಆಚರಿಸಬೇಕು.**

**ಜೊತೆಗೆ " ಓಂ ನಮೋ ವೇಂಕಟೇಶಾಯ" ಎಂದು ನಾಮಸ್ಮರಣೆಯನ್ನು ಧ್ಯಾನಿಸಬೇಕು.**

**ಕ್ಯೂಲೈನ್‌ನಲ್ಲಿ ಹೋಗುವಾಗ ಗೋವಿಂದ ನಾಮಸ್ಮರಣೆಯನ್ನು ಮಾಡಬೇಕು.**

**ಬೇರೆಯವರನ್ನು ಸಂಬೋಧನೆಯನ್ನು ಮಾಡುವಾಗ ಗೋವಿಂದಾ ಎಂದು ಸಂಬೋಧನೆಯನ್ನು ಮಾಡೋಣ.**

**ಇದರಿಂದ ಯಾವಾಗಲೂ ದೇವರ ಸ್ಮರಣೆಯಲ್ಲಿ ಇರಬಹುದು.**

# एक त्रिंशः पाठः

## ಪಾಠ : 31

ರಚನೆ:-ಕೆ. ಸೂರ್ಯನಾರಾಯಣ
ಅನುವಾದ: ವಿ. ಪ್ರದೀಪ್ ಕುಮಾರ್

युष्माभिः = ನಿಮ್ಮಿಂದ, ನಿಮ್ಮಜೊತೆ   युद्धम् =ಯುದ್ಧವು मार्जालेन = ಬೆಕ್ಕಿನಿಂದ, ಬೆಕ್ಕಿನ ಜೊತೆ

मास्तु = ನೋಡಿ, मूषकैः = ಇಲಿಗಳಿಂದ ಜೊತೆ , भवति = ಆಗುತ್ತಿದ್ದಾನೆ  प्रष्टुम् = ಕೇಳಲು

पीत्वा = ಕುಡಿದು , वसति = ಇರುತ್ತಿದ್ದಾನೆ. चलति = ನಡೆಯುತ್ತಿದ್ದಾನೆ.

### ಪ್ರಶ್ನೆ

1. मूषकाः मार्जालैः युद्धं कुर्वन्ति।
2. वृक्षाः चलन्ति।
3. बालकाः क्षीरं पीत्वा अङ्गणेषु चरन्ति।
4. श्वः प्रातः अहं त्वां द्रष्टुम् आगमिष्यामि।
5. त्वम् अद्यः मम जनकं दृष्ट्वा आगच्छ।
6. अस्मदनुजः ब्राह्मणान् प्रष्टुम् अगच्छत्।
7. एते तत्र किं करिष्यन्ति वा पृष्ट्वा आगच्छ।
8. मास्तु! अहमेव गमिष्यामि। त्वम् अत्र वस।
9. एषः बालकः श्वः ब्राह्मणः भविष्यति।
10. त्वम् इदानीं कुत्र गन्तुं चलसि वा वद।

### ಉತ್ತರ

1. ಇಲಿಗಳು, ಬೆಕ್ಕುಗಳ ಜೊತೆ ಯುದ್ಧ ಮಾಡುತ್ತಿವೆ.
2. ಗಿಡಗಳು ಅಲ್ಲಾಡುತ್ತಿವೆ.
3. ಹುಡಗರು ಹಾಲು ಕುಡಿದು ಪ್ರಾಂಗಣದಲ್ಲಿ ನಡೆಯುತ್ತಿದ್ದಾರೆ.
4. ನಾಳೆ ಬೆಳಗ್ಗೆ ನಾನು ನಿನ್ನನು ನೋಡಲು ಬರುವೆನು.
5. ನೀನು ಇವತ್ತು ನಮ್ಮ ತಂದೆಯನ್ನು ನೋಡಿ ಬಾ.
6. ನಮ್ಮ ತಮ್ಮನು ಬ್ರಾಹ್ಮಣರನ್ನು ಕೇಳಲು ಹೋರಟರು.
7. ಇವರು ಅಲ್ಲಿ ಏನು ಮಾಡುತ್ತಾರೋ ಕೇಳಿ ಬಾ.
8. ಹೋಗಲಿ! ನಾನೇ ಹೋಗುತ್ತೇನೆ. ನೀನು ಇಲ್ಲಿ ಇರು.
9. ಈ ಹುಡುಗ ನಾಳೆ ಬ್ರಾಹ್ಮಣನು ಆಗುತ್ತಾನೆ.
10. ನೀನು ಇವಾಗ ಎಲ್ಲಿಗೆ  ಹೋಗಲು ನಡೆಯುತ್ತಿದ್ದಿ ಹೇಳು.

### ಪ್ರಶ್ನೆ

1. ನೀವು ನಮ್ಮ ಜೊತೆ ಯುದ್ಧ ಮಾಡುತ್ತೀರಾ?
2. ನನ್ನಿಂದ ಅಲ್ಲಿಗೆ ಹೋಗಲ್ಪಡಬೇಕು.
3. ನೀವು ಇಂದು ತುಪ್ಪ ತರಬೇಕು.
4. ಅವರು ನಮ್ಮ ಮನೆ ನೋಡಬೇಕು.
5. ಯಾರನ್ನು ನೋಡಲು ಹೋಗಿದ್ದೆ?
6. ಇವರನ್ನು ಕರೆದು ನಮ್ಮ ತಂದೆಯನ್ನು ಇಲ್ಲಿಗೆ ಬರಲಿಕ್ಕೆ ಹೇಳು.
7. ಹೋಗಲಿ! ನೀನು ಏಕೇ ಅವನ ಜೊತೆ ಯುದ್ಧ ಮಾಡಿದೆ ಅಂತ ಹೇಳು?
8. ನೀನು ಹುಡುಗನಲ್ಲವೇ!
9. ಬೇಗ ಹೊರಡು  ಯಾರೋ ಬರುತ್ತಿದ್ದಾರೆ.
10. ನಾವು ಇವತ್ತು ಅವರ ಮನೆಗೆ ಊಟಕ್ಕೆ ಹೋಗಬೇಕು. ಬೇಗ ಸ್ನಾನವನ್ನು ಮಾಡಿರಿ.

### ಉತ್ತರ

1. यूयम् अस्माभिः युद्धं करिष्यन्ति वा?
2. मया तत्र गन्तव्यम्।
3. युष्माभिः इदानीम् आज्यं स्वीकृत्या आगन्तव्यम्।
4. तैः अस्मद्गृहं द्रष्टव्यम्।
5. केषां दर्शनार्थं अगच्छः?
6. एतान् आहूय अस्मद् पितरम् अत्र आगन्तव्यम् इति वद।
7. मास्तु! त्वं किमर्थं तेन युद्धं कृतवान्?
8. त्वं बालकः खलु।
9. शीघ्रं चल केऽपि आगच्छन्ति।
10. अद्य अस्माभिः तेषां गृहे भोजनार्थं गन्तव्यम् शीघ्रं स्नानं कुरुत।

ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್.ಸಿ.ವಿ. ನರಸಿಂಹಾಚಾರ್ಯ
- ಅನುವಾದ : ಶ್ರೀಮತಿ

- ಕಳೆದ ಸಂಚಿಕೆಯಿಂದ

ದೇವ ಪ್ರಸೀದ ಕರುಣಾಕರ ಭಕ್ತವರ್ಗೇ
ಸೇನಾಪತಿ ಪ್ರಣಿಹಿತಾಖಿಲ ಲೋಕಭಾರ
ಶ್ರೀನಿವಾಸ ದಿವ್ಯ ನಗರಾಧಿಪ ರಾಜರಾಜ
ಗೋವಿಂದರಾಜ ವಿಜಯೀ ಭವ ವೇದವೇದ್ಯ)

(ದಯಾಸಾಗರ ! ಭಕ್ತವರ್ಗವೆಲ್ಲವಕ್ಕೂ ! ಸೇನಾಪತಿಯಾಗಿರಿಸಿದ ಸಕಲಲೋಕ ರಕ್ಷಣ ಭಾರವನ್ನು ಹೊತ್ತವನೇ! ಪ್ರಸನ್ನನಾಗು! ಶ್ರೀಪದಪುರಿ ದಿವ್ಯನಗರಾಧಿಪಾ! ರಾಜರಾಜಾ! ನಿಖಿಲ ನಿಗಮವೇದ್ಯ! ಗೋವಿಂದರಾಜಾ! ದೇವಾ! ಜಯಶೀಲನಾಗು)

ಶ್ರೀ ಸೇನಾಪತಿ ಆಳ್ವಾರರು ಭಗವಂತನಿಂದ ಅನುಗ್ರಹಿಸಲ್ಪಡುವರು.

ಶ್ರೀ ಮಚ್ಛಠಾರಿ ಕರುಣಾಶ್ರಿತ ದೇವಗಾನ
ಪಾರಜ್ಞನಾಥ ಮುನಿಸನ್ನುತ ಪುಣ್ಯಕೀರ್ತೇ
ಗೋ ಬ್ರಾಹ್ಮಣ ಪ್ರಿಯ ಗುರೋ ಶ್ರಿತಪಾರಿಜಾತ
ಗೋವಿಂದರಾಜ ಜಗತಾಂ ಕುರು ಮಂಗಳಾನಿ

(ಶ್ರೀನಮ್ಮಾಳ್ವಾರರ ಅನುಗ್ರಹಕ್ಕೆ ಪಾತ್ರರಾಗಿ, ದೇವಗಾನ ಪಾರಂಗತ ನಾದವನೇ, ಶ್ರೀಮನ್ನಾಥ ಮುನಿಗಳ ಕೈಯಿಂದ ಸ್ತುತಿಸಲ್ಪಟ್ಟ ಪವಿತ್ರ ಕೀರ್ತಿ ಹೊಂದಿದವನ ಗೋವುಗಳಿಗೆ ಬ್ರಾಹ್ಮಣರಿಗೆ ಪ್ರಿಯಾರ್ಥವನ್ನು ಹೊಂದಿ ದವನೇ! ಲೋಕಗುರುವೇ! ಆಶ್ರಿತ ಮಂದಾರಾ! ಗೋವಿಂದರಾಜಾ! ಜಗ ಕ್ಕೆಲ್ಲಾ ಶುಭವಾಗುವಂತೆ ನೋಡತಕ್ಕದು).

ಶ್ರೀಮನ್ನಾಥಮುನಿಗಳು ಭಗವಂತನಿಂದ ಅನುಗ್ರಹಿತರಾಗಲಿ. ಪ್ರಬಂಧಗಾಯಕರಿಗಳಿಗೂ ಇದೇ ಶ್ಲೋಕ.

ಶ್ರೀಮದ್ರಾಮಾನುಜಾಚಾರ್ಯರು ಸ್ವತಃ ಪೂರ್ವಕಾಲದಿಂದಲೇ ಶ್ರೀವೆಂಕಟೇಶ್ವರ ಸ್ವಾಮಿಗೆ ಶ್ರೀಗೋವಿಂದರಾಜ ಸ್ವಾಮಿಗೆ ಐಕ್ಯವನ್ನು ತೋರು ತ್ತಿರುವಾಗಲೇ ಹಲವು ಧರ್ಮವ್ಯವಸ್ಥೆಗಳನ್ನು ಏರ್ಪಡಿಸಿ ತದನಂತರ ಹಿರಿಯ ರನ್ನು ಈ ಐಕ್ಯವನ್ನು ಎಲ್ಲರಿಗೆ ತಿಳಿಸುವಂತೆ ತಿಳಿಸುವುದಕ್ಕಾಗಿಯೇ ತಿರುವಾಡಿ ಪ್ಪಾಡಿಪೂರದಲ್ಲಿ (ಕರ್ಕಾಟಕ ಮಾಸದ ಪೂರ್ವಫಲ್ಗುಣಿ ನಕ್ಷತ್ರದ ದಿನ) ಶ್ರೀ ಗೋವಿಂದರಾಜ ಸ್ವಾಮಿಗೆ ಹಾಗೂ ಪೆರಿಯಾಳ್ವಾರರ ಪುತ್ರಿಯಾದ ಶ್ರೀ ಗೋದಾ ದೇವಿಯನ್ನು ತಿರುಮಲೆಯ ಯಡಿಯಾರಕ್ಕೆ ಮೆರವಣಿಗೆ ಮಾಡಿಸಿ ಶ್ರೀ ವೇಂಕಟೇಶ್ವರ ಸ್ವಾಮಿಯೊಂದಿಗೆ 1 ಕೂಡಲ್ ವಳ್ಳೈಚ್ಚು' ಕ್ರೀಡೆಯನ್ನು ಸಂಪನ್ನಗೊಳಿಸಬೇಕೆಂದು ಕಟ್ಟಳೆ ವಿಧಿಸಿದ್ದಾರೆ. ತಿರುಮಲೆ ಬೆಟ್ಟದ ಮೇಲೆ ಧನುರ್ಮಾಸದಲ್ಲಿ ಶ್ರೀದ್ವಾದಶಿ ತೀರ್ಥ ಕಾರ್ಯಕ್ರಮಗಳನ್ನು ಪರಮ ಕಾಂತರು ಕೂಡಾ ಚಕ್ರತೀರ್ಥದಲ್ಲಿ ಸ್ನಾನ ನಿರ್ವಹಿಸಿಯೇ ಕೈಗೊಳ್ಳುತ್ತಿದ್ದ ರೆಂಬುದು ಪ್ರಮಾಣಯುಕ್ತ ಐತಿಹ್ಯವಾಗಿದೆ.



ಧರ್ನುರ್ಮಾಸೇ ಸಿತೇಪಕ್ಷೇ ದ್ವಾದಶ್ಯಾಮರುಣೋದಯೇ
ಆಯಾಂತ ಸರ್ವ ತೀರ್ಥಾನಿ ಸ್ವಾಮಿಪುಷ್ಕರಿಣೀಜಲೇ
ತತ್ರ ಸ್ನಾನಂ ಪ್ರಕುರ್ವಂತಿಪ್ರೀಯೇ ನರಾಃ ಪ್ರಿತಮಾನಸಾಃ
ತೇ ಸರ್ವ ಪಾಪೈ ರ್ಮುಚ್ಯಂತೇ ಸಗೋತ್ರಜ್ಞಾತಿಬಾಂಧಾವಾಃ

ಧರ್ನುರ್ಮಾಸದ ಶುಕ್ಲ ಪಕ್ಷ ದ್ವಾದಶಿಯಂದು ಅರುಣೋದಯ ವೇಳೆಗೆ ಎಲ್ಲಾ ತೀರ್ಥಗಳಲ್ಲಿ ಸ್ವಾಮಿಪುಷ್ಕರಿಣಿಯ ಸಾನ್ನಿಧ್ಯ ಪ್ರವಹಿಸುತ್ತದೆ. ಮನಃಪೂರ್ವಕವಾಗಿ ಯಾವ ನರನು ಮುಳುಗಿ ಸ್ನಾನಮಾಡುತ್ತಾನೋ, ಅವನು, ಅವನ ಗೋತ್ರದಾಯಾದಿಗಳು ಸುತ್ತಿರುವ ಸರ್ವವಿಧ ದುರಿತ ಗಳಿಂದ ವಿಮುಕ್ತಿ ಹೊಂದುತ್ತಾರೆ. ಎಂದು -

ಸ್ವಾಮಿ ಪುಷ್ಕರಿಣೆಸ್ನಾನಂ ಚಾಪೇ ಮಾಸ್ಯರುಣೋದಯೇ
ಪಕ್ಷೇ ಸೀತೇ ಚ ದ್ವಾದಶ್ಯಾ ಮಾಚರಂತಿ ಹಿ ಯೇ ನರಾಃ
ತೇ ಯಾಂತಿ ತ್ರಿದೀವಂ ಲೋಕಂ ನಿರ್ಧೂತಾಶೇಷ ಕಿಲ್ಬಿಷಾಃ॥

(ಯಾವ ಮಾನವರು ಧರ್ನುರ್ಮಾಸದ ಶುಕ್ಲಪಕ್ಷ ದ್ವಾದಶಿ ದಿನ ದಂದು ಅರುಣೋದಯ ಸಮಯದಲ್ಲಿ ಸ್ವಾಮಿಪುಷ್ಕರಿಣಿಯಲ್ಲಿ ಸ್ನಾನ ಮಾಡುತ್ತಾರೋ ಅವರು ತಮ್ಮ ಸರ್ವಪಾಪಗಳನ್ನು ತೊಳೆದುಕೊಂಡು ಸ್ವರ್ಗ ಲೋಕವನ್ನು ಹೊಂದುತ್ತಾರೆ) ಎಂದು

ಯಾ ಮಾನವಃ ಸ್ವಾಮಿ ಸರಸಿ ಚಾಪಂ ಪ್ರಾಪ್ತೇ ದಿವಾಕರೇ
ಶುಕ್ಲೇ ಪಕ್ಷೇಂಜನಾದ್ರೌ ವೈ ದ್ವಾದಶ್ಯಾಮರುಣೋದಯೇ
ಸರ್ವಪಾಪೈರ್ವಿನಿರ್ಮುಕ್ತೋಃ ಪ್ರಾಪ್ನುಯಾದ್ವೈಷ್ಣವಂ ಪದಮ್''

(ಯಾವ ಮಾನವನು, ಸೂರ್ಯ ಧನುರಾಶಿಯಲ್ಲಿ ಪ್ರವೇಶಿಸುತ್ತಲೇ ಶುದ್ಧ ದ್ವಾದಶಿಯರುಣೋದಯ ವೇಳೆ ಅಂಜನಾದ್ರಿ (ವೇಂಕಟಾದ್ರಿ)ಯಲ್ಲಿ ಸ್ವಾಮಿಪುಷ್ಕರಿಣಿಯಲ್ಲಿ ಸ್ನಾನವನ್ನು ಮಾಡುತ್ತಾನೋ ಆತನು ಸರ್ವ ಪಾಪಗಳಿಂದ ವಿಮುಕ್ತನಾಗಿ ವೈಷ್ಣವ ಸ್ಥಾನವನ್ನು (ವೈಕುಂಠವನ್ನು) ಹೊಂದು ತ್ತಾನೆ) ಎಂದು -

ತಿಸ್ರಃ ಕೋಟ್ಯೋರ್ಧ ಕೋಟಿ ಚ ತೀರ್ಥಾನಿ ಭುವನತ್ರಯೇ
ತಾನಿ ಸರ್ವಾಣಿ ಶೇಷಾದ್ರೌಪ ಚಾಪಮಾಸೇರುಣೋದಯೇ
ದ್ವಾದಶ್ಯಾಂ ಶುಕ್ಲಪಕ್ಷೇ ವೈ ಸ್ವಾಮಿತೀರ್ಥೇ ಪಾವನೇ
ಸಮಾಯಾಂತಿ ತದಾ ಸ್ನಾಪ್ಯೈತ್ವಾ ಮುಚ್ಯಂತೇ ಸರ್ವಕಿಲ್ಬಿಷೈಃ॥

(ಧರ್ನುರ್ಮಾಸದ ಶುಕ್ಲಪಕ್ಷ ದ್ವಾದಶಿ ದಿನ ಅರುಣೋದಯ ವೇಳೆ ಯಲ್ಲಿ ಭುವನತ್ರಯಗಳಲ್ಲಿರ ತಕ್ಕಂಥ ಮೂರುವರೆ ಕೋಟಿ ತೀರ್ಥಗಳೆಲ್ಲವೂ ಸ್ವಾಮಿಪುಷ್ಕರಿಣಿಗೆ ಬಂದು ಸೇರುತ್ತವೆ. ಅಂತಹ ವೇಳೆಯಲ್ಲಿ ವಿಗಡ ಪಾಪಾತ್ಮ ರಾದ ಮನುಷ್ಯರೆಲ್ಲರು ತೀರ್ಥಸ್ನಾನವನ್ನು ಮಾಡಿ ತಮ್ಮ ಬಂಧು ಸಮೇತ ಮಹಾಪಾತಕ ನಿರ್ಮುಕ್ತರಾಗುವುದು)

- ಮುಂದುವರೆಯುತ್ತದೆ.

## ತಿರುಮಲೆಯಲ್ಲಿ ನೋಡುವ ಪ್ರದೇಶಗಳು

### ಸ್ವಾಮಿಪುಷ್ಕರಿಣಿ :

ಸ್ವಾಮಿಪುಷ್ಕರಿಣಿ ತಿರುಮಲೆಯಲ್ಲಿ ಆಲಯದ ಪಕ್ಕದಲ್ಲಿದೆ. ಭಕ್ತರು ಆಲಯದಲ್ಲಿ ಪ್ರವೇಶಿಸುವ ಮೊದಲು ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡು ತ್ತಾರೆ. ಇಲ್ಲಿ ಸ್ನಾನ ಮಾಡಿದರೆ ದೇಹವೇ ಅಲ್ಲದೇ ಮನಸ್ಸು ಕೂಡಾ ಪರಿಶುದ್ಧವಾಗುತ್ತದೆ.

### ಆಕಾಶಗಂಗ :

ಈ ತೀರ್ಥ ಆಲಯದಿಂದ ಉತ್ತರಕ್ಕೆ 5 ಕಿ.ಮೀ ದೂರದಲ್ಲಿದೆ.

### ಪಾಪವಿನಾಶನ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ವೈಕುಂಠತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ತುಂಬುರುತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿದೆ.

### ಶಿಲಾತೋರಣ :

ಭೌಗೋಳಿಕ ಪರಿಣಾಮದಿಂದ ಸಹಜಸಿದ್ಧವಾಗಿರುವ ಶಿಲಾ ತೋರಣ.ಗುಡಿಗೆ ಉತ್ತರಕ್ಕೆ ಒಂದು ಕಿಲೋ ಮೀಟರು ದೂರದಲ್ಲಿದೆ.

### ತಿ.ತಿ.ದೇ ಉದ್ಯಾನವನಗಳು :

ದೇವಸ್ಥಾನದವರು ತಿರುಮಲೆಯಲ್ಲಿ ಶೋಭಾಯಮಾನವಾದ ಉದ್ಯಾನವನಗಳನ್ನು ಬೆಳಸುತ್ತಿದ್ದಾರೆ. ಇಲ್ಲಿ ಅಪುರೂಪವಾದ ಗಿಡಗಳು, ವೃಕ್ಷಗಳು ಅಭಿವೃದ್ಧಿಯಾಗುತ್ತಿವೆ.

### ಆಸ್ಥಾನಮಂಡಪ :

ಹಿಂದೂ ಧರ್ಮ ಪ್ರಚಾರಪರಿಷತ್ತು ಅವರ ಆಧ್ವರ್ಯದಲ್ಲಿ ನಿರ್ವಹಿಸುವ ಧಾರ್ಮಿಕ ಉಪನ್ಯಾಸಗಳು, ಹರಿಕಥೆ, ಸಂಗೀತ, ಭಜನೆ ಕಾರ್ಯಕ್ರಮಗಳಿಗೆ ವೇದಿಕೆಯಾಗಿ ಉಪಯೋಗಿಸಲ್ಪಡುತ್ತಿರುವ ಸಭಾ ಮಂಡಪ.

### ಶ್ರೀವೆಂಕಟೇಶ್ವರ ಧ್ಯಾನಮಂದಿರ(ಎಸ್.ವಿ.ಮ್ಯೂಜಿಯಂ) :

ಅಪುರೂಪವಾದ ಪುರಾವಸ್ತು ಪ್ರದರ್ಶನ, ಚಿತ್ರ, ಶಿಲ್ಪಕಳಾ ರೂಪಗಳಿಗೆ, ಧ್ಯಾನಕ್ಕೆ ಕೇಂದ್ರವಾಗಿ ಭಕ್ತರನ್ನು ಆಕರ್ಷಿಸುತ್ತಿದೆ. ಭಕ್ತರು ಭಗವಂತನನ್ನು ಧ್ಯಾನಿಸುತ್ತಾ ಮಾನಸಿಕ ಒತ್ತಡವನ್ನು ಕಳೆದುಕೊಳ್ಳಬಹುದು.



# ಆಳ್ವಾರುಗಳು ಕಂಡ ತಿರುವೇಂಗಡ

- ಎಂ. ಆರ್. ನರಸಿಂಹನ್

ಕುರವರು ಆಳ್ವಾರ್ ಪ್ರಬಂಧಗಳಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದಾರೆ. ಕುರವರುವಳ್ಳಿಯ ನಾಡವರು. ಶ್ರೀರಾಮಚಂದ್ರ ರಾಯರು 'ತಿರುಪತಿ ತಿಮ್ಮಪ್ಪದಲ್ಲಿ' ಹೇಳಿರುವಂತೆ ಕನ್ನಡ ನಾಡಿನ ಕುರುಬರಲ್ಲ. ಇವರು ಕೊರವ-ಕೊರವಂಜಿ ಜಾತಿಯ ಒಂದು ರೀತಿಯ ಕಾಡು ಕುರುಬರು ಅಥವಾ ಕಾಡು ಬೇಡರು. ಇವರು ತಿರುಮಲೆಯ ಮೇಲೆ ವಾಸವಾಗಿದ್ದರು ಎಂದು ಆಳ್ವಾರ್ ಪ್ರಬಂಧಗಳಲ್ಲಿ ಪ್ರಸ್ತಾಪವಿದೆ. ತಿರುಮಲೆಯಲ್ಲಿ ವೇಂಗೈ ವೃಕ್ಷಗಳು ಬೆಳೆದಿದ್ದುವು ಅಥವಾ ಇವರೇ ಬೆಳೆಸಿದ್ದರೂ ಇರಬಹುದು,ಇಲ್ಲ ಪ್ರಾಕೃತಿಕವಾಗಿಯೇ ಬೆಳೆದಿದ್ದುವೋ ಬಲ್ಲವರು ಯಾರು?ಅಂತೂ ವೇಂಗೈ ಇರುವ ಬೆಟ್ಟದಲ್ಲಿ ಮುರುಗನಿರಲೇಬೇಕೆಂಬ ನಿಯಮದಂತೆ ತಿರುವೇಂಗ ಡದ ಮೇಲಿನ ದೇವರಲ್ಲೂ ಅವರು ಮುರುಗನನ್ನು ಗುರುತಿಸಿದ್ದರಲ್ಲಿ ಆಶ್ಚರ್ಯವೇನು? ಪ್ರಾಚೀನ ತಮಿಳು ಗ್ರಂಥದಲ್ಲಿ ಕೆಲವದರಲ್ಲಿ ಈ ದೇವನನ್ನು ಸ್ಕಂದನೆಂದು ಹೇಳಿರುವುದರ ಸಾಮಂಜಸ್ಯವನ್ನು ಈ ವಾದವು ಪುಷ್ಟೀಕರಿಸುವುದಿಲ್ಲವೆ?ಆದರೆ ಸ್ಕಂದಪುರಾಣಗಳಲ್ಲಿ ಅವರು ಮುರುಗ ಕ್ಷೇತ್ರಗಳನ್ನು ಕೇವಲ ಆರು ಎಂದೇ ನಿರ್ಧರಿಸಿದ್ದಾರೆ ಅಥವಾ ವಿಷ್ಣು ದೇವ ರಾಗಿದ್ದ ಈತನನ್ನು ಕುರವರು ಅಥವಾ ಶೈವರು ಈ ವೇಂಗೈ ಮರಗಳ ಇರುವಿಕೆಯಿಂದಾಗಿ ಕಂದನನ್ನಾಗಿ ಪರಿವರ್ತಿಸಲು ಯತ್ನಿಸಿದ್ದರೂ ಸಾಧ್ಯವೆಂದು ಹೇಳಬಹುದಲ್ಲವೇ? ಇದನ್ನು ಮುಂದೆ ವಿವರವಾಗಿ ಪ್ರಸ್ತಾಪ ಮಾಡಿದ್ದೇನೆ. ಹೀಗೆ ವೇಂಗಡ ದೊಡೆಯನು ಸ್ಕಂದ ಅಥವಾ ಶೈವ ವಿಗ್ರಹವಾಗಿ ಕೆಲವು ಕಾಲ ಉಳಿದಿದ್ದರೆ ಆಶ್ಚರ್ಯವಿಲ್ಲ!

ಈ ಮೇಲಿನ ವಿಚಾರಗಳು ತಿರುವೇಂಗಡ, ತಿರುವೇಂಗಡದ ಒಡೆಯನ ವಿಚಾರವಾಗಿ ಪುರಾಣಗಳು, ಹಲವಾರು ಮಹನೀಯರುಗಳಿಂದ ರಚಿತವಾಗಿರತಕ್ಕ ಪುಸ್ತಕಗಳು, ಆಳ್ವಾರ್ ದಿವ್ಯ ಪ್ರಬಂಧಗಳು-ಇವುಗಳೆಲ್ಲದರಲ್ಲಿ ಕಂಡು ಬರುವ ಮಲೆ ವೈಭವ, ವಿಚಾರ, ಮಲೆಯ ಹೆಸರಿನ ಹಿಂದಿನ ಇತಿಹಾಸ,ವಿವಿಧ ಪುಸ್ತಕಗಳಲ್ಲಿನ ಜಿಜ್ಞಾಸೆ, ಹಿಂದಿನ ತಮಿಳು ಕಾವ್ಯಗಳಲ್ಲಿ ಯಾವ ರೀತಿ ಚರ್ಚಿಸಲ್ಪಟ್ಟಿರುವುವು ಮುಂತಾದ ಕುತೂಹಲಕಾರಿ ವಿಚಾರಗಳು ಇವೆಲ್ಲವನ್ನೂ ಚರ್ಚಿಸಿದ್ದಾಯಿತು. ಇವುಗಳಿಂದ ಹೊಸ ವಿಚಾರಗಳು ತಿಳಿದವು. ಆದರೂ ನಾವು ಇಷ್ಟೇ ಮತ್ತು ಹೀಗೆ ಎನ್ನುವುದು. ಮೂರ್ಖತನ,ನಮಗೆ ತಿಳಿಯದ ವಿಚಾರಗಳು ಇನ್ನೂ ಹಲವು ಇರಬಹುದು. ಅವುಗಳು ಎಲ್ಲೆಲ್ಲಿ ಅಭುಕ್ತವಾಗಿ ಅಡಗಿರುವುದೋ ಅಧ್ಯಯನಶೀಲರು ಅವಲೋಕಿಸಿ ಮುಂದೆಯೂ ಈ ವಿಚಾರದಲ್ಲಿ ಅಪೂರ್ವ ವಸ್ತುಗಳನ್ನು ಅಧಿಕವಾಗಿ ಹೊರತೆಗೆದು ಜನರ ಅವಗಾಹನೆಗಾಗಿ ಇಡಲಿ ಎಂದು ನಮ್ರತೆಯಿಂದ ಹಾರೈಸುತ್ತೇನೆ.

ಇನ್ನು ಮುಂದೆ, ಮೊದಲೇ ತಿಳಿಸಿದಂತೆ ಆಳ್ವಾರುಗಳು ಈ ದೇವನನ್ನು ಯಾವ ಯಾವ ದೃಷ್ಟಿಕೋನಗಳಿಂದ ದರ್ಶಿಸಿ ಅನುಭವಗಳನ್ನು ಪಡೆದು ಆ ದೇವರಿಗೆ ಮಂಗಳಾಶಾಸನ ಮಾಡಿ ಕೃತಾರ್ಥರಾಗಿದ್ದಾರೆಂಬುದನ್ನು ಪರಿಶೀಲಿಸೋಣ.

### ಆಳ್ವಾರ್ ಪಾಶುರಗಳ ವಿಶ್ಲೇಷಣೆ

ಪೊಯ್ಗೈಯ್ ಆಳ್ವಾರ್ ಅವರು ತಮ್ಮ 'ಮೊದಲ್ ತಿರುವಂದಾದಿ'ಯ 100 ಪಾಶುರಗಳಲ್ಲಿ 10 ಪಾಶುರಗಳನ್ನು ತಿರುವೇಂಗಡವನ್ನು ಕೀರ್ತಿಸಲು ಉಪಯೋಗ ಮಾಡಿದ್ದಾರೆ. ಅವುಗಳ ಅರ್ಥವನ್ನು ಗ್ರಹಿಸೋಣ.

ಈ ಆಳ್ವಾರ್ ವೇಂಗಡವನ್ನು ಕುರಿತು ಎಂದರೆ ಈ ಬೆಟ್ಟದ ಮೇಲೆ 26, 37, 38,39, 40, 82 ಪಾಶುರಗಳಲ್ಲಿ ಹಾಡಿದ್ದಾರೆ. 76ನೆಯ ಪಾಶುರದಲ್ಲಿ ತಿರುವೇಂಗಡವೆಂದು ಸಂಬೋಧನೆ ಮಾಡಿದ್ದಾರೆ. 77ನೇ ಪಾಶುರದಲ್ಲಿ ವೇಂಗಡವನ್ನು ಇತರ ದಿವ್ಯ ಕ್ಷೇತ್ರಗಳೊಂದಿಗೆ ಅಭ್ಯಾಸ ಮಾಡಿದ್ದಾರೆ. ವೇಂಗಡತ್ತಾಯ್, ವೇಂಗಡತ್ತುಮೇಯಾನ್ ಎನಿಸುವ ವೇಂಗಡದ ಆದಿ ದೈವವನ್ನು 78 ಮತ್ತು 99ನೆಯ ಪಾಶುರಗಳಲ್ಲಿ ಕೀರ್ತಿಸುತ್ತಾರೆ. 79 ನೆಯ ಪಾಶುರದಲ್ಲಿ 'ವೇಂಗಡವೂ ವೇಂಗಡದ ಒಡೆಯನೂ ಒಂದೇ ಎನ್ನುವ ಭಾವ ಗ್ರಹಣ ಅನುಭವವಿದೆ.

ಐಶ್ವರ್ಯಾಪೇಕ್ಷಿಗಳೂ, ಕೈವಲ್ಯಾರ್ಥಿಗಳೂ, ಭಗವತ್ಕಾಮಿಗಳೂ, ಸಹ ಪಾಪವನ್ನು ನಾಶಪಡಿಸತಕ್ಕ ವೇಂಗಡವನ್ನೇ ಆಶ್ರಯಿಸುವುದು. ನಿತ್ಯ ಸೂರಿಗಳ ಮನಸ್ಸನ್ನು ಉಜ್ವಲ ಗೊಳಿಸುವುದು ವೇಂಗಡ ಎಂದರೆ ಎಲ್ಲಾ ಜೀವರು, ನಿತ್ಯರಿಂದ ಆಶ್ರಯಿಸಲ್ಪಡುವ ದಿವ್ಯಧಾಮ ಇದು. ಎಲ್ಲ ವಿಧವಾದ ಅಪೇಕ್ಷೆಗಳನ್ನು ಪೂರೈಸುವ ದಿವ್ಯ ಮಹಿಮೆ ಇದಕ್ಕಿರುವುದು, ಇದು ವರಪ್ರಸಾದಿ ! (26) ತಮ್ಮ ಉಜ್ಜೀವನಕ್ಕೆ ಉಪಾಯವರಿಯದೆ, ಉಪಾಯಾಂತರಗಳಿಗೆ ವಶವಾಗದೆ,ಸೂಕ್ಷ್ಮವೇದಾರ್ಥಗಳನ್ನರಿತ ಜ್ಞಾನಿಗಳು ಪ್ರತಿದಿನ ಧೂಪ, ದೀಪ, ಪುಷ್ಪ,ತೀರ್ಥ, ಪರಿಕರಗಳನ್ನು ಕೊಂಡು ದಿಕ್ಕು ದಿಕ್ಕುಗಳಿಂದಲೂ ಸಂದಣಿಸಿ ಆಶ್ರಯಿಸುವ ಪರ್ವತ ವೇಂಗಡ!ಬಿಳಿದಾದ ಪಾಂಚಜನ್ಯವನ್ನು ಊದಿದ ಬಾಯನ್ನುಳ್ಳ ಸ್ವಾಮಿಯು ಅಭಿಮಾನಿಸಿ ನೆಲಸಿದ ನೆಲ,ವೇಂಗಡ, (32) ದೊಡ್ಡ ಆನೆಗಳನ್ನು ಹಿಡಿಯಲು ಕುರಪವರಿಂದ ಎಸೆಯಲ್ಪಟ್ಟ ಮಾಣಿಕ್ಯಗಳನ್ನು, ಅವು ಮಿಂಚುವಾಗ ಆಗಸದ ಮಿಂಚೆಂಬ ಭ್ರಾಂತಿಯಿಂದ 'ಮಳೆಯೆಲ್ಲಿ ಶೀಘ್ರವಾಗಿ ಬಂದುಬಿಡುವುದೋ ಎನ್ನುವ ಭಯಾತುರಗಳಿಂದ ಹಾವುಗಳು ಬೇಗನೆ ಹುತ್ತಗಳನ್ನು ಸೇರಿಕೊಳ್ಳುವಂತೆ ಸೊಗಸುವ ವೇಂಗಡ! ದೇವತೆಗಳು ಅಹಮಹಮಿಕೆಯಿಂದ ದೇವನನ್ನು ಸೇವಿಸಲು ಓಡೋಡಿ ಬರುವ ಅಭಿಮಾನ ಸ್ಥಳವೇ ವೇಂಗಡ! (38) ಭೂಮಿಯನ್ನು ಉದ್ಧರಿಸಿದನು ಬೆಟ್ಟವನ್ನು ಮೇಲೆತ್ತಿ ಕಾಪಾಡಿದನು ಭಯಂಕರಾಕಾರನಾಗಿದ್ದ ಕಂಸನನ್ನು ಕೊಂದನು.


ಉಲ್ಲೋಲಕಲ್ಲೋಲವಾದ ಜಲಧಿಯಲ್ಲಿ ಶಯನಿಸಿದನು. ಈ ಮಹಿಮೆಗಳನ್ನೆಲ್ಲ ಭೂಲೋಕದ ಜನ ತಿಳಿದೂ ಇರುತ್ತಾರೆ ತಿಳಿಯದೆಯೂ ಇರುತ್ತಾರೆ. ಆದರೆ ಅವನ ಉತ್ಕರ್ಷವು ಎಲ್ಲರಿಗೂ ತಿಳಿಯುವಂತೆ ಪ್ರಕಾಶಿಸುವುದು ವೇಂಗಡದಲ್ಲಿಯೇ ಎಂದಾಗ ವೇಂಗಡದ ಮಹಿಮೆಗೆ ಸರಿಯುಂಟೆ, ಸಮಾನವುಂಟೆ ? (39) ಹೊಲವನ್ನು ಮೇಯಲು ಬಂದ ಆನೆ, ಬಿಲ್ಲು ಬಾಣಗಳಿಂದ ಸುಸಜ್ಜಿತರಾಗಿ ಪಂಜುಗಳನ್ನು ಊರಿ ಸುತ್ತಾ ಮೇಲೆ ಎರಗಿ ಬರುವ ಕುರವರನ್ನು ಕಂಡು ಭೀತಿಯಿಂದ ಪಲಾಯನ ಮಾಡುತ್ತಿರಲು, ಎದುರಿನ ಆಗಸದಲ್ಲಿ ಉದುರುವ ಉಲ್ಕೆಯು ಅದರ ಕಣ್ಣಿಗೆ ಕುರುವರು ಎಸೆದ ದೊಂದಿಯೋ ಎಂಬ ಭ್ರಾಂತಿಯನ್ನು ಉಂಟು ಮಾಡಿ ಆ ಆನೆ ಮತ್ತು ಭಯದಿಂದ ಮತ್ತೊಂದು ದಿಕ್ಕಿಗೆ ಪಲಾಯನ ಮಾಡು ವುದಂತೆ ವೇಂಗಡದ ಮೇಲೆ ! ಹಿಂದೆ ಹಿರಣ್ಯಕಶಿಪುವನ್ನು ಸಂಹಾರ ಮಾಡಿದ ನಂತರ ಶಾಂತವಾದ ತಾಣವನ್ನು ಆರಿಸಿಕೊಂಡು ಬಂದ ದೇವನು ಈ ಸೌಂದರ್ಯಮಯವಾದ ಪ್ರವೇಶಕ್ಕೆ ಮಾರು ಹೋಗಿ ಇಲ್ಲಿಯೇ ನಿಂತುಬಿಟ್ಟನು.ಅಂತಹ ಸುಂದರವಾದ ಜಾಗ ವೇಂಗಡ ! (40) ಪರಮಪದವನ್ನೇ ಬೀಡಾಗಿ ಉಳ್ಳ ಪರಮಾತ್ಮನು ವೇಂಗಡದ ಸೊಬಗಿಗೆ ಸೋತು ಅದಕ್ಕಿಂತ ಇದೇ ಚೆನ್ನು ಎಂದು ಭಾವಿಸಿ ಇಲ್ಲಿ ನೆಲಸಿದ.

ವೇದ ಪ್ರತಿಪಾದ್ಯನಾದ ಸ್ವಾಮಿಯ ಮಹಿಮೆಯನ್ನರಿಯಲು ಯುಗ ಯುಗಾಂತರಗಳಿಂದಲೂ ಪ್ರಯತ್ನ ನಡೆದೇ ಇದೇ. ಆದರೆ ಅವನ ಶಕ್ತಿ ಸಾಮರ್ಥ್ಯ ಇನ್ನೂ ಒಗಟಾಗಿಯೇ ಉಳಿದಿದೆ. ಇವನ ಸ್ವರೂಪ ಮತ್ತು ನೆಲೆಗಳನ್ನು ಅರಿತವರು ಯಾರು? ವೇಂಗಡದ ಮೇಲೆ ನಿಂತ ಅವನನ್ನು ಅರಿತಿರುವ ನಾವೇ, ಈ ಹಿಂದೆ ತಪಸ್ಸು ಮಾಡಿಯೂ ಅವನನ್ನು ಪಡೆಯದ ಋಷಿಮುನಿಗಳಿಗಿಂತ ಎಷ್ಟೋ ಮೇಲಲ್ಲವೆ? ಆ ಪರಮಾತ್ಮನಾದರೋ ಅವರೆಲ್ಲರಿಗಿಂತ ನಮಗೇ ಸಮೀಪಸ್ಥನೂ ಸರ್ವಸುಲಭನೂ ಆಗಿದ್ದಾನೆ.

- ಮುಂದುವರೆಯುತ್ತದೆ.

# ಶ್ರೀವೇಂಕಟಾಚಲ ಮಹಾತ್ಮ್ಯ

**ತೆಲುಗು ಮೂಲ - ಆಚಾರ್ಯ ಕೆ. ಸರ್ವೋತ್ತಮ ರಾವ್,**
**ಅನುವಾದ - ಶ್ರೀಮತಿ. ಎನ್. ಪಾರ್ವತಿ**





ಹಿಂದಿನ ಸಂಚಿಕೆಯ ನಂತರ.....

ತನಗೆ ಮಂತ್ರೋಪದೇಶವನ್ನು ಮಾಡಿದ ಸದ್ಗುರುವನ್ನು ನೆನೆಸಿಕೊಂಡು ಮನಸಾರೆ ತನ್ನ ಕೃತಜ್ಞತೆಯನ್ನು ಸಲ್ಲಿಸಿದನು. ಅನಂತರ ಬೆಟ್ಟದಿಂದ ಇಳಿದು ತನ್ನ ಮನೆ ಕಡೆ ಮರಳಿದನು. ಅಂದಿನಿಂದ ದಾನಾದಿಗಳನ್ನು ಮಾಡುತ್ತಾ ಸಂತೃಪ್ತಿ ಜೀವನವನ್ನು ನಡೆಸಿದನು ಎಂದು ಸೂತನು ಆತ್ಮಾರಾಮನ ಕಥೆಯನ್ನು ಮುಗಿಸಿದನು.

ಆಗ ಆ ಮುನಿಗಳು ವೈಕುಂಠದಲ್ಲಿನ ಇತರ ಪರ್ವತಗಳ ಮಹಿಮೆಗಳ ಕುರಿತು ಹೇಳುವಿರಾ? ಎಂದು ಶೌನಕಾದಿ ಮುನಿಗಳನ್ನು ವಿನಂತಿಸಿದರು. 17 ತೀರ್ಥಗಳು ಇವೆ ಎಂದು ಹೇಳಿರುವಿರಲ್ಲವೇ? ಆ ತೀರ್ಥಗಳ ಮಹಿಮೆಗಳನ್ನು ಕೂಡ ಆಲಿಸಬೇಕೆಂದು ಜಿಜ್ಞಾಸೆ ಉಂಟಾಗುತ್ತಿದೆ ದಯವಿಟ್ಟು ತಿಳಿಸಿರಿ, ಎಂದು ಕೇಳಲಾಗಿ ಮುಂದಿನ ವೃತ್ತಾಂತವನ್ನು ತಿಳಿಸುತ್ತಾ ಸಾಗಿದರು.

ಮುನಿಗಳೇ, ಕಪಿಲನು ಕರ್ಣಮುನಿಯ ಪುತ್ರನು, ಪಾತಾಳ ವಾಸಿಯಾದ ಆತನು ಸಾಂಖ್ಯವೇದ ಯೋಗಾಭ್ಯಾಸ ಮಾಡಿದ ಪುಣ್ಯಪುರುಷನು. ಆತನು ಶ್ರದ್ಧಾಭಕ್ತಿಯಿಂದ ತದೇಕ ಮನಸ್ಸಿನೊಂದಿಗೆ ಪಾತಾಳಲಿಂಗವನ್ನು ಉಪಾಸಿಸುತ್ತಿರುವಾಗ, ಆ ಲಿಂಗವು ಪಾತಾಳದಿಂದ ಒಮ್ಮೆ ರಸಾತಲ, ತಲಾತಲ, ಸುತಲ, ಅತಲ, ವಿತಲಾದಿ ಲೋಕಗಳನ್ನು ಭೇದಿಸಿ ಭೂತಲದಲ್ಲಿ ಉದ್ಭವಿಸಿತು. ಈ ಲಿಂಗವನ್ನು ದೇವತೆಗಳು ಆರಾಧಿಸಿದರು. ಜನರು ಭಯ ಭಕ್ತಿಗಳಿಂದ ಪೂಜೆಸುತ್ತಿದ್ದರು.

ಈ ಲಿಂಗ ಮತ್ಯಾವುದೂ ಅಲ್ಲ, ಸಗರ ನಂದರಿಗೆ ಸದ್ಗತಿ ಪ್ರಸಾದಿಸಿದ ಭೋಗವತಿಯಿಂದ ಪಾವನವಾದ ಲಿಂಗ. ಕಪಿಲ ಮಹಾಮುನಿ ದರ್ಶಿಸಿದ ಲಿಂಗ. ಪವಿತ್ರ ಭೋಗವತಿಯೊಂದಿಗೆ ಪ್ರತ್ಯಕ್ಷವಾದ ಲಿಂಗ ತೀರ್ಥ ಆಗಿದ್ದರಿಂದ ಆ ಸ್ಥಳಕ್ಕೆ ಕಪಿಲತೀರ್ಥ ಎಂಬ ಹೆಸರು ಬಂತು. ಕಪಿಲ ತೀರ್ಥ ಜಲ ಪ್ರವಾಹವು ಮಾನವರ ಪಾಪನಾಶಿನಿ. ಆ ತೀರ್ಥದಲ್ಲಿ ಸ್ನಾನ ಮಾಡಿ ಜನರು ಕಪಿಲ ಸೇವಿತ ಲಿಂಗದ ಸೇವೆ ಮಾಡುತ್ತಾರೆ.

ಇತರ ತೀರ್ಥಗಳ ಕುರಿತು ಸಹ ಕೇಳಿದ್ದೀರಿ ಅಲ್ಲವೇ? ಕೇಳಿರಿ,

### ಚಕ್ರತೀರ್ಥ

ಈ ತೀರ್ಥವು ಕೂಡ ಮಹಿಮಾನ್ವಿತವಾಗಿದೆ. ಅಹಲ್ಯೆಯನ್ನು ಕಾಮಿಸಿದ ಇಂದ್ರನು ಈ ತೀರ್ಥದಲ್ಲಿಯೇ ಸ್ನಾನ ಮಾಡಿ ಪಾಪ ವಿಮೋಚನೆ ಹೊಂದಿದನು.

### ವಿಷ್ವಕ್ಸೇನತೀರ್ಥ

ಈ ತೀರ್ಥದಲ್ಲಿ ಸ್ನಾನ ಮಾಡುವ ಭೂ ಲೋಕವಾಸಿಗಳ ಪುಣ್ಯವರ್ಧಿಸುತ್ತದೆ. ವರುಣನ ಪುತ್ರನಾದ ವಿಷ್ವಕ್ಸೇನನು ಇಲ್ಲಿಯೇ ತಪಸ್ಸು ಮಾಡಿದ್ದಾನೆ. ಈತನ ತಪಸ್ಸಿಗೆ ಪ್ರಸನ್ನನಾದ ಹರಿಯು ತನ್ನ ಶಂಖ, ಚಕ್ರಾದಿಗಳನ್ನು ಆತನಿಗೆ ಪ್ರಸಾದಿಸಿದ್ದಾನೆ. ಅದಲ್ಲದೆ ತನ್ನ ಪರಿವಾರಕ್ಕೆಲ್ಲ ಆತನನ್ನು ಅಧಿನಾಯಕನಾಗಿ ನೇಮಕ ಮಾಡಿದ್ದಾನೆ. ಆದ್ದರಿಂದ ಈ ತೀರ್ಥಕ್ಕೆ ವಿಷ್ವಕ್ಸೇನತೀರ್ಥ ಎಂದು ಹೆಸರು. ವಿಷ್ವಕ್ಸೇನ ತೀರ್ಥದ ಮೇಲೆ ಪಂಚಾಯುಧ ತೀರ್ಥಗಳು ಇವೆ.

ಆದರ ಮೇಲಿರುವುದು 'ಬ್ರಹ್ಮ ತೀರ್ಥ'. ಆರು ಮಹಾಪಾತಕ ವಿನಾಶಿನಿ. ಅದರ ಮೇಲೆ ಸಪ್ತ ಮುನಿಗಳ ತೀರ್ಥಗಳಿವೆ ಒಂದಕ್ಕಿಂತಲೂ ಒಂದು ಪುಣ್ಯಪ್ರದ ಮತ್ತು ಫಲಪ್ರದವಾಗಿವೆ.

ಈ ತೀರ್ಥಗಳ ಕುರಿತು ತಿಳಿದಿದ್ದ ಒಬ್ಬ ಬ್ರಾಹ್ಮಣನು ಎಲ್ಲಾ ತೀರ್ಥಗಳನ್ನು ದರ್ಶಿಸಲು ಇಚ್ಛಿಸಿದನು.ಕೂಡಲೇ ಹೊರಟನು. ಆತನ ಸುದೃಢ ಕಾಂಕ್ಷೆಯನ್ನು ಈಡೇರಿಸಲು ಹರಿ ಆತನ ಸ್ವಪ್ನದಲ್ಲಿ ಸಾಕ್ಷಾತ್ಕಾರಗೊಂಡನು.

"ವಿಪ್ರವರೇಣ್ಯ,ಬಹಳ ದೂರದ ಪ್ರಾಂತಗಳಲ್ಲಿರುವ ತೀರ್ಥಗಳನ್ನು ದರ್ಶಿಸಲು ಶ್ರಮಪಟ್ಟು ಹೋಗುವೆಯಾ? ಇಲ್ಲಿಯೇ ಹತ್ತಿರದಲ್ಲಿ ಒಂದು ಪುಷ್ಕರಣಿ ಇದೆ. ಅದರಲ್ಲಿಯೇ 17 ತೀರ್ಥಗಳಿವೆ. ಈ ತೀರ್ಥದಲ್ಲಿ ಮುಳುಗೆದ್ದರೆ 17 ತೀರ್ಥಗಳಲ್ಲಿ ಸ್ನಾನ ಮಾಡಿದ ಫಲ ದೊರೆಯುವುದರಲ್ಲಿ ಸಂದೇಹವಿಲ್ಲ" ಎಂದನು.

ನಿದ್ರೆ ಮಾಡುತ್ತಿದ್ದ ಬ್ರಾಹ್ಮಣನು ಎದ್ದು ಹತ್ತಿರದ ಪುಷ್ಕರಣಿಯಲ್ಲಿ ಸ್ನಾನ ಮಾಡಿ ಸಕಲ ಸಿದ್ಧಿಗಳನ್ನು ಸಂಪಾದಿಸುತ್ತೇನೆ ಎಂದು ಹೊರಟನು. ತಾನಂದುಕೊಂಡಂತೆ ಪುಷ್ಕರಣಿಯಲ್ಲಿ ಪವಿತ್ರ ಸ್ನಾನ ಮಾಡಿ, ಸಕಲ ಸಿದ್ಧಿಯನ್ನು ಪಡೆದಿರುವೆನೆಂದು ಹೇಳುತ್ತಾ ಇನ್ನೇಕೆ ತಿರುಮಲಗಿರಿ? ಎಂದುಕೊಂಡನು. ತಿರುಮಲ ಗಿರಿಯಲ್ಲಿ ಮೂರು ಕೋಟಿ ತೀರ್ಥಗಳಿವೆಯೆಂದು ಹೇಳುತ್ತಾ ತೀರ್ಥ ಮಹಾತ್ಮೆಯನ್ನು ಸಮಾಪ್ತಿಗೊಳಿಸಿದನು.

ಮುನಿವರ್ಯರೇ! ವೆಂಕಟಾದ್ರಿಯು ದ್ವಾಪರಯುಗದಿಂದಲೇ ಪ್ರಸಿದ್ಧವಾಗಿರುವ ಕ್ಷೇತ್ರ. ಕುರುಕ್ಷೇತ್ರ ಯುದ್ಧವು ನಿಶ್ಚಯವಾದಾಗ ಬಲರಾಮನು ಯಾವುದೇ ಪಕ್ಷವನ್ನು ವಹಿಸದೇ ತೀರ್ಥಯಾತ್ರೆಗೆ ತೆರಳಿದನು.

"ಎಷ್ಟೋ ಪುಣ್ಯಕ್ಷೇತ್ರಗಳನ್ನು ದರ್ಶಿಸಿ ತಿರುಮಲೆಯಲ್ಲಿ ವೆಂಕಟಾದ್ರಿಯ ಶಿಖರ ದರ್ಶನವನ್ನು ಮಾಡಿ ಸಕಲ ತೀರ್ಥ ಯಾತ್ರಾ ಫಲ ಸಿಕ್ಕಿದೆ ಎಂದು ಸಂತೃಪ್ತಿಗೊಂಡನು ಎಂಬುದನ್ನು ನಾನೂ ಕೇಳಿದ್ದೇನೆ". ಅದಲ್ಲದೆ ಪಾಂಡವರು ಜೂಜಿನಲ್ಲಿ ಸೋತು ಅರಣ್ಯವಾಸಕ್ಕೆ ಸಿದ್ದರಾದಾಗ ಶ್ರೀಕೃಷ್ಣನು ಅವರೊಂದಿಗೆ ಹೀಗೆ ಹೇಳಿದನು,

"ಪಾಂಡುರಾಜ ಪುತ್ರರೇ! ನೀವು ಬಲಹೀನರಲ್ಲ, ಪ್ರಬಲರು. ಕರ್ಮ ಫಲದಿಂದ ನಿಮಗೆ ಉಂಟಾಗಿರುವ ಅರಣ್ಯವಾಸದಿಂದ ನಿಮಗೆ ಒಳಿತೇ ಆಗುತ್ತದೆ. ಅರಣ್ಯವಾಸ, ಅಜ್ಞಾತವಾಸದ ನಂತರ ಹಸ್ತಿನಾಪುರ ನಿಮಗೆ ದಕ್ಕುತ್ತದೆ. ಇದರಲ್ಲಿ ಯಾವುದೇ ಸಂದೇಹವಿಲ್ಲ. ಅರಣ್ಯವಾಸ ಮಾಡುವ ಸಮಯದಲ್ಲಿ ನೀವು ವೆಂಕಟಗಿರಿಗೆ ಹೋಗಿ, ಅಲ್ಲಿ ಪಾವನ ತೀರ್ಥಗಳಲ್ಲಿ ಸ್ನಾನ ಮಾಡಿ ಅಲ್ಲಿ ಜಪ ತಪಾದಿಗಳನ್ನು ನಡೆಸಿ ನಿಮ್ಮ ಪಾಪಗಳೆಲ್ಲ ನಶಿಸುತ್ತವೆ. ನಂತರ ನೀವು ಕೌರವರನ್ನು ಸುಲಭವಾಗಿ ಜಯಿಸಬಹುದು" ಎಂದು ಹಿತ ನುಡಿದನು.

ಶ್ರೀಕೃಷ್ಣನ ಸಲಹೆ ಮೇರೆಗೆ ಪಾಂಡವರು ವೆಂಕಟಾದ್ರಿಗೆ ಬಂದರು ಅಲ್ಲಿಯೇ ಸ್ನಾನ ಪಾನಾದಿಗಳನ್ನು ಮಾಡುತ್ತಾ ತಮ್ಮ ಅರಣ್ಯವಾಸದ ಎಷ್ಟೋ ವರ್ಷಗಳನ್ನು ಕಳೆದರು.

ಅವರ ನಿಷ್ಠೆಗೆ ಸಂತೃಪ್ತಿಗೊಂಡ ವೆಂಕಟೇಶ್ವರನು ಧರ್ಮರಾಜನ ಕನಸ್ಸಿನಲ್ಲಿ ಸಾಕ್ಷಾತ್ಕರಿಸಿ "ಓ ಮಹಾರಾಜ! ನೀನು ನಿರಾಯಾಸವಾಗಿ ವಿರೋಧಿಗಳನ್ನು ಸಂಹರಿಸುತ್ತೀರಿ. ಅದಲ್ಲದೆ ವಿಸ್ತಾರವಾದ ಸಾಮ್ರಾಜ್ಯಕ್ಕೆ ಅಧಿಪತಿಯಾಗುತ್ತೀಯ" ಎಂದು ವರವನ್ನು ಇತ್ತನು. ಈ ಸ್ವಪ್ನ ವೃತ್ತಾಂತವನ್ನು ಧರ್ಮರಾಜನು ತನ್ನ ಸೋದರರಿಗೆ ಮತ್ತು ದ್ರೌಪದಿಗೆ ವಿಷದವಾಗಿ ತಿಳಿಸಿ, ವೆಂಕಟಾದ್ರಿಯಿಂದ ತೆರಳಿ ಉಳಿದ ಅರಣ್ಯವಾಸವನ್ನು ಮತ್ತು ಅಜ್ಞಾತವಾಸವನ್ನು ಪೂರ್ತಿ ಮಾಡಿ ಸಮರದಲ್ಲಿ ಶತ್ರುಗಳನ್ನು ಹತಗೈದು ಶ್ರೀ ಕೃಷ್ಣ ಪರಮಾತ್ಮನ ಸೇವೆಯನ್ನು ಮಾಡುತ್ತಾ ಕಾಲ ಕಳೆದರು.

"ಮುನಿಗಳೇ!ಪಾಂಡವರು ಅರಣ್ಯವಾಸ ಕಾಲದಲ್ಲಿ ವೆಂಕಟಾದ್ರಿಯಲ್ಲಿ ತೀರ್ಥಸ್ನಾನ ಮಾಡಿದ್ದರಿಂದ ಆ ತೀರ್ಥಗಳಿಗೆ ಪಾಂಡವ ತೀರ್ಥ" ಎಂಬ ಹೆಸರು ಬಂದಿದೆ. ಆ ತೀರ್ಥಗಳ ಮಹಾತ್ಮೆಗಳನ್ನು ಆ ಕ್ಷೇತ್ರ ಪಾಲಕನೇ ತಿಳಿಸಿದ್ದಾನೆ.

ವೆಂಕಟಾದ್ರಿಯಲ್ಲಿ ಪಾಂಡವ ತೀರ್ಥಗಳೊಂದೇ ಅಲ್ಲದೆ ಇನ್ನು ಕೆಲವು ತೀರ್ಥಗಳಿವೆ. ಸ್ವಾಮಿ ಪುಷ್ಕರಿಣಿ ಒಳಗೆ ಹೂತು ಹೋಗಿರುವ ಜರಾಹರ, ವಲಿಘ್ನ, ರಸಾಯನ ಎಂಬ ತೀರ್ಥಗಳಿವೆ. ಅಲ್ಲದೇ ಅಲ್ಲಿಯೇ ಹತ್ತಿರದಲ್ಲಿ ವೈಕುಂಠ ಪರ್ವತ ಗುಹೆ ಕೂಡ ಇದೆ.

ಅಷ್ಟಲೋಹಖಾತ ಎಂಬ ಕಣಿವೆ ಕೂಡ ಇದೆ. ಆದರೆ, ಇವೆಲ್ಲವೂ ಸಾಮಾನ್ಯ ಜನರ ದರ್ಶನಕ್ಕೆ ದುರ್ಲಭವಾಗಿದೆ. ಸ್ವಾಮಿ ಪುಷ್ಕರಿಣಿಯಿಂದ 22 ಬಾಣಪ್ರಯೋಗ ದೂರದವರೆಗೂ 'ಮಾಯತೀರೋಹಿತ' ಶಕ್ತಿ ಆವರಿಸಿದೆ. ತಪಸ್ವಿಗಳು ಕೂಡ ಆ ತೀರ್ಥಗಳ ಹತ್ತಿರ ಸುನಾಯಾಸವಾಗಿ ಹೋಗಲಾರರು.

ಇಂತಹ ವೆಂಕಟಾಚಲದಲ್ಲಿ ಅಂಧರು, ಮೂಕರು, ಕಿವುಡರು, ಸಂತಾನಪ್ರಾಪ್ತಿ ಹೊಂದದವರು, ಧನಹೀನರು ಶ್ರದ್ಧೆಯಿಂದ ಹರಿ ಒಬ್ಬನೇ ಸರ್ವಸ್ವ ಎಂದು ಮನಸಾರೆ ನಿಶ್ಚಯಿಸಿ ವಿಶ್ವಾಸ ಪಾತ್ರರಾದವರಿಗೆ ದೈವಗತವಾದ ಎಲ್ಲಾ ಕಷ್ಟಗಳು ದೂರವಾಗುತ್ತವೆ. ಹಾಗೆಯೇ, ಸುಖಪ್ರಾಪ್ತಿಯೂ ಆಗುತ್ತದೆ.

ಈ ಪರ್ವತಕ್ಕೆ ಶಾಶ್ವತವಾದ ಯಾವುದೇ ಒಂದು ಹೆಸರಿಲ್ಲ. ಯುದ್ಧಭೇದಗಳ ಕಾರಣದಿಂದ ಈ ಗಿರಿ ಶಿಖರಗಳಿಗೆ ಹಲವಾರು ಹೆಸರುಗಳಿವೆ.

ಈ ತಿರುಮಲೆ ಬೆಟ್ಟವು ಸಾಮಾನ್ಯವಾದ ಶೈಲ ಪರ್ವತವಲ್ಲ. ಒಮ್ಮೆ ಶ್ರೀನಿವಾಸ ಸ್ವರೂಪವಾದರೆ, ಮತ್ತೊಮ್ಮೆ ಕನಕಾದ್ರಿ, ಇನ್ನೊಮ್ಮೆ ಜ್ಞಾನಾದ್ರಿ ಕೆಲವರಿಗೇನೋ ಸರ್ವರೂಪವೇ ಆಗಿದೆ.

ಇನ್ನೂ ಕೆಲವರಿಗೆ ಅಲಂಕಾರ ಶೋಭಿತ. ಕಲಿಯುಗದವರಿಗೇನೋ ಕೇವಲ ಶೈಲಾಕೃತಿ. ಬೆಟ್ಟದ ಮಹಿಮೆ ಯನ್ನು ವರ್ಣಿಸಲು ನಾನು ಅಶಕ್ತನು. ಆದಿಶೇಷನೊಬ್ಬನೇ ಸಮರ್ಥನು ಎಂದು ಸೂತರು ಹೇಳಲಾಗಿ ಶೌನಕಾದಿ ಮುನಿಗಳು "ಮಹಾತ್ಮ! ಶ್ರೀವೆಂಕಟ ಗಿರಿಯ ಮಹಾವಿಚಿತ್ರ ಮಹಿಮೆಗಳನ್ನು ಕೇಳಬೇಕೆನಿಸುತ್ತಿದೆ, ಹೇಳಿರೆಂದು" ಭಿನ್ನಹ ಮಾಡಿದರು.

- ಮುಂದುವರೆಯುತ್ತದೆ.



## ಮೇ ತಿಂಗಳ

# ರಾಶಿ ಫಲಗಳು

ಮೂಲ-ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ
ಅನುವಾದ- ಕೆ.ಎನ್.ಎಸ್



**ಮೇಷ**

ಸಮಾಜದಲ್ಲಿ ಗಣ್ಯ ವ್ಯಕ್ತಿಗಳಿಂದ ಸನ್ಮಾನ, ವಿದ್ಯಾರ್ಥಿಗಳು ಶ್ರಮವಹಿಸುವುದರಿಂದ ವಿದ್ಯೆ ವಿಷಯಗಳಲ್ಲಿ ಗುರುತಿಸಲ್ಪಡುವುದು. ವೃತ್ತಿ-ವ್ಯವಹಾರಗಳಲ್ಲಿ ಆದಾಯವು ಸಾಮಾನ್ಯ ಪರ್ವತ-ತಂಪು ಪ್ರದೇಶಗಳಲ್ಲಿ ವಿಹರಿಸುವುದು. ವಾಹನ ಸೌಖ್ಯ ಒದಗುವುದು, ಕುಟುಂಬ ಹಿರಿಯರ ಆರೋಗ್ಯದ ಮೇಲೆ ಶ್ರದ್ಧೆ ವಹಿಸುವಿರಿ. ಯತ್ನಿಸಿದ ಕಾರ್ಯಗಳು ಅನುಕೂಲಕರ.

**ವೃಷಭ**

ಆರ್ಥಿಕ ಸ್ವಾವಲಂಬನೆ ಕೈಗೂಡುವುದು. ಅನೇಕ ಮಾರ್ಗಗಳಿಂದ ಆದಾಯ ಹರಿದು ಬರಲಿದೆ. ಲೇವಾದೇವಿ, ವ್ಯಾಪಾರಗಳು, ವೃತ್ತಿ ವಿಷಯಗಳಲ್ಲಿ ಆರ್ಥಿಕವಾಗಿ ಮುಂದೆ ಸಾಗುವಿರಿ. ಎಲ್ಲದರಲ್ಲೂ ಜಯ. ಕುಟುಂಬ ಸದಸ್ಯರೊಂದಿಗೆ ಹೊಂದಾಣಿಕೆಯಿಂದಿರುವಿರಿ.

**ಮಿಥುನ**

ಊಹಿಸದ ಲಾಭವುಂಟಾಗಲಿದೆ. ಪ್ರಶಂಸೆಗಳನ್ನು ಹೊಂದುವಿರಿ. ವ್ಯಾಪಾರವು ಸಹಾ ಲಾಭದಾಯಕವಾಗಿರುತ್ತದೆ ಮತ್ತು ಆದಾಯ ಅವಕಾಶಗಳು ಬೆಳವಣಿಗೆಯಾಗುತ್ತವೆ. ಪದೋನ್ನತಿ ಇಲ್ಲವೇ ವೇತನಗಳು ಬೆಳೆಯುವ ಅವಕಾಶಗಳು ಸಹಾ ಇರುತ್ತವೆ.

**ಕರ್ಕಾಟಕ**

ಹಿಂದೆ ಮಾಡಿದ ಸಾಲದಲ್ಲಿ ಬಹಳಷ್ಟು ಭಾಗವನ್ನು ತೀರಿಸಿಕೊಳ್ಳುವಿರಿ. ಅಷ್ಟಮದಲ್ಲಿನ ಶನಿ ಸಂಚಾರದಿಂದಾಗಿ ಪ್ರತಿಬಂಧಕಗಳು, ಇಷ್ಟವಿಲ್ಲದ ಕೆಲಸಗಳನ್ನು ಮಾಡಬೇಕಾಗಿ ಬಂದರೂ ಎಲ್ಲವನ್ನೂ ಅತಿಕ್ರಮಿಸುವಿರಿ

**ಸಿಂಹ**

ಅಜೀರ್ಣ , ರಕ್ತ ಪ್ರಸರಣ ಸಮಸ್ಯೆಗಳು ಮತ್ತು ಮೂಲವ್ಯಾಧಿ ನಿಮ್ಮನ್ನು ತೊಂದರೆಗೀಡು ಮಾಡಬಹುದು. ನಿರುತ್ಸಾಹ ಹಾಗೂ ಆಲಸ್ಯವನ್ನು ತೊಲಗಿಸಲು ಯೋಗಾಭ್ಯಾಸವನ್ನು ಮಾಡುವುದು ಒಳಿತು.

**ಕನ್ಯ**

ಎಲ್ಲಾ ಪ್ರಯತ್ನಗಳಲ್ಲಿ ಜಯ ಸಾಧಿಸುವಿರಿ. ವ್ಯಾಪಾರ ವೃದ್ಧಿಯಾಗಲಿದೆ. ಜ್ಞಾನವೃದ್ಧಿಯಾಗಲಿದೆ. ನೀವು ಅಧ್ಯಯನದಲ್ಲಿ ಪುರೋಗತಿ, ವಾಹನ ಸಂಪದ ಮತ್ತು ವಿಲಾಸಮಯವಾದ ಜೀವನವನ್ನು ಸೌಕರ್ಯಯುತವಾದ ಜೀವನ ಶೈಲಿ ನಿಮ್ಮದಾಗಲಿದೆ.

**ತುಲಾ**

ತಂದೆಗೆ ಅನಾರೋಗ್ಯದ ಸೂಚನೆ. ಸ್ವಸ್ಥಾನ ಬಿಟ್ಟು ಬೇರೆಡೆ ವಾಸಿಸುವ ಅಗತ್ಯ. ಕುಟುಂಬ ಶ್ರೇಯಸ್ಸನ್ನು ದೃಷ್ಟಿಯಲ್ಲಿಟ್ಟುಕೊಂಡು ಕಲಹಗಳನ್ನು ನಿವಾರಿಸಿಕೊಳ್ಳಬಿದ್ದೀರಿ. ಕುಟುಂಬದ ಒಳಿತಿಗಾಗಿ ಉನ್ನತ ಆಶಯಗಳಿಗೆ ಮುನ್ನುಡಿ ಹಾಡುವಿರಿ.

**ವೃಶ್ಚಿಕ**

ಆರೋಗ್ಯ ಸಾಮಾನ್ಯವಾಗಿರಲಿದೆ. ಮಕ್ಕಳೊಂದಿಗೆ ಸಮಸ್ಯೆಗಳು ಕುಟುಂಬ ಸದಸ್ಯರೊಂದಿಗೆ ವಾದಗಳಿಗೆ ಇಳಿಯದಿರಿ. ಕೆಟ್ಟ ಸಹವಾಸಗಳಿಂದ ದೂರವಿರಿ. ವಿದ್ಯಾರ್ಥಿಗಳ ಪ್ರಯತ್ನಗಳು ಕೈಗೂಡದೇ ಹೋಗಬಹುದು.

**ಧನಸ್ಸು**

ಆದಾಯ ಸ್ಥಿರಾಸ್ತಿಗಳು ಇಮ್ಮಡಿ ಮುಮ್ಮಡಿಯಾಗಿ ಬೆಳೆಯಲಿವೆ. ಧನವಸ್ತ್ರ ಲಾಭಗಳು, ಇಷ್ಟಕಾರ್ಯ ಸಿದ್ಧಿಯಾಗಲಿದೆ. ನಿಮ್ಮ ಶ್ರಮಕ್ಕೆ ತಕ್ಕ ಫಲ ಸಿಗಲಿದೆ. ಕೆಲಸ ದೊರೆಯಲಿದೆ. ವೃತ್ತಿ ವಿಷಯಗಳು ಅನುಕೂಲಕರವಾಗಿರಲಿವೆ.

**ಮಕರ**

ವೃತ್ತಿ ಉದ್ಯೋಗಗಳಲ್ಲಿ ಪೂರ್ತಿ ಸಂತೃಪ್ತಿ. ಆರ್ಥಿಕ ಪರಿಪುಷ್ಟಿ. ಹೊಸ ಮಾರ್ಗಕ್ಕೆ ಶ್ರೀಕಾರ ಹಾಡುವಿರಿ. ಧೈರ್ಯ ಸಾಹಸಗಳನ್ನು ಪ್ರದರ್ಶಿಸಿ ಎಲ್ಲರ ಪ್ರಶಂಸೆಗಳಿಗೊಳಗಾಗುವಿರಿ. ಸೋಂಕು ಕಾಯಿಲೆ, ಅಗ್ನಿ ಸಂಬಂಧ ತೊಂದರೆಗಳಿಗೆ ಅಸ್ವಸ್ಥಕ್ಕೆ ಗುರಿಯಾಗುವ ಅವಕಾಶಗಳಿವೆ.

**ಕುಂಭ**

ಕ್ರಮೇಣ ಸ್ವಯಂಕೃಷಿಯಿಂದ ಸ್ಥಿರತೆಯನ್ನು ಸಾಧಿಸುವಿರಿ. ಗತ ಕಾಲದಿಂದ ಗುಣಪಾಠಗಳನ್ನು ಕಲಿತುಕೊಂಡು ವಿಶ್ರಾಂತಿಗಾಗಿ ಯೋಗಾಭ್ಯಾಸ ಮಾಡುತ್ತಾ ಏಕಾಗ್ರತೆಯನ್ನು ಸಾಧಿಸುತ್ತಾ ಸುಖ ಜೀವನವನ್ನು ನಡೆಸುವಿರಿ. ಆಧ್ಯಾತ್ಮಿಕವಾಗಿ ಜೀವಿಸುವಿರಿ.

**ಮೀನ**

ದೂರ ಪ್ರದೇಶಗಳಿಗೆ ಹೋಗಬೇಕಾಗಿ ಬರಬಹುದು. ಗುರುಬಲವಿಲ್ಲದಿದ್ದರೂ ಅದ್ಭುತವಾದ ವಾಗ್ಧೋರಣೆಯಿಂದ ಇತರರನ್ನು ಪ್ರಭಾವಿತರನ್ನಾಗಿ ಮಾಡಬಲ್ಲಿರಿ. ಮುಖವು ಕಳಹೀನವಾಗಿರುವುದು ಮತ್ತು ಧನವ್ಯಯ ಅಧಿಕವಾಗುವುದು.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

– ಡಾ. ಅನಸೂಯ ಎಸ್.ರಾಜೀವ್

**1. ರಂಗೋಲಿ ಹಾಕುವುದರ ಉದ್ದೇಶವೇನು?**

**ಉತ್ತರ:** ಬದುಕಿನ ಖುಷಿಯನ್ನು,ಸಂತೋಷವನ್ನು, ಸೌಭಾಗ್ಯವನ್ನು ಮಂಗಳಕರ ಶುಭ ಸನ್ನಿವೇಶವನ್ನು ಹೇಳುವ ಲಾಲಿತ್ಯಪೂರ್ಣ ಕಲಾಕೌಶಲವೇ ರಂಗೋಲಿ. ಇದು ದೇವರ ಆಗಮನಕ್ಕೆ ಕಲಾಹ್ವಾನ ಹಾಗೂ ಸಂಪ್ರದಾಯದ ಸಂಕೇತವಾಗಿದೆ. ರಂಗ ಎಂದರೆ ಬಣ್ಣ, ವಲ್ಲಿ ಎಂದರೆ ಬಳ್ಳಿ. ಮಹಿಳೆಯರಿಗೆ ಮನೆಕೆಲಸಕ್ಕಾಗಿ ದಿನವಿಡೀ ಶ್ರಮ ಪಡಬೇಕಾವುಗುವುದು. ಅದಕ್ಕೆ ಬೇಕಾದ ಹುರುಪನ್ನು ಮೂಡಿಸಲು ಪೂರ್ವಸಿದ್ಧತೆಯಾಗಿ ನಮ್ಮ ಪೂರ್ವಿಕರು ಈ ರಂಗೋಲಿ ಬರೆಯುವ ಆಚರಣೆಯನ್ನು ವಿಧಿಸಿರುತ್ತಾರೆ. ಹಿಂದೆ ಅಕ್ಕಿಹಿಟ್ಟಿನ ರಂಗೋಲಿಗಳನ್ನು ಹಾಕುತ್ತಿದ್ದರೆ ಇರುವೆಗೆ ಕ್ರಿಮಿಕೀಟಗಳಿಗೆ ಆಹಾರವಾಗಲಿ ಎಂಬ ಉದ್ದೇಶ. ಈಗ ರಂಗೋಲಿ ಪುಡಿಗಳು ಚಾಲ್ತಿಯಲ್ಲಿವೆ. ರಂಗೋಲಿ ಹಾಕುವುದರಿಂದ ಲಕ್ಷ್ಮೀದೇವಿಯನ್ನು ಸ್ವಾಗತಿಸುವುದೆಂದರ್ಥ. ಪ್ರತಿನಿತ್ಯ ಬೆಳಿಗ್ಗೆ ರಂಗೋಲಿ ಬರೆಯುವ ಗೃಹಿಣಿಯರ ಹಸ್ತಗಳಲ್ಲಿ ಲಕ್ಷ್ಮಿಯು ನೆಲೆಸಿರುತ್ತಾಳೆ. ರಾತ್ರಿ ದುಷ್ಟ ಶಕ್ತಿಗಳ ಸಂಚಾರವಿರುವುದರಿಂದ ಮನೆ ಬಾಗಿಲಿನಲ್ಲಿ ರಂಗೋಲಿ ಹಾಕಿದರೆ ದುಷ್ಟ ಶಕ್ತಿಗಳ ಬಾಧೆ ನಿವಾರಣೆಯಾಗುತ್ತದೆ. ಹೊಸ್ತಿಲ ಮೇಲಿನ ಎರಡೂ ಬದಿಗಳಲ್ಲಿ ಉದ್ದಗೆರೆ ಎಳೆಯುವುದು ಲಕ್ಷ್ಮೀ ಪ್ರವೇಶವಾಗಲಿ ಎಂಬುದರ ಸಂಕೇತ. ಹೊಸ್ತಿಲ ಕೆಳಗೆ ಎಳೆಯುವ ಅಡ್ಡಗೆರೆಗಳು ಒಳಗೆ ಬಂದ ಲಕ್ಷ್ಮೀ ಹೊರಗೆ ಹೋಗಬಾರದೆಂಬುದರ ಸಂಕೇತ. ಹೊಸ್ತಿಲ ಇಕ್ಕೆಲಗಳಲ್ಲಿ ಆರು ಉದ್ದ ಎಳೆಗಳನ್ನು ಅಥವಾ ನಾಲ್ಕು ಗೆರೆಗಳನ್ನೂ ಬರೆಯುತ್ತಾರೆ. ಕಾರಣ ಅರಿಷಡ್ವರ್ಗಗಳು ನಮ್ಮಲ್ಲಿ ಸೇರಬಾರದೆಂಬುದು ಹಾಗೂ ಚತುರ್ವಿಧ ಫಲಪುರುಷಾರ್ಥಗಳ ಸಂಕೇತವೆಂದು ತಿಳಿಯಬೇಕು. ಮನೆಯ ಮುಂದೆ ಹೊಸ್ತಿಲ ಕೆಳಗೆ ಅಡ್ಡ ಎಳೆಗಳು ಕೆಳಗೆ ಮಾವಿನ ಎಲೆಗಳ ಚಿತ್ರ ಬರೆಯುತ್ತಾರೆ. ಕಾರಣವೆಂದರೆ ಮನೆಯ ಮುಂದೆ ನಿತ್ಯವೂ ತೋರಣ ಕಟ್ಟುವುದು ಮಂಗಳಕರ. ಆದರೆ ಅದು ಆಚರಣೆಯಲ್ಲಿ ಕಷ್ಟ ಸಾಧ್ಯ. ಹಾಗಾಗಿ ಈ ರೀತಿ ಎಲೆಗಳ ಚಿತ್ರ ಬರೆಯುವುದಾಗಿದೆ. ಬಿಳಿ ರಂಗೋಲಿ ಗಂಡೆಂದೂ ಕೆಮ್ಮಣ್ಣು ಹೆಣ್ಣೆಂದೂ ಎರಡನ್ನೂ ಬಳಸುವುದನ್ನು ನಾವು ಗಮನಿಸಬಹುದು.

**2.ಮನೆ ಮುಂದೆ ಸ್ವಸ್ತಿಕ್ ಚಿಹ್ನೆಯನ್ನು ಬರೆದಿರುತ್ತಾರೆ. ಕಾರಣವೇನು?**

**ಉತ್ತರ:** ಶಿವಶಕ್ತಿಯ ಪ್ರತೀಕವಾದ ಈ ಸ್ವಸ್ತಿಕ್ ಚಿಹ್ನೆಯು ಅತ್ಯಂತ ಶುಭ ಸೂಚಕವಾಗಿರುತ್ತದೆ. ಇದು ದುಷ್ಟ ಶಕ್ತಿಗಳಿಂದ ನಮ್ಮನ್ನು ರಕ್ಷಿಸುತ್ತದೆ. ಈ ಸ್ವಸ್ತಿಕ್ ಚಿಹ್ನೆಯನ್ನು ಮನೆಯ ಮುಂಬಾಗಿಲ ಮೇಲೆ ಸಿಂಧೂರ ವರ್ಣದಲ್ಲಿ 9x9 ಇಂಚು ದೊಡ್ಡದಾಗಿ ಬರೆಯುವುದರಿಂದ ಋಣಾತ್ಮಕ ಶಕ್ತಿಗಳನ್ನು ಮನೆಯ ಒಳಗೆ ಬಿಡದೆ ಮನೆಯ ವಾಸ್ತು ದೋಷವನ್ನು ಸರಿ ಮಾಡುತ್ತದೆ. ಪರಮಾತ್ಮನ ಓಂ ಶಬ್ದದ ಕಂಪನಗಳು ನೇರವಾಗಿ ಸಾಗಿ ಬಲಕ್ಕೆ ತಿರುಗುತ್ತದೆ. ತನ್ನ ಕೇಂದ್ರದ ಅಕ್ಷದ ಮೇಲೆ ಹಾಗೂ ನಾಲ್ಕೂ ದಿಕ್ಕುಗಳಲ್ಲಿ ಅದು ಸುತ್ತುತ್ತಿರುತ್ತವೆ. ಈ ಭ್ರಮಣ ಕಂಪನ ಗತಿ ಮತ್ತು ತಿರುಗುವಿಕೆಯ ಆಧಾರದ ಮೇಲೆ ಸ್ವಸ್ತಿಕ್ ರೂಪುಗೊಳ್ಳುತ್ತದೆ. ಈ ಸ್ವಸ್ತಿಕವೇ ಓಂಕಾರದ ಅಸ್ಮಿತಾ ಲೋಕವಾಗಿದೆ. ಹಾಗಾಗಿ ಸ್ವಸ್ತಿಕ್ ಚಿಹ್ನೆಯನ್ನು ಬರೆದು ಪೂಜಿಸುವುದರಿಂದ ಸದಾ ಶುಭಫಲಗಳುಂಟಾಗುತ್ತವೆ.

**3.ಅಷ್ಟಮಿ ದಿನದಿಂದ ಔಷಧ ತೆಗೆದುಕೊಳ್ಳಲು ಶುರುಮಾಡಿದರೆ ರೋಗ ಬೇಗ ಗುಣವಾಗುತ್ತದೆ ಎಂದು ಹೇಳುತ್ತಾರೆ. ಇದಕ್ಕೆ ಕಾರಣವೇನು?**

**ಉತ್ತರ :** ಅಷ್ಟಮಿ ದಿನ ಸೂರ್ಯ ಮತ್ತು ಚಂದ್ರರು ಒಬ್ಬರಿಗೊಬ್ಬರು ಎದುರುಬದುರಿರುತ್ತಾರೆ. ಅಂದರೆ ಸೂರ್ಯ ಚಂದ್ರರು 120 ಡಿಗ್ರಿ ಕೋನಗಳ ಅಂತರದಲ್ಲಿರುತ್ತಾರೆ. ಆಗ ಗ್ರಹಣಶಕ್ತಿ ವೇಗವಾಗಿರುತ್ತದೆ. ಅಂದು ಅಡ್ರಿನಲ್ ಸ್ರವಿಕೆಯೂ ಸಾಧಾರಣವಾಗಿರುತ್ತದೆ. ಹಾಗಾಗಿ ಅಷ್ಟಮಿ ದಿನ ಔಷಧಿ ತೆಗೆದುಕೊಳ್ಳುವುದರಿಂದ ಬೇಗ ಔಷಧಿಯನ್ನು ದೇಹವು ಗ್ರಹಿಸುತ್ತದೆ. ರೋಗ ವಾಸಿಯಾಗುತ್ತದೆ.

**4. ಅರಳಿಕಟ್ಟೆ ಸುತ್ತುವುದರಿಂದ ಮಕ್ಕಳಾಗುತ್ತದೆ ಎಂಬ ಹೇಳಿಕೆಗೆ ಕಾರಣವೇನು?**

**ಉತ್ತರ :** ಅರಳಿಕಟ್ಟೆಯನ್ನು ಬೆಳಿಗ್ಗೆ ಮುಂಚೆ ಎದ್ದು ಸ್ನಾನ ಮಾಡಿ ಒದ್ದೆ ಬಟ್ಟೆಯನ್ನು ಸುತ್ತುವುದರಿಂದ ಸುಮಾರು ಒಂದೂವರೆ ತಿಂಗಳು ಹಾಗೆ ಮಾಡಿದರೆ ಮಕ್ಕಳಾಗುವುದು. ಕಾರಣವೆಂದರೆ ಬೆಳಿಗ್ಗೆ ಸೂರ್ಯೋದಯಕ್ಕೆ ಮುನ್ನ ಸೂರ್ಯನ ಅಲ್ಟ್ರಾವೈಲೆಟ್ ಕಿರಣಗಳು ನೇರವಾಗಿ ಬೀಳುವುದರಿಂದ ಅಶ್ವತ್ಥ ವೃಕ್ಷದಲ್ಲಿ ಆ ಕಿರಣಗಳ ಬೀಳುವಿಕೆಯಿಂದ ಒದ್ದೆ ಬಟ್ಟೆಯ ಮೂಲಕ ಹೆಣ್ಣಿನ ಗರ್ಭಕೋಶ ಹಾಗೂ ಗಂಡಿನ ಜನನಾಂಗಗಳನ್ನು ಶುದ್ಧ ಮಾಡುತ್ತವೆ. ಹಾಗಾಗಿ ಮಕ್ಕಳಾಗುವ ಸಾಧ್ಯತೆ ಹೆಚ್ಚು.

**5. ದೇವರಿಗೆ ಪ್ರದಕ್ಷಿಣೆ ಹಾಕುವುದೇಕೆ?**

**ಉತ್ತರ :** ದೇವರು ಕೇಂದ್ರಬಿಂದು. ದೇವರಿಗೆ ನಾವು ಪ್ರದಕ್ಷಿಣೆ ಹಾಕುವುದರಿಂದ ದೇವರಿಗೆ ನಾವೆಲ್ಲ ಹತ್ತಿರವಾಗಿ ಸಮವಾಗಿರುತ್ತೇವೆ ಎಂದರ್ಥ. ಅವನ ಕೃಪೆ ನಮ್ಮ ಮೇಲೆ ಸಮನಾಗಿ ಹರಿಯುತ್ತದೆ. ಬಲಗಡೆ ಪವಿತ್ರವಾದ್ದರಿಂದ ನಾವು ಬಲಗಡೆಯಿಂದ ಪ್ರದಕ್ಷಿಣೆ ಮಾಡಬೇಕು. ದೇವರಿಗೆ ಪ್ರದಕ್ಷಿಣೆ ಹಾಕಿದ ನಂತರ ನಾವೂ ನಮ್ಮ ಸುತ್ತಸುತ್ತಿ ನಮಸ್ಕರಿಸುತ್ತೇವೆ. ಈ ಆತ್ಮಪ್ರದಕ್ಷಿಣೆಯ ಅರ್ಥವೆಂದರೆ "ಅಹಂ ಬ್ರಹ್ಮಾಸ್ಮಿ" ಎಂಬೂದರ ಸಂಕೇತ. ಪ್ರ ಎಂದರೆ ಸಮಸ್ತ ಪಾಪಗಳ ವಿನಾಶಕ್ಕೆ ಸೂಚಕ, ದ ಎಂದರೆ ಬೇಡಿಕೆಗಳು ಈಡೇರುವುದೆಂಬ ಭಾವನೆ, ಕ್ಷಿ ಎಂದರೆ ಮುಂದೆ ಬರುವ ಜನ್ಮಗಳ ಕ್ಷಯವನ್ನು ಸೂಚಿಸುತ್ತವೆ, ಣ ಎಂದರೆ ಅಜ್ಞಾನದಿಂದ ವಿಮುಕ್ತಿ ಪ್ರಾಪ್ತಿ ಎಂದು ಗ್ರಹಿಸಬೇಕು.

# ಕಣ್ಣು ತೆರುಸುವ ಮಕ್ಕಳು

– ಎ.ಆರ್. ರಘುರಾಮ
9916138436




ಮಕ್ಕಳು ದೇವರ ಸಮಾನ ಎನ್ನುತ್ತಾರೆ ಹಿರಿಯರು. ಮನೆಯಲ್ಲಿ ಒಂದು ಮಗು ಇದ್ದರೆ ಸಾವಿರ ಮನರಂಜನೆ ಪುಕ್ಕಟೆಯಾಗಿ ದೊರೆಯುತ್ತದೆ. ಇದರ ಸವಿ ಅನುಭವಿಸದವರಿಗೇ ವೇದ್ಯ. ಮನದಲ್ಲಿ ಅಡಗಿರುವ ಹತ್ತಾರು ವರ್ಷಗಳ ಗಾಯ ಪುಟ್ಟ ಮಕ್ಕಳ ಮಾತಿನ ರಸಾಯನದಿಂದ ಮಾಯುತ್ತದೆ. ಹಿರಿಯರ ಮನಸ್ಸಿನ ಅವಾಂತರ, ಆತಂಕ, ಅನುಮಾನಗಳನ್ನು ಅಳಿಸಿ ಹಾಕುವ ಶಕ್ತಿ ಮಕ್ಕಳಿಗಿದೆ. ಈ ಮೂಲಕವೇ ಅವರು ಹಿರಿಯರ ಕಣ್ಣು ತೆರೆಸುವ ಕಾಯಕವನ್ನೂ ಮಾಡುತ್ತಾರೆ. ಒಮ್ಮೆ ಹೀಗೆಯೇ ಆಯಿತು. ರಸ್ತೆಯಲ್ಲಿ ದಟ್ಟವಾಗಿ ಮಂಜು ಕವಿದಿತ್ತು. ಅದಕ್ಕೆ ರಾತ್ರಿಯ ಕಗ್ಗತ್ತಲು ಇನ್ನಷ್ಟು ಕಠೋರತೆ ತಂದು ಒಡ್ಡಿತ್ತು. ಪ್ರಮುಖ ಮಾರ್ಗವಾಗಿರುವುದರಿಂದ ಅನೇಕ ವಾಹನಗಳು ಒಂದರ ಹಿಂದೆ ಒಂದು ಚಲಿಸುತ್ತಿದ್ದವು.

ಸರ್ವಪಲ್ಲಿ ರಾಧಾಕೃಷ್ಣನ್ ಕೂಡಾ ತಮ್ಮ ಕಾರಿನಲ್ಲಿ ಪ್ರಯಾಣಿಸುತ್ತಿರುವಾಗ ರಸ್ತೆಯ ಬದಿಯಿಂದ ತೂರಿ ಬಂದ ಕಲ್ಲು ಅವರ ಕಾರಿನ ಹಿಂಭಾಗದ ಗಾಜನ್ನು ಛಿದ್ರಗೊಳಿಸಿತು. ಕೂಡಲೇ ಕಾರು ನಿಲ್ಲಿಸಿದರು. ರಸ್ತೆ ಬದಿ ಹುಡುಗನೊಬ್ಬ ಕೈಯಲ್ಲಿ ಕಲ್ಲು ಹಿಡಿದು ನಿಂತಿದ್ದ ಈತನೇ ನನ್ನ ಕಾರಿನ ಗಾಜು ಪುಡಿ ಮಾಡಿದವನು ಯಾರು ಎಂಬುದು ಅವರಿಗೆ ಪಕ್ಕಾ ಆಯಿತು. ಕಾರು ನಿಲ್ಲಿಸಿ ಕೆಳಗಿಳಿದ ಅವರು ತಮಗೆ ಒತ್ತರಿಸಿಬಂದ ಕೋಪವನ್ನು ಪ್ರದರ್ಶನ ಮಾಡುತ್ತಾ ಕಾರಿಗೆ ಕಲ್ಲು ತೂರಿದ ನಿನಗೆ ಸಾಮಾನ್ಯ ಜ್ಞಾನವಿಲ್ಲವೇ ಎಂದು ರೇಗಿದರು. ನಾನು ಒಂದು ತಾಸಿನಿಂದ ನೋಡುತ್ತಲೇ ಇದ್ದೇನೆ. ಈ ರಸ್ತೆಯಲ್ಲಿ ನಡೆದು ಹೋಗುವವರು ಯಾರೂ ಇಲ್ಲ. ಎಲ್ಲರೂ ಕಾರಿನಲ್ಲಿ ವೇಗವಾಗಿ ಹೋಗುವ ಶ್ರೀಮಂತರೇ ಯಾವ ವಾಹನಕ್ಕೆ ಕೈ ಮಾಡಿದರೂ ನಿಲ್ಲಿಸಲಿಲ್ಲ ಎಂದ ಆ ಹುಡುಗ. ಅದಕ್ಕಾಗಿ ಕಲ್ಲು ತೂರಬೇಕೇ? ಏಕೆ ಇಂತಹಾ ಕೃತ್ಯ ಮಾಡಿದೆ ಎಂದು ಸರ್ವಪಲ್ಲಿ ರಾಧಾಕೃಷ್ಣನ್ ಹುಡುಗನಿಗೆ ಗದರಿದರು.

ಸ್ವಲ್ಪ ನಿಧಾನಿಸಿ, ನನ್ನ ಮಾತು ಕೇಳಿ ಎಂದ ಹುಡುಗ. ಅವನ ಸನಿಹದಲ್ಲೇ ಒಬ್ಬ ಹಣ್ಣು ಹಣ್ಣು ಮುದುಕ ಇದ್ದ. ಸಾರ್ ಈ ತಾತ ಗಾಲಿ ಕುರ್ಚಿಯಿಂದ ಕೆಳಗೆ ಬಿದ್ದ. ಪಕ್ಕದ ಕಮರಿಯಲ್ಲಿ ಗಾಲಿ ಕುರ್ಚಿ ಉರುಳಿ ಹೋಯಿತು. ನಾನು ಅವನನ್ನು ರಸ್ತೆ ಬದಿಗೆ ಎತ್ತಿ ಕೂರಿಸಲು ಯತ್ನಿಸಿದೆ. ನನಗೆ ಅಷ್ಟು ಶಕ್ತಿ ಇಲ್ಲ. ಯಾರಾದರೂ ನನ್ನ ಸಹಾಯಕ್ಕೆ ಬಂದು ಈ ಮುದುಕನಿಗೆ ರಕ್ಷಣೆ ಒದಗಿಸುತ್ತಾರೆ ಎಂದು ಯತ್ನಿಸಿದೆ. ಯಾರೂ ಕಾರು ನಿಲ್ಲಿಸಲಿಲ್ಲ ಎಂದ. ರಾಧಾಕೃಷ್ಣನ್‌ಗೆ ಪರಿಸ್ಥಿತಿ ಅರ್ಥವಾಯಿತು. ತಮ್ಮ ಬಳಿ ಇದ್ದ ಟಾರ್ಚ್ ಬಳಸಿ ಕಮರಿಗೆ ಬಿದ್ದಿದ್ದ ಗಾಲಿ ಕುರ್ಚಿ ಹುಡುಕಿ ತಂದರು. ಮುದುಕನನ್ನು ಮೇಲೆತ್ತಿ ಗಾಲಿ ಕುರ್ಚಿಯಲ್ಲಿ ಕೂಡಿಸಿದರು. ಮತ್ತೆ ಆ ಹುಡುಗನಿಗೆ ಹೇಳಿ ದರು. ಮನೆಯ ಹಿರಿಯರನ್ನು ಹೊರಗೆ ಕರೆದುಕೊಂಡು ಬಂದಾಗ ಗಾಲಿ ಕುರ್ಚಿ ಮೇಲೆ ನಿಗಾ ಇರಲಿ ಎಂದರು. ಅದಕ್ಕೆ ಉತ್ತರಿಸಿದ ಬಾಲಕ, ಸಾರ್- ನನಗೂ ಈ ವೃದ್ಧನಿಗೂ ಯಾವುದೇ ಸಂಬಂಧ ಇಲ್ಲ. ನಾನು ಕೇವಲ ಸಹಾಯ ಮಾಡಲು ಯತ್ನಿಸಿದವನು. ನೀವು ನನಗೆ ದೇವರಂತೆ ಬಂದು ನೆರವಾದಿರಿ ಎಂದ. ರಾಧಾಕೃಷ್ಣನ್‌ಗೆ ಕಣ್ಣಲ್ಲಿ ನೀರು ಬಂತು. ಬಾಲಕನ ಮಾತಿನಿಂದ ಅವರು ಮೂಕವಿಸ್ಮಿತರಾದರು.ಮುಂದೆ ಇದೇ ರಾಧಾಕೃಷ್ಣನ್ ಭಾರತದ ರಾಷ್ಟ್ರಪತಿ ಆದರು. ಆಗಲೂ ಗಾಜು ಒಡೆದಿದ್ದ ಕಾರನ್ನೇ ತಮ್ಮ ಬಳಿ ಇರಿಸಿಕೊಂಡಿದ್ದರು. ಯಾರಾದರೂ ಕೇಳಿದಾಗ ಕಾರಿಗೆ ಬಿದ್ದ ಕಲ್ಲಿನೇಟು ನನಗೆ ಮಾನವೀಯತೆಯ, ಸಹಾಯ ಹಸ್ತ ಚಾಚುವ ಪಾಠ ಕಲಿಸಿದೆ ಎಂದು ಹೇಳುತ್ತಿದ್ದರು. ನಮ್ಮ ಪುರಾಣ ಕತೆಗಳಲ್ಲಿ ಬರುವ ಧ್ರುವ, ಪ್ರಹಲ್ಲಾದ, ನಚಿಕೇತರು ಬಾಲಕರಾಗಿದ್ದರೂ ಹಿರಿಯರ ಕಣ್ಣು ತೆರೆಸಿದ ಪರಿ ನಮಗೆ ಗೊತ್ತೇ ಇದೆ. ಹಾಗಾಗಿ ನಾವು ಎಷ್ಟೇ ಹಿರಿಯರಾದರೂ, ಅನುಭವಿಗಳಾದರೂ ಮಕ್ಕಳ ಮುಗ್ಧತೆ, ಸಹಜತೆ, ನಿರ್ವ್ಯಾಜ್ಯ ಪ್ರೀತಿ, ಮೋಸ-ವಂಚನೆ ಇಲ್ಲದ ಪ್ರಾಮಾಣಿಕ ಹೃದಯವಂತಿಕೆಯನ್ನು ನಮ್ಮದಾಗಿಸಿಕೊಳ್ಳಬೇಕು. ನಾವು ಆರಾಧಿಸುವ ಭಗವಂತನೂ ಒಲಿಯುವುದು ಇಂತಹಾ ನಿರ್ಮಲವಾದ ಪ್ರೀತಿಗೆ ಮಾತ್ರ.ಅದಕ್ಕಾಗಿಯೇ ಹಿರಿಯ ಕವಿ .ದ.ರಾ. ಬೇಂದ್ರ ಅವರು ಮಗು ವನ್ನು ಕುರಿತು 'ನೀನು ಅತ್ತರೆ ಮುತ್ತಿನ ಮಳೆ, ನೀನು ನಕ್ಕರೆ ಬೆಳಕಿನ ಬೆಳೆ ಎಂದಿದ್ದಾರೆ. ''ಚೈಲ್ಡ್ ಈಸ್ ದ ಫಾದರ್ ಆಫ್ ಮ್ಯಾನ್''- ಮಗು ಮಾನವನ ತಂದೆ. ಮಕ್ಕಳಿಂದಲೂ ಕಲಿಯೋಣ, ಮಕ್ಕಳಾಗಿ ನಲಿಯೋಣ.




ಈ ಗೊಂಬೆಗೆ ಚುಕ್ಕಿಯನ್ನು ಸೇರಿಸಿ ಹಾಗೂ ಬಣ್ಣವನ್ನು ತುಂಬಿರಿ.....






ಈ ಗೊಂಬೆಯನ್ನು ನೋಡಿ ಬಣ್ಣವನ್ನು ತುಂಬಿರಿ.






1.ಕ್ಷೀರ ಸಾಗರದಲ್ಲಿ ಉದ್ಭವಿಸಿದ್ದು

2. ಪ್ರಹ್ಲದನು ಪಟ್ಟ ಕಷ್ಟಗಳು

3. ಅಕ್ಷಯ ತೃತೀಯಕ್ಕೆ ಸಂಬಧಿಸಿದ ಚಿತ್ರಗಳು

ಮೇಲೆ ಹೇಳಿರುವ ಹಬ್ಬ ಹರಿದಿನಗಳಿಗೆ ಸಂಬಂಧಿಸಿದ ಚಿತ್ರದ ಹತ್ತಿರವಿರುವ ರೌಡ್‌ನಲ್ಲಿ ಆ ಸಂಖ್ಯೆಯನ್ನು ಹಾಕಿ

## ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....



ಬ್ಬ ನ್ಯಾ ಮೂ ನೆ ವ ಗೆ ಯ


ಆ ನಿ ಯ ರ ಯ ರ ಇ

ಉತ್ತರಗಳು:
ಇಬ್ಬರ ನ್ಯಾಯ ಮೂರನೆಯವನಿಗೆ ಆಯ



| | | | | | | | | | | |
|---|---|---|---|---|---|---|---|---|---|---|
| | | 1 | 2 | 6 | 7 | 11 | 8 | 6 | 7 | 9 |
| | | 5 | 3 | 4 | 8 | 12 | 5 | 9 | 14 | 12 |
| 11 | 10 | 7 | 8 | 5 | 6 | 7 | 10 | 15 | 7 | 9 |
| 8 | 9 | 12 | 5 | 16 | 10 | 8 | 9 | 11 | 8 | 13 |
| 13 | 7 | 10 | 11 | 13 | 12 | 11 | 10 | 15 | 19 | 18 |
| 15 | 14 | 16 | 17 | 14 | 15 | 20 | 19 | 20 | | |
| 17 | 18 | 8 | 19 | 18 | 16 | 17 | 18 | 17 | | |

ರಾಮಾನುಜರು ಆ ಮುದುಕಿ ಯನ್ನು ಯಾವ ದಾರಿಯಿಂದ ಪುಷ್ಪಕ ವಿಮಾನವನ್ನು ಸೇರಿಸುತ್ತಾರೆ






1. ಭೂರಾಮ್‌ದೇವ್
2. ಹೊಸ ರಾಯ್‌ಪುರ
3. ಬಿಲಾಯಿ
4.ಲಕ್ಷ್ಮಣ ದೇವಸ್ಥಾನ

తిరుమల తిరుపతి దేవస్థానములు

# ಮಕ್ಕಳೇ ಇದು ನಿಮಗಾಗಿ

## ರಸಪ್ರಶ್ನೆಗಳು

01.ಐಶ್ವರ್ಯ ದೇವತೆ ಯಾರು? ..................................................

02ಸಾತನೂರಿನಲ್ಲಿರುವ ದೇವಾಲಯಗಳಲ್ಲಿ ಪ್ರಮುಖ ದೇವಾಲಯ ಯಾವುದು? ..................................................

03.ಶ್ರೀರಾಮಾನುಜಚಾರ್ಯರ ಗುರು ಯಾರು? ..................................................

04.ಪ್ರಹ್ಲಾದನನ್ನು ರಕ್ಷಿಸಿದವರು ಯಾರು? ..................................................

05.ಆದಿಶಂಕರರು ಯಾವ ವಯಸ್ಸಿನಲ್ಲಿ ಪರಮಪದಿಸಿದರು? ..................................................

06.ನರ್ಮದಾ ನದಿಯು ಯಾವ ಪರ್ವತದ ಸಾಲಿನಲ್ಲಿದೆ? ..................................................

07.ಆಲಯಗಳ ಆಡಳಿತ ಯಾರಿಗೆ ಹಸ್ತಾಂತರವಾಯಿತು? ..................................................

08.ಗಂಗಮ್ಮನವರ ಜಾತ್ರೆ ಎಷ್ಟು ದಿನಗಳು ನಡೆಯುತ್ತದೆ? ..................................................

09.ನಮ್ಮಾಳ್ವಾರ್ ಎಷ್ಟು ವರ್ಷಗಳ ಕಾಲ ಅನ್ನಹಾರವಿಲ್ಲದೆ ಇದ್ದರು? ..................................................

10.ಎಷ್ಟು ತೀರ್ಥಗಳು ಸ್ವಾಮಿ ಪುಷ್ಕರಣಿಗೆ ಬಂದು ಸೇರುತ್ತವೆ? ..................................................

11.ಎಷ್ಟನೇ ಪಾಶುರದಲ್ಲಿ ವೇಂಗಡ ಎಂದು ಸಂಬೋಧಿಸಿದ್ದಾರೆ? ..................................................

12. ಎರಡನೆಯ ತೀರ್ಥ ಯಾವುದು? ..................................................

13. ಹುಡುಗನು ಏನನ್ನು ಕೈಯಲ್ಲಿ ಹಿಡಿದು ಕೊಂಡಿದ್ದನು? ..................................................

14.ವೆಂಗಮಾಂಬ ಎಲ್ಲಿ ಯೋಗ ಸಾಧನೆ ಮಾಡಿದರು? ..................................................

15.ತೇಜಪತ್ರೆಯನ್ನು ಆಂಗ್ಲಭಾಷೆಯಲ್ಲಿ ಏನೆಂದು ಕರೆಯುತ್ತಾರೆ? ..................................................

22

ಕ್ವಿಜ್

## ಸೂಚನೆಗಳು

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳುಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ಉತ್ತರಗಳನ್ನು ನಮಗೆ ಕಳುಹಿಸುವ ಕೊನೆಯ ದಿನಾಂಕ 25.05.2024
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**


ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪತ್ರಿಕೆ
ತಿ.ತಿ.ದೇ. ಪ್ರೆಸ್ ಕಾಂಪೌಂಡ್
ಕೆ.ಟಿ. ರಸ್ತೆ ತಿರುಪತಿ : 517 507
ಆಂಧ್ರ ಪ್ರದೇಶ್

**ಹೆಸರು** :
**ಚಂದಾ ಸಂಖ್ಯೆ** :
**ತಂದೆಯ ಹೆಸರು** :
**ತಾಯಿಯ ಹೆಸರು:**

**ವಿಳಾಸ :**

**ದೂರವಾಣಿ ಸಂಖ್ಯೆ:**






ಈ ಚಕ್ರದಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಬಣ್ಣದಲ್ಲಿರುವ ಬಾಕ್ಸ್ ನಲ್ಲಿಯೇ ಬರೆಯಿರಿ



1) ಹಿರಣ್ಯಕಶಿಪು 2) ವಿಷ್ಣು 3) ಹೋಲಿಕ 4)ನಾರಾಯಣ ನಾರಾಯಣ 5) ನರಸಿಂಹ ಸ್ವಾಮಿ
6) ಹಿರಣ್ಯಕಶಿಪು 7)ಲಕ್ಷ್ಮೀ 8) ಪ್ರಹ್ಲಾದ



ಇಲ್ಲಿರುವ ಚಿತ್ರಗಳಲ್ಲಿ ಒಂದು ಚಿತ್ರ ತಪ್ಪಾಗಿದೆ
ಅದು ಯಾವ ಚಿತ್ರವೆಂದು ಕಂಡು ಹಿಡಿಯಿರಿ
ಮಕ್ಕಳೇ ನೋಡೋಣ

ಗಡಿಯಾರ

## ಒಗ್ಗಟ್ಟಿನಲ್ಲಿ ಬಲವಿದೆ



ಮಕ್ಕಳೇ!
ನಮ್ಮಹಾಗೆ ಛಲದಿಂದ ನೀವು
ಯಾವ ಕೆಲಸವನ್ನು
ಮಾಡಿದರೂ ಅದು
ನಿಶ್ಚಿಯವಾಗಿ
ಜಯವಾಗುತ್ತದೆ.



ಚಿತ್ರಕಥೆ

# ಭಕ್ತರನ್ನು ನೋಯಿಸಿದರೆ

ಕಥೆ : ತೆಲುಗು ಮೂಲ : ಡಾ॥ ಕೆ.ರವಿಚಂದ್ರನ್
ಅನುವಾದ : ಆರ್.ಕೆ.ವಿ.
ಚಿತ್ರಗಳು : ಟಿ. ಶಿವಾಜಿ




ಅಕ್ಕರಾಮ ಶಿಷ್ಯನು ಮನೆಯಿಂದ ಬಂದ
ಅಯ್ಯೋ ! ನಮ್ಮ ಮನೆಯಲ್ಲಿದ್ದ ದನ ಕರುಗಳೆಲ್ಲಾ ಸತ್ತು ಹೋಗಿವೆ.ಮನೆಯಲ್ಲಿ ಎಲ್ಲರಿಗೂ ವಾಂತಿ, ಬೇಧಿ ಕಾಣಿಸಿಕೊಂಡಿದೆ. ಇಡೀ ಮನೆ ಸ್ಮಶಾನದಂತಿದೆ.
ಅಮ್ಮಾ ತಾಯಿ ನನ್ನ ತಪ್ಪುಗಳನ್ನು ಕ್ಷಮಿಸು... ನನ್ನನ್ನು ಕರುಣಿಸಿ ಕಾಪಾಡು. ನಿನ್ನ ಬಗ್ಗೆ ತಿಳಿಯದೆ ನಿನ್ನನ್ನು ಅವಮಾನಿಸಬೇಕೆಂದು ಕೊಂಡೆ. ಆದರೆ ನಾನು ವಿಚಲಿತನಾದೆ. ನಿನ್ನ ಪಾದಗಳೇ ನನಗೆ ದಿಕ್ಕು...
ಈಗಿನಿಂದಲೇ ಬುದ್ಧಿವಂತರಾಗಿರಿ. ಭಕ್ತರಿಗೆ ತೊಂದರೆ ಕೊಟ್ಟರೆ ದೇವರು ಕ್ಷಮಿಸುವುದಿಲ್ಲ. ಭಾಗವತಪಚಾರ ಮಹಾಪಾಪ., ಭಕ್ತರು ತಮ್ಮ ಪಾಪಗಳನ್ನು ಕಳೆದುಕೊಳ್ಳಲು ಇಲ್ಲಿಗೆ ಬರುತ್ತಾರೆ. ಅವರನ್ನು ನೋಯಿಸಿ ಅವರ ಪಾಪ ಕರ್ಮವನ್ನು ಏಕೆ ಹಂಚಿಕೊಳ್ಳುತ್ತೀರಾ? ನೀನು ತಪ್ಪು ಮಾಡಿದೆ. ಇನ್ನಾದರೂ ಬದಲಾಗಿ....
ಸ್ವಾಮಿ ವೆಂಕಟೇಶಾ!
ವೆಂಗಮಾಂಬ ಎಂದು ಸ್ವಾಮಿ ಕರೆದರು.
ಸ್ವಾಮಿ ! ನಾನು ಇನ್ನು ಇಲ್ಲಿ ಇರಲಾರೆ. ನಾನು ಪ್ರಶಾಂತವಾಗಿ ತಪಸ್ಸು ಮಾಡಿಕೊಳ್ಳಬೇಕು. ಇಲ್ಲಿ ಧ್ಯಾನ ಮತ್ತು ಭಕ್ತಿಗೆ ತೊಂದರೆಯಾಗುತ್ತಿದೆ. ಯಾವುದಾದರೂ ಒಂದು ಪ್ರಶಾಂತ ಸ್ಥಳವನ್ನು ತಿಳಿಸಿಕೊಡಿ...
ವೆಂಗಮಾಂಬ ! ತುಂಬುರ ತೀರ್ಥಕ್ಕೆ ಹೋಗಿ ಯೋಗ ಸಾಧನೆ ಮಾಡು. ಅಲ್ಲಿಗೆ ಯಾರೂ ಬರುವುದಿಲ್ಲ.
ಧನ್ಯವಾದಗಳು ಸ್ವಾಮಿ ! ಅನಾಥರಕ್ಷಕ ಗೋವಿಂದಾ...
ಲೋಕಃ ಸಮಸ್ತಾಃ ಸುಖಿನೋ ಭವಂತು!

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)



## ಚಂದಾ ನಮೂನೆ ಪತ್ರ

ಹೆಸರು ಮತ್ತು ವಿಳಾಸ :

(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ /ಆಜೀವಚಂದಾ : ☐ ರೂ.240/- ☐ ರೂ.2,400/-( 12 ವರ್ಷ),

ವಿದೇಶಿ ವಾರ್ಷಿಕ ಚಂದಾ ☐ ರೂ. 1030/-

ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./

ಅಟ್‌ಪರ್ ಚೆಕ್ಕು ಮಾತ್ರವೇ :

ಸ್ಥಳ :

ದಿನಾಂಕ: ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.240/-, ಆಜೀವಚಂದಾ (12 ವರ್ಷ) ರೂ.2,400/- ಗಳು ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯ ಬೇಕು. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು. ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ -''ಪ್ರಧಾನ ಸಂಪಾಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ. ಟಿ.ರೋಡ್ಡು, ತಿರುಪತಿ - 517 507''.

ಸಪ್ತಗಿರಿ ಚಂದಾ ವಿವರಣೆಗಾಗಿ ಫೋನ್‌ನಂಬರ್:0877- 2264359,0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು

## ಟೋಲ್ ಫ್ರಿ ನಂಬರ್

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಕಾಗಿ ತಿರುಮಲೆ ತಿರುಪತಿ ದೇವಸ್ಥಾನದವರು **ಟೋಲ್ ಫ್ರಿ ನಂಬರ್** ಅನ್ನು ಏರ್ಪಡಿಸಿದ್ದಾರೆ.

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪರ್ಕಿಸಬಹುದು.

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

**ಟೋಲ್ ಫ್ರಿ ನಂಬರ್**

**18004254141**

0877-2233333,

0877-2277777

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.







## ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

**2024 ಮೇ 21 ರಿಂದ 29 ರ ವರೆಗೆ**

**21-05-2024 ಮಂಗಳವಾರ**

ಹಗಲು: ಧ್ವಜಾರೋಹಣ ರಾತ್ರಿ: ದೊಡ್ಡಶೇಷವಾಹನ

**22-05-2024 ಬುಧವಾರ**

ಹಗಲು: ಚಿಕ್ಕಶೇಷವಾಹನ ರಾತ್ರಿ: ಹಂಸವಾಹನ

**23-05-2024 ಗುರುವಾರ**

ಹಗಲು : ಸಿಂಹವಾಹನ ರಾತ್ರಿ: ಮುತ್ತಿನಚಪ್ಪರವಾಹನ

**24-05-2024 ಶುಕ್ರವಾರ**

ಹಗಲು: ಕಲ್ಪವೃಕ್ಷವಾಹನ ರಾತ್ರಿ: ಸರ್ವಭೂಪಾಲವಾಹನ

**25-05-2024 ಶನಿವಾರ**

ಹಗಲು: ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ

ರಾತ್ರಿ: ಗರುಡವಾಹನ

**26-05-2024 ಭಾನುವಾರ**

ಹಗಲು: ಹನುಮದ್ವಾಹನ ಸಾ: ವಸಂತೋತ್ಸವ

ರಾತ್ರಿ: ಗಜವಾಹನ

**27-05-2024 ಸೋಮವಾರ**

ಹಗಲು: ಸೂರ್ಯಪ್ರಭವಾಹನ ರಾತ್ರಿ: ಚಂದ್ರಪ್ರಭವಾಹನ

**28-05-2024 ಮಂಗಳವಾರ**

ಹಗಲು: ರಥೋತ್ಸವ ರಾತ್ರಿ: ಅಶ್ವವಾಹನ

**29-05-2024 ಬುಧವಾರ**

ಹಗಲು: ಚಕ್ರಸ್ನಾನ ರಾತ್ರಿ: ಧ್ವಜಾವರೋಹಣ




## ಶ್ರೀ ಭೂಸಮೇತ ನಾರಾಪುರ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

**2024 ಮೇ 21 ರಿಂದ 29 ರ ವರೆಗೆ**

**21-05-2024 ಮಂಗಳವಾರ**

ಹಗಲು: ಧ್ವಜಾರೋಹಣ ರಾತ್ರಿ: ದೊಡ್ಡಶೇಷವಾಹನ

**22-05-2024 ಬುಧವಾರ**

ಹಗಲು: ಚಿಕ್ಕಶೇಷವಾಹನ ರಾತ್ರಿ: ಹಂಸವಾಹನ

**23-05-2024 ಗುರುವಾರ**

ಹಗಲು : ಮುತ್ತಿನಚಪ್ಪರವಾಹನ ರಾತ್ರಿ: ಸಿಂಹವಾಹನ

**24-05-2024 ಶುಕ್ರವಾರ**

ಹಗಲು: ಕಲ್ಪವೃಕ್ಷವಾಹನ ರಾತ್ರಿ: ಹನುಮದ್ವಾಹನ

**25-05-2024 ಶನಿವಾರ**

ಹಗಲು: ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ

ರಾತ್ರಿ: ಗರುಡವಾಹನ

**26-05-2024 ಭಾನುವಾರ**

ಹಗಲು: ಸರ್ವಭೂಪಾಲವಾಹನ ರಾತ್ರಿ: ಗಜವಾಹನ

**27-05-2024 ಸೋಮವಾರ**

ಹಗಲು: ರಥೋತ್ಸವ ರಾತ್ರಿ: ಅಶ್ವವಾಹನ

**28-05-2024 ಮಂಗಳವಾರ**

ಹಗಲು: ಸೂರ್ಯಪ್ರಭವಾಹನ ರಾತ್ರಿ: ಚಂದ್ರಪ್ರಭವಾಹನ

**29-05-2024 ಬುಧವಾರ**

ಹಗಲು: ಚಕ್ರಸ್ನಾನ ರಾತ್ರಿ: ಧ್ವಜಾವರೋಹಣ

SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams
Printing on 25-04–2024 and Posting at Tirupati RMS.Regd. with the Registrar of Newspapers for India under
RNI. No. APKAN/2021/80589. Postal Regd.No.TRP/156/2024-2026 "Licenced toPost Without Prepayment
No. PMGK/RNP/WPP-04(6)/ 2024-2026" Posting on 5th of Every Month.

